ಗಾಂಧೀಜಿ

ಮತ್ತು

ಮಹಿಳೆಯರು

गांधी और महिला

ಮಧು ಕಿಶ್ವರ್

ಗಾಂಧೀಜಿ ಮತ್ತು ಮಹಿಳೆಯರು

ಮಧು ಕಿಶ್ವರ್

ಅನುವಾದ

ಮಹಾಬಲೇಶ್ವರರಾವ್

GANDHIJI MATTU MAHILEYARU

Kannada Translation by

Sri Mahableshwara Rao of the

original English Script

GANDHI AND WOMEN by

Madhu Kishwar.

Year Of Publication; 1993

ಪ್ರಕಟಣಾ ವರ್ಷ : ೧೯೯೩

ಬೆಲೆ : ೧೨/ ರೂ

ಪುಟಗಳು :೯+೧೧೩

ಮುದ್ರಕರು : ಜನಪದ ಸೇವಾ ಟ್ರಸ್ಟ್ ಮುದ್ರಣಾಲಯ
ಮೇಲುಕೋಟೆ

ಪ್ರಕಾಶಕರು : ಪ್ರಕಾಶನ ವಿಭಾಗ
ಜನಪದ ಸೇವಾ ಟ್ರಸ್ಟ್
ಮೇಲುಕೋಟೆ ೫೭೧ ೪೩೧

ಮುನ್ನುಡಿ

ಜಗತ್ತಿನ ಎಲ್ಲ ದೇಶಗಳಲ್ಲೂ ಮಾನವ ಸಮಾಜದ ಕಟ್ಟು ಕಟ್ಟಲೆಗಳು, ನ್ಯಾಯ ಸಂಹಿತೆಗಳು, ಶಾಸ್ತ್ರ ವಿಧಿಗಳು ಹಾಗೂ ಆಚಾರ ವಿಚಾರಗಳು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಗೆ ಪೂರಕವಾಗಿವೆ. ಎಲ್ಲ ಸಮಾಜಗಳಲ್ಲೂ ಪುರುಷನೇ ಸರ್ವಮಾನ್ಯ ಮತ್ತು ಸರ್ವಶ್ರೇಷ್ಠ ಎಂಬ ನಂಬಿಕೆಗಳನ್ನೂ ಸಂಪ್ರದಾಯಗಳನ್ನೂ ಜಾಹೀರಗೊಳಿಸುವ ಧರ್ಮಗ್ರಂಥಗಳಿಗೇನೂ ಕೊರತೆ ಇಲ್ಲ. ಇದರಿಂದಾಗಿ ಮಾನವ ಸಮಾಜದ ಅರ್ಧ ಭಾಗದಷ್ಟಿರುವ ಮಹಿಳೆಯರು ಅಸಮಾನತೆ ಮತ್ತು ಶೋಷಣೆಗೆ ತುತ್ತಾಗಿ ತತ್ತರಿಸುತ್ತಿರುವುದು ವಿಷಾದಕರ ಸಂಗತಿ. ಯಾವ ಸಮಾಜದಲ್ಲಿ ಮಹಿಳೆಯರಿಗೆ ಆರ್ಥಿಕ, ರಾಜಕೀಯ, ಸಾಮಾಜಿಕ ಹಕ್ಕುಗಳಲ್ಲಿ ಸಮಾನತೆ ಇರುವುದಿಲ್ಲವೋ ಆ ಸಮಾಜ ಒಂದು ರೀತಿಯ ಪಾರ್ಶ್ವವಾಯು ಪೀಡಿತವಾದ ಸಮಾಜವಾಗಿರುತ್ತದೆ. ಮಹಿಳೆಯರ ಆತ್ಮಬಲ, ಕಾರ್ಯ ದಕ್ಷತೆ ಮುಂತಾದ ಕ್ರಿಯಾತ್ಮಕ ಗುಣಶೀಲಗಳನ್ನು ಸಮಾಜದ ಹಾಗೂ ದೇಶದ ಸಮಷ್ಟಿಯ ಬೆಳವಣಿಗೆಗೆ ರೂಢಿಸಲ್ಪಡದೆ ಮಾನವತೆಗೆ ಅಪಾರ ನಷ್ಟ ಸಂಭವಿಸುತ್ತದೆ.

ರಾಜಕೀಯ, ಆರ್ಥಿಕ, ಸಾಮಾಜಿಕ ಹಕ್ಕುಗಳ ಬಗ್ಗೆ ಇರುವ ಅಸಮಾನತೆ ಹಾಗೂ ಸರ್ಕಾರಿ ಕಾನೂನುಗಳು ತಂದೊಡ್ಡಿರುವ ಎಡರು ತೊಡರುಗಳ ವಿರುದ್ಧವಾಗಿ ಮಹಿಳೆಯರು ವಿವಿಧ ದೇಶಗಳಲ್ಲಿ ಹೋರಾಟಗಳನ್ನು ನಡೆಸುತ್ತಲೇ ಬಂದಿದ್ದಾರೆ. ರಾಜಕೀಯವಾಗಿ ಗಂಡಸರೊಂದಿಗೆ ಸಮಾನವಾಗಿ ಓಟಿನ ಅಧಿಕಾರ ಪಡೆಯಲು ಪಾಶ್ಚಾತ್ಯ ದೇಶಗಳಲ್ಲಿ ಮಹಿಳೆಯರು ಅನೇಕ ದಶಕಗಳ ಕಾಲ ನೇರ ಆದರೆ ಸಾತ್ವಿಕ ಪ್ರತಿಭಟನೆಯ ಚಳವಳಿಗಳಲ್ಲಿ ತೊಡಗಬೇಕಾದುದು ಅನಿ

ವಾರ್ಯವಾಯಿತು. ಈ ಹೋರಾಟದ ಫಲವಾಗಿ ಪ್ರಜಾತಾಂತ್ರಿಕ ದೇಶಗಳಲ್ಲಿ ಮಹಿಳೆಯರಿಗೆ ಸಮಾನ ಓಟಿನ ಅಧಿಕಾರ ದೊರೆತಿದ್ದರೂ ರಾಜಕೀಯ ಆಡಳಿತ ಕ್ಷೇತ್ರಗಳಲ್ಲಿ ಅವರಿಗೆ ಲಭ್ಯವಾಗುತ್ತಿರುವ ಪಾಲು ಅತಿ ಕಡಿಮೆಯೇ ಆಗಿದೆ. ಇನ್ನು ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳ ವಿಷಯದಲ್ಲಿ ಹಾಗೂ ಕಾನೂನಿನ ಸಂಬಂಧವಾಗಿ ಸಂವಿಧಾನಾತ್ಮಕವಾಗಿ ಕಾಣಬರುವ ಸಮಾನತೆ ಬಹು ಸಂಖ್ಯಾತ ಮಹಿಳೆಯರಿಗೆ ಕನ್ನಡಿಯೊಳಗಿನ ಗಂಟೇ ಸರಿ. ಏಕೆಂದರೆ ಈ ಹಕ್ಕುಗಳ ಬಗ್ಗೆ ಕಾನೂನಿನ ರಚನೆ, ಅರ್ಥವಿವರಣೆ, ನ್ಯಾಯಾಂಗದಲ್ಲಿ ಪರಾಮರ್ಶೆ ಮತ್ತು ಅವುಗಳನ್ನು ಜಾರಿ ಮಾಡುವ ಕೆಲಸ ಇವೆಲ್ಲವೂ ಆಗುತ್ತಿರುವುದು ಸರ್ವಮಾನ್ಯರಾದ "ಪುರುಷೋತ್ತಮ" ರಿಂದ ತಾನೆ! ಭಾರತೀಯ ಸಮಾಜ, ಅದರಲ್ಲೂ ಹಿಂದೂ ಸಮಾಜ, ಹೇಳಿಕೇಳಿ ಶ್ರೇಣೀಕೃತ ಸಮಾಜ. ಈ ಸಮಾಜದಲ್ಲಿ ಮಹಿಳಾ ಸಮುದಾಯಕ್ಕೆ ಕಾನೂನು ಕಟ್ಟಳೆಗಳಿಂದ, ಗೊಡ್ಡು ಸಂಪ್ರದಾಯಗಳಿಂದ, ಸ್ವಾರ್ಥಪರ ಪುರುಷನ ವಿವೇಚನಾ ರಹಿತ ವರ್ತನೆಗಳಿಂದ ಅಪಾರ ಅನ್ಯಾಯವಾಗಿದೆ. ಸತೀ ಪದ್ಧತಿ, ಬಾಲವಿವಾಹ, ವಿಧವೆಯರ ಮೇಲೆ ಹೊರಿಸಿಕೊಂಡು ಬಂದಿರುವ ಅಪಮಾನಕರ ಕಟ್ಟಳೆಗಳು, ವರದಕ್ಷಿಣೆ ಪಿಡುಗು, ಭ್ರೂಣಹತ್ಯೆ, ಆರ್ಥಿಕ ಹಕ್ಕುಗಳ ಚ್ಯುತಿ ಇತ್ಯಾದಿ ನಮ್ಮ ಮಹಿಳಾ ಸಮೂಹದ ಮೇಲೆ ಅನವರತವಾಗಿ ನಡೆಸಿಕೊಂಡು ಬಂದಿರುವ ಅನಾಗರೀಕ ಪರಂಪರೆಗಳು. ಇವುಗಳ ವಿರುದ್ಧ ಕೆಲವು ಖ್ಯಾತ ಸಮಾಜ ಸೇವಕರೂ ಸುಧಾರಕರೂ ಕಳೆದ ಶತಮಾನದಲ್ಲಿ ಸುಧಾರಣೆಗಳ ಆಂದೋಲನವನ್ನೇ ಆರಂಭಿಸಿದರು. ಅವರುಗಳಲ್ಲಿ ಮುಖ್ಯವಾಗಿ ರಾಜಾರಾಮ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ರ್‍ಯಾನಡೆ ಖ್ಯಾತನಾಮರು. ರಾಷ್ಟ್ರದ ಪುನರುಜ್ಜೀವನ ಹಾಗೂ ನವೋದಯದ ಸುಧಾರಣಾ ಅಲೆಗಳಲ್ಲಿ ಸ್ತ್ರೀಯರ ಸ್ಥಾನಮಾನಗಳನ್ನು ಉತ್ತಮಪಡಿಸುವ ಕೆಲಸ ನಡೆಯಿತು. ಸತೀ ಪದ್ಧತಿ, ಬಹು

ಪತಿತ್ವ, ಬಾಲ ವಿವಾಹ ಇತ್ಯಾದಿ ಅನಿಷ್ಟ ಪದ್ಧತಿಗಳ ವಿರುದ್ಧ ಚಳವಳಿ ಆರಂಭವಾಯಿತು. ಬಾಲಕಿಯರ ವಿದ್ಯಾಭ್ಯಾಸಕ್ಕೆ ಒತ್ತು ನೀಡುವ ಕೆಲಸವೂ ಈ ಸುಧಾರಕರಿಂದ ನಡೆಯಿತು. ಈ ಸುಧಾರಕರ ಕೆಲಸಗಳೆಲ್ಲವೂ ಪ್ರಗತಿಪರ ಸುಧಾರಣೆಗಳ ಬಗ್ಗೆ ಜನಮಾನಸವನ್ನು ರೂಪಿಸುವತ್ತ ಹಾಗೂ ಸ್ತ್ರೀಯರ ಮೇಲ್ಮೆಗೆ ಆಶ್ರಯಧಾಮಗಳನ್ನೂ ಶಿಕ್ಷಣಾವಕಾಶಗಳನ್ನೂ ಒದಗಿಸುವ ಪ್ರಯತ್ನಕ್ಕೆ ಸೀಮಿತವಾಗಿದ್ದಿತು. ಆದರೆ ಮಹಿಳಾ ಸಮೂಹವನ್ನು ಸಂಘಟಿಸಿ ಅವರ ಹಕ್ಕುಗಳ ಸಾಧನೆಗಷ್ಟೇ ಅಲ್ಲದೆ ರಾಷ್ಟ್ರೀಯ ಸ್ವಾತಂತ್ರ್ಯ ಸಾಧನೆಯೇ ಮುಂತಾದ ಹಿರಿಯ ಧ್ಯೇಯಗಳಿಗೆ ಸ್ತ್ರೀ ಶಕ್ತಿಯನ್ನು ರೂಢಿಸಿಕೊಳ್ಳುವ ಮಹತ್ಕಾರ್ಯ ಮಾಡಿದ್ದು ಮಹಾತ್ಮಾ ಗಾಂಧೀಜಿಯವರೆಂದರೆ ಅತಿಶಯೋಕ್ತಿ ಆಗುವುದಿಲ್ಲ. "ಸ್ತ್ರೀ ಅಬಲೆಯಲ್ಲ, ಸಬಲೆ" ಎಂದು ಸಾರಿ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿ "ಪ್ರೀತಿ, ಸಂಯಮ, ಕಷ್ಟ ಸಹಿಷ್ಣುತೆ"ಯ ಪ್ರತೀಕವಾಗಿರುವ ಸ್ತ್ರೀ ಶಕ್ತಿಯನ್ನು ರಾಷ್ಟ್ರದ ವಿವೇಚನಾ ಚಳವಳಿಗೆ ಸಜ್ಜುಗೊಳಿಸಿದ್ದು ಗಾಂಧೀಜಿಯವರ ಹಿರಿಮೆ. ಸ್ತ್ರೀ ಶಕ್ತಿಯನ್ನು ಇಡೀ ಜನ ಸಮುದಾಯದ ಹಿತ ರಕ್ಷಣೆಯ ಹೋರಾಟಕ್ಕೆ ಸಂಘಟಿಸುವ ಕಾರ್ಯವನ್ನು ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಆರಂಭಿಸಿ ಬಿಳಿಯರ ಸರ್ಕಾರದ ವರ್ಣದ್ವೇಷ ನೀತಿ ವಿರುದ್ಧ ನಡೆಸಿದ ಅಹಿಂಸಾತ್ಮಕ ಸತ್ಯಾಗ್ರಹ ಹೋರಾಟಗಳಲ್ಲಿ ಅದ್ಭುತ ಯಶಸ್ಸನ್ನು ಗಳಿಸಿದರು. ದಕ್ಷಿಣ ಆಫ್ರಿಕಾದ 'ನ್ಯಾಯಾಲಯ'ವು ಅಲ್ಲಿ ನೆಲಸಿದ್ದ ಹಿಂದೂ ಮತ್ತಿತರ ಜನಾಂಗಗಳ ವೈವಾಹಿಕ ಸ್ಥಾನಮಾನವನ್ನು ಅಸಿಂಧುವೆಂದು ಘೋಷಿಸಿದಾಗ ಗಾಂಧೀಜಿ ನಡೆಸಿದ ಸತ್ಯಾಗ್ರಹ ಹೋರಾಟದಲ್ಲಿ ಮಹಿಳೆಯರನ್ನೇ ಮುಂಚೂಣಿಯ ನಾಯಕಿಯರನ್ನಾಗಿ ಮಾಡಿದ್ದರು. ಅದರ ಪರಿಣಾಮವಾಗಿ ಅಲ್ಲಿನ ಭಾರತೀಯರು ತಮ್ಮ ಕೆಲವು ಹಕ್ಕುಗಳನ್ನು ಪಡೆದುಕೊಂಡದ್ದೇ ಅಲ್ಲದೇ ಸ್ತ್ರೀ ಶಕ್ತಿಯ ವಿರಾಟ ಸ್ವರೂಪದ ಪ್ರದರ್ಶನವೂ ಆಯಿತು.

ಮಹಾತ್ಮರು ಭಾರತಕ್ಕೆ ಮರಳಿ ಬಂದಮೇಲೆ ರಾಷ್ಟ್ರದ

ಸ್ವಾತಂತ್ರ್ಯಕ್ಕಾಗಿ ನಡೆಸಿದ ಎಲ್ಲ ಅಹಿಂಸಾತ್ಮಕ ಹೋರಾಟಗಳಲ್ಲೂ ಮಹಿಳೆಯರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸಿದರು. ವಿದೇಶಿ ವಸ್ತ್ರಗಳ ಬಹಿಷ್ಕಾರ, ಮದ್ಯಪಾನದ ಅಂಗಡಿಗಳಿಗೆ ಜನರು ಹೋಗದಂತೆ ತಡೆಯುವ ಚಳವಳಿ ಇತ್ಯಾದಿ ಕಾರ್ಯಕ್ರಮಗಳಿಗೆ ಮಹಿಳೆಯರನ್ನೇ ಗಾಂಧೀಜಿ ಯವರು ನಿಯುಕ್ತಿಗೊಳಿಸುತ್ತಿದ್ದರು. ಸ್ತ್ರೀಯರ ಮತ್ತು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೂ ತಮ್ಮ ೧೮ ಅಂಶಗಳ ರಚನಾತ್ಮಕ ಕಾರ್ಯಕ್ರಮದಲ್ಲಿ ವಿಶೇಷ ಆದ್ಯತೆ ಕೊಟ್ಟಿದ್ದರು. ಮಹಾತ್ಮ ಗಾಂಧೀಜಿ ಅವರ ಪತ್ನಿ ಕಸ್ತೂರಬಾ ಗಾಂಧೀ ಅವರ ಸ್ಮಾರಕಾರ್ಥ ಏರ್ಪಟ್ಟ 'ಕಸ್ತೂರಬಾ ಗಾಂಧೀ ಸ್ಮಾರಕ ಟ್ರಸ್ಟ್'ನ ಕಾರ್ಯಕ್ರಮ ಗಳೆಲ್ಲ ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಸರ್ವತೋ ಮುಖ ಅಭಿವೃದ್ಧಿಗೆ ಕೆಲಸ ಮಾಡಬೇಕೆಂಬ ಮಹದೋದ್ದೇಶ್ಯದ ಕಾರ್ಯಕ್ರಮವನ್ನು ಗಾಂಧೀಜಿ ಮುಂದಿಟ್ಟರು. ಸ್ತ್ರೀಯರ ಉದ್ಧಾರ ಸ್ತ್ರೀಯರಿಂದಲೇ ಆಗಬೇಕೆಂಬುದು ಗಾಂಧೀಜಿಯವರ ಅಚಲ ನಂಬಿಕೆ ಯಾಗಿದ್ದಿತು. ಆದುದರಿಂದಲೇ ಕಸ್ತೂರಬಾ ಗಾಂಧೀ ಸ್ಮಾರಕ ಟ್ರಸ್ಟಿನ ಕೆಲಸ ಕಾರ್ಯಗಳ ಪೂರ್ಣಜವಾಬ್ದಾರಿಯನ್ನು ನುರಿತ ಮಹಿಳಾ ಕಾರ್ಯಕರ್ತರಿಗೇ ವಹಿಸಿಕೊಟ್ಟಿದ್ದರು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾರತಿಯ ಮಹಿಳೆಯರು ಪುರುಷ ರೊಂದಿಗೆ ಸಮವಾಗಿ ಪಾಲುಗೊಂಡದ್ದರಿಂದಲೂ ರಾಜಕೀಯ ಮತ್ತು ಸಾಮಾಜಿಕ ಮೂಲಭೂತ ಹಕ್ಕುಗಳು ಯಾವ ತಾರತಮ್ಯವೂ ಇಲ್ಲದೆ ಮಹಿಳೆಯರಿಗೂ ದೊರಕಬೇಕೆಂದು ಗಾಂಧೀಜಿ ನೇತೃತ್ವದಲ್ಲಿ ಹೋರಾಟ ನಡೆಸುತ್ತಿದ್ದ ಕಾಂಗ್ರೆಸ್ ಮಹಾಸಂಸ್ಥೆಯ ತನ್ನ ಪ್ರಣಾಳಿಕೆ ಗಳಲ್ಲಿ ಸ್ಪಷ್ಟ ಪಡಿಸಿದ್ದುದರಿಂದಲೂ ಸ್ವತಂತ್ರ ಭಾರತದ ಸಂವಿಧಾನ ದಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡುವ ವಿಧಿಗಳು ಸೇರಿಸಲ್ಪಟ್ಟವು. ಇದರಿಂದಾಗಿ ಭಾರತೀಯ ಮಹಿಳೆಯರು ತಮ್ಮ ಸಂವಿಧಾನಾತ್ಮಕ ಮೂಲಭೂತ ಹಕ್ಕುಗಳಿಗಾಗಿ ಪ್ರತ್ಯೇಕವಾಗಿ

ಹೋರಾಟ ಮಾಡುವ ಆವಶ್ಯಕತೆ ಬೀಳಲಿಲ್ಲ.

ಮಾನವ ಸಮೂಹದ ನವನಿರ್ಮಾಣಕಾರ್ಯದಲ್ಲಿ ಮಹಿಳೆಯರ ಪಾತ್ರ ಅಮೂಲ್ಯವಾಗಿರುತ್ತದೆಂದು ಗಾಂಧೀಜಿ ವಿಶ್ವಾಸವಿಟ್ಟಿದ್ದರೂ "ಹೊಸ ಸಮಾಜ ಶೋಷಣರಹಿತವಾದ ಅಹಿಂಸಾತ್ಮಕ ಸಮಾಜವಾಗಿರಬೇಕು; ಅಹಿಂಸಾತ್ಮಕ ಸಮಾಜದ ವ್ಯವಸ್ಥೆಯಲ್ಲಿ ಮಹಿಳೆಯರೇ ಭವಿಷ್ಯದ ನಿರ್ಮಾಪಕರಾಗಬೇಕು" ಎಂದು ಗಾಂಧೀಜಿ ಆಶಿಸಿದ್ದರು. ಭಾರತದ ಮಹಿಳೆಯರು ರಾಜಕೀಯ ಅಧಿಕಾರದಲ್ಲಿ ಸಮಾನವಾಗಿ ಪಾಲುಗೊಳ್ಳಬೇಕೆಂದು ಬಯಸಿದ್ದ ಬಾಪೂ ಸ್ವತಂತ್ರ ಭಾರತದ ರಾಷ್ಟ್ರಪತಿ ಸ್ಥಾನಕ್ಕೆ ಹರಿಜನ ಮಹಿಳೆಯ ಆಯ್ಕೆ ಆಗಬೇಕು ಎಂದು ಆಗ್ರಹಪಡಿಸಿದ್ದರು,

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳೆಯರು ಬಹಳ ಮಟ್ಟಿಗೆ ಇನ್ನೂ ಹಿಂದುಳಿದಿರುವುದು, ಅಜ್ಞಾನ ಮತ್ತು ಶೋಷಣೆ ಹಾಗೂ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದು ಅತ್ಯಂತ ದುರಂತಕಾರಿ ಸಂಗತಿ. ಇದಕ್ಕೆ ಪರಿಹಾರವೆಂದರೆ ಗಾಂಧೀ ಮಾರ್ಗದಲ್ಲಿ ಮಹಿಳೆಯರು ಸಂಘಟಿತರಾಗಿ, ಹೋರಾಟ ನಡೆಸಿ ತಮ್ಮ ಸ್ವಂತಿಕೆಯನ್ನೂ ಸ್ಥಾನಮಾನವನ್ನೂ ಘನತೆಯನ್ನೂ ಸಂರಕ್ಷಿಸಿಕೊಳ್ಳುವುದೇ ಆಗಿದೆ. ಆ ದೃಷ್ಟಿಯಲ್ಲಿ ಮಹಿಳೆಯರ ಬಗ್ಗೆ ಗಾಂಧೀಜಿಯವರ ವಿಚಾರಗಳು ತುಂಬಾ ಪ್ರಸ್ತುತವಾಗಿವೆ.

ಈ ಪುಸ್ತಕದ ಲೇಖಕರಾದ ಶ್ರೀಮತಿ ಮಧು ಕಿಶ್ವರ್ ಅವರು ಮಹಿಳೆಯರ ಬಗ್ಗೆ ಮಹಾತ್ಮಾ ಗಾಂಧೀಜಿಯವರ ವಿಚಾರಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಿ ಅವುಗಳ ಪ್ರಸ್ತುತೆ ಹಾಗೂ ಪ್ರಾಮುಖ್ಯತೆಯನ್ನು ವಿಶ್ಲೇಷಿಸಿದ್ದಾರೆ. ಇದೊಂದು ಅತ್ಯಮೂಲ್ಯ ಗ್ರಂಥವಾಗಿದೆ.

ಇಂಗ್ಲೀಷಿನಲ್ಲಿ ಪ್ರಕಟವಾಗಿರುವ ಈ ಪುಸ್ತಕವನ್ನು ಅನುವಾದಕರಾದ ಶ್ರೀ ಮಹಾಬಲೇಶ್ವರರಾವ್ ಅವರು ಅತ್ಯಂತ ಹೃದಯಂಗಮವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಮೂಲ ಪಠ್ಯಕ್ಕೆ ಸ್ವಲ್ಪವೂ

ಚ್ಯುತಿಬರದಂತೆ ಒಂದು ಸ್ವತಂತ್ರ ಕೃತಿಯೇ ಎಂಬ ನೈಜ ರೀತಿಯಲ್ಲಿ, ಸುಂದರವಾದ ಶೈಲಿಯಲ್ಲಿ ಪುಸ್ತಕದ ಅನುವಾದ ಮಾಡಿದ್ದಾರೆ. ಭಾಷಾಂತರಕಾರರು ಅಭಿನಂದನಾರ್ಹರು.

ಗಾಂಧೀಜಿ ವಿಚಾರ ಪ್ರಚಾರ ಮತ್ತು ಗಾಂಧೀ ಪ್ರಣೀತ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವೇ ಸಂಪೂರ್ಣವಾಗಿ ಸಮರ್ಪಣ ಮಾಡಿಕೊಂಡಿರುವ ಜನಪದ ಸೇವಾ ಟ್ರಸ್ಟಿನವರು ಸುಂದರವಾಗಿ ಮುದ್ರಿಸಿ ಪ್ರಕಾಶನ ಮಾಡಿದ್ದಾರೆ.

ಕನ್ನಡ ಬಂಧು ಭಗಿನಿಯರು ಈ ಪುಸ್ತಕ ಓದಿ ಸ್ಫೂರ್ತಿಪಡೆದು ಗಾಂಧೀ ಮಾರ್ಗದಲ್ಲಿ ಮಹಿಳೆಯರ ಉನ್ನತ ಸಾಧನೆಗೆ ಪ್ರೇರಣೆ ಪಡೆಯಲೆಂದು ಆಶಿಸುತ್ತೇನೆ.

– ಬಿ.ಆರ್. ಪ್ರಾಣೇಶರಾವ್

ಪರಿವಿಡಿ

ವಾಚಕರಲ್ಲಿ ....

ಗಾಂಧೀ ಮತ್ತು ಮಹಿಳೆಯರು – ಈ ಗ್ರಂಥವನ್ನು ಕರ್ನಾಟಕದ ವಿಚಾರವಂತ ಓದುಗರ ಮುಂದೆ ಮಂಡಿಸಲು ಸಂತೋಷ ವೆನಿಸುತ್ತದೆ.

ಲೇಖಕಿಯರು ಮಧು ಕಿಶ್ವರ್. ಮಹಿಳಾ ವಿಮೋಚನಾ ಚಳುವಳಿಯಲ್ಲಿ ಅಗ್ರಪಂಕ್ತಿಯಲ್ಲಿರುವಂಥವರು, ಸ್ವತಂತ್ರ ವಿಚಾರಕ್ಕಾಗಿ ಪ್ರಸಿದ್ಧರು. ಅವರು ತಮ್ಮ ದೃಷ್ಟಿಕೋನದಿಂದ ಮಹಿಳೆಯರ ಬಗೆಗಿನ ಮಹಾತ್ಮಾ ಗಾಂಧೀಜಿಯವರ ಅಭಿಪ್ರಾಯಗಳನ್ನು ಒರೆ ಹಚ್ಚಿದ್ದಾರೆ, ಯಾವುದೇ ಮುಲಾಜಿಲ್ಲದೆ ಹೇಳಿದ್ದಾರೆ.

ಇನ್ನು ಅನುವಾದಕರಾದ ಶ್ರೀ ಮಹಾಬಲೇಶ್ವರರಾವ್ ಶಿಕ್ಷಣ ಕ್ಷೇತ್ರದಲ್ಲಿ ಅನುಭವಸ್ಥರು. ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಮೇಲೆ ಪ್ರಭುತ್ವವುಳ್ಳವರು. ಅನುವಾದ ಮೂಲ ಲೇಖಕರಿಗೂ ಮತ್ತು ಅನುವಾದಕರಿಗೂ ತಾದಾತ್ಮ್ಯವನ್ನು ತಂದಿದೆ.

ಪುಸ್ತಕಕ್ಕೆ ಮುನ್ನುಡಿ ಬರೆದ ಗಾಂಧೀ ವಿಚಾರದ ಹೆಸರಾಂತ ಭಾಷ್ಯಕಾರರಾದ ಪ್ರೊ. ಬಿ. ಆರ್. ಪ್ರಾಣೇಶರಾವ್ ಈ ಕೃತಿಯನ್ನು ಬಹಳವಾಗಿ ಮೆಚ್ಚಿದ್ದಾರೆ ಮತ್ತು ಸದಭಿರುಚಿಯ ಓದುಗರಿಗೆ ಇದನ್ನು ಶಿಫಾರಸು ಮಾಡಿದ್ದಾರೆ.

ಜನಪದ ಸೇವಾ ಟ್ರಸ್ಟಿನ ಪ್ರಕಾಶನ ವಿಭಾಗದ ಅಡಿಯಲ್ಲಿ ಈ ಪುಸ್ತಕವನ್ನು ಪ್ರಕಟಿಸಲು ಅನುಮತಿ ಕೊಟ್ಟ ಲೇಖಕಿಯರಿಗೂ ಅನುವಾದಕರಿಗೂ ಹಾಗೂ ಮುನ್ನುಡಿಯ ಲೇಖಕರಿಗೂ ಟ್ರಸ್ಟ್ ಆಭಾರಿಯಾಗಿದೆ.

ಸಹೃದಯಿ ವಾಚಕರು ಈ ಕೃತಿಯನ್ನು ಮೆಚ್ಚುತ್ತಾರೆಂದು ಆಶಿಸುತ್ತೇವೆ.

– ಪ್ರಕಾಶಕರು

೧

ಗಾಂಧೀಜಿಯವರ ದೃಷ್ಟಿಯಲ್ಲಿ ಮಹಿಳೆಯರ ಶೋಷಣೆಯ ಸ್ವರೂಪ

'ಸಂಪ್ರದಾಯದ ಹೊಳೆಯಲ್ಲಿ ಈಜುವುದು ಒಳ್ಳೆಯದು, ಆದರೆ ಅದರಲ್ಲಿ ಮುಳುಗುವುದು ಆತ್ಮಘಾತಕ' – ಗಾಂಧೀಜಿಯವರ ಈ ಮಾತು ಒಂದು ರೀತಿಯಲ್ಲಿ ಅವರ ಒಟ್ಟು ಸಾಮಾಜಿಕ, ರಾಜಕೀಯ ಸಿದ್ಧಾಂತ ಹಾಗೂ ಸಾಮೂಹಿಕ ಕಾರ್ಯತಂತ್ರಕ್ಕೆ ದ್ಯೋತಕ. ಸಮಕಾಲೀನವಾದ ಸಾಮಾಜಿಕ, ರಾಜಕೀಯ ಸಂದೇಶವನ್ನು ಸಾರಲು ಅವರು ಬಳಸುತ್ತಿದ್ದ ಸಾಂಪ್ರದಾಯಿಕ ಭಾರತೀಯ ಸಂಕೇತಗಳಲ್ಲಿ ಇದು ಹೆಚ್ಚು ನಿಚ್ಚಳವಾಗಿದೆ. ದಮನಕ್ಕೊಳಗಾದ ಭಾರತೀಯ ಮಹಿಳೆಯರಿಗೆ ಸೀತೆ, ದಮಯಂತಿ ಹಾಗೂ ದ್ರೌಪದಿ – ಈ ಮೂವರು ಆದರ್ಶ ನಾರಿಯರೇ ಸ್ಫೂರ್ತಿಯಾಗಬೇಕೆಂದು ಗಾಂಧೀಯವರು ಪದೇಪದೇ ಹೇಳುತ್ತಿದ್ದರು. ಆದರೆ ಗಾಂಧೀಯವರ ಸೀತೆ ಅಥವಾ ದ್ರೌಪದಿ ಎಲ್ಲರೂ ಒಪ್ಪಿಕೊಂಡಿರುವ ನಿರ್ಜೀವವಾದ, ದಾಸ್ಯದ ಪ್ರತೀಕಗಳಲ್ಲ; ಗುಣಸಂಪನ್ನರಾದ ಕ್ರಿಯಾಶೀಲ ಪ್ರತಿಮೆಗಳು. ಕೆಲವೊಮ್ಮೆ ಗಾಂಧೀಯವರು ಸಂಕೇತಗಳಿಗೆ ಅವು ಹೊರಲಾರದ ಅರ್ಥವನ್ನು ಹೊರಿಸುತ್ತಿದ್ದರು. ಉದಾಹರಣೆಗೆ, ಸಾಮ್ರಾಜ್ಯಶಾಹಿ ವಿರೋಧದ ಸಂದೇಶ ಸಾರಲು ಸೀತೆಯನ್ನು 'ಸ್ವದೇಶಿ'ಯ ಸಂಕೇತವಾಗಿ ಬಳಸಿದರು. "ಸೀತೆಯು ಭಾರತದಲ್ಲಿ ಸಿದ್ಧವಾದ ಉಡುಪನ್ನು ಅಥವಾ ಮನೆಯಲ್ಲಿ ನೇಯ್ದ ಬಟ್ಟೆಯನ್ನು ಧರಿಸುತ್ತಿದ್ದಳು. ಆದ್ದರಿಂದಲೇ ಆಕೆ ತನ್ನ ದೇಹ ಮತ್ತು ಹೃದಯವನ್ನು ಪವಿತ್ರವಾಗಿಟ್ಟುಕೊಂಡಿದ್ದಳು"; "ಸೀತೆಯು ರಾಮನ

ದಾಸಿಯಲ್ಲ"; ಹೆಚ್ಚೇಕೆ, "ಆಕೆಯ ಮನಸ್ಸಿಗೆ ವಿರುದ್ಧವಾಗಿ ದೇಹ ಸುಖ ಪಡೆಯಲು ಪತಿ ಬಯಸಿದರೆ 'ಸಾಧ್ಯವಿಲ್ಲ' ಎಂದು ಹೇಳುವ ಶಕ್ತಿ ಸೀತೆಗೆ ಇತ್ತೆಂದು" ಬಣ್ಣಿಸಲಾಗಿದೆ. ಗಾಂಧೀಯವರ ಸೀತೆ 'ಪಾಪದ ಪ್ರಾಣಿ'ಯಲ್ಲ. ರಾವಣನ ಮಹಾನ್ ದೇಹಬಲ ಕೂಡ ಸೀತೆಯ ಉನ್ನತ ನೈತಿಕ ಸ್ಥೈರ್ಯದ ಎದುರು ಕುಂದಿತು. ಗಾಂಧೀಯವರ ದೃಷ್ಟಿಯಲ್ಲಿ ಭಾರತೀಯ ಮಹಿಳೆಯರು ಅನುಸರಿಸಬೇಕಾದ ಆದರ್ಶ ಇದು : ಮಹಿಳೆಯರು ತಮ್ಮನ್ನು ತಾವು ಅಬಲೆಯರೆಂದು ಭಾವಿಸದೆ "ತನ್ನ ಪ್ರಬಲ ಇಚ್ಛಾಶಕ್ತಿಗೆ ಅನುಗುಣವಾಗಿ ಬಲಶಾಲಿ ಭೀಮನನ್ನು ಬಗ್ಗಿಸಿದ ಚೈತನ್ಯದಾಯಿ ಸ್ವಾತಂತ್ರ್ಯದ ಸಂಕೇತವಾದ" ದ್ರೌಪದಿ ಎಂದು ಭಾವಿಸಬೇಕು. ಸೀತೆ "ಸೌಕುಮಾರ್ಯದ ಸಾಕ್ಷಾತ್ಕಾರ......... ಮೃದುವಾದ ಪುಷ್ಪ". ಬಲ ಹಾಗೂ ದೃಢ ಮನೋಭಾವದಲ್ಲಿ ದ್ರೌಪದಿಯಾದರೋ 'ಮಹಾನ್ ದೇವದಾರು'; ಧೈರ್ಯ, ಸ್ಥೈರ್ಯ ಹಾಗೂ ನಿರ್ಭೀತಿಯ ಸಂಕೇತ. ಸೀತೆಯಿಂದ ದ್ರೌಪದಿಯವರೆಗಿನ ಸಂಕ್ರಮಣದಲ್ಲಿ ಗಾಂಧೀಯವರಿಗೆ ಯಾವ ವೈರುಧ್ಯಗಳೂ ಕಾಣಲಿಲ್ಲ.

ಮಹಿಳೆಯರು ಸ್ವತಂತ್ರರಾಗಬೇಕಾದರೆ ಅವರು ನಿರ್ಭೀತರಾಗಿರಬೇಕು. ಮಹಿಳೆಯರ ದೈಹಿಕ ದೌರ್ಬಲ್ಯಕ್ಕಿಂತಲೂ ಸಮಾಜ ಅವರ ಮೇಲೆ ವಿಧಿಸಿರುವ ಸಾಂಸ್ಕೃತಿಕ ಅಸಹಾಯಕತೆ, ಮಾನಸಿಕ ಭಯ ಇವೇ ಮುಂತಾದವು ಅವರ ಶಕ್ತಿ ಉಡುಗಿಸಿವೆ ಎಂದು ಗಾಂಧೀಯವರು ಮನಗಂಡಿದ್ದರು. ಶೌರ್ಯ ಸಾಹಸಗಳು ಗಂಡಸರ ಗುತ್ತಿಗೆಯಲ್ಲ ಎಂದು ಅವರು ಮಹಿಳೆಯರಿಗೆ ಪದೇಪದೇ ಹೇಳುತ್ತಿದ್ದರು. ಎಲ್ಲ ಮಹಿಳೆಯರು ಝಾನ್ಸಿರಾಣಿಯರಾಗಲು ಸಾಧ್ಯವಿಲ್ಲ: ಆದರೆ ಅವರು ಸೀತೆಯ ಆದರ್ಶವನ್ನು ಅನುಸರಿಸಬಹುದು. "ಸೀತೆಯ ನಿದರ್ಶನವನ್ನು ಕಟ್ಟುಕಥೆಯೆಂದು ಯಾರೂ ನಿರಾಕರಿಸಬೇಡಿ...........ಇಂಥ ಅತ್ಯುನ್ನತವಾದ ಶೌರ್ಯವನ್ನು ಭಾರತೀಯ

ನಾರೀ ಲೋಕ ಆತ್ಮಸಾತ್ ಮಾಡಿಕೊಳ್ಳಬೇಕೆಂದು" ಅವರು ಬಯಸಿದರು. ಪತಿಯ ಜೊತೆಗೆ ಅಥವಾ ಚಿತೆಯ ಮೇಲೆ ಇದ್ದಾಗ ಮಾತ್ರವೆ ತನಗೆ ಸುಖವೆಂದು ಭಾವಿಸುವಂತೆ ಮಹಿಳೆಯರನ್ನು ನಮ್ಮಲ್ಲಿ ಬೆಳೆಸಲಾಗಿದೆ. ಭಾರತೀಯ ಮಹಿಳೆಯರು ತಾವು ಅಸಹಾಯಕರೆಂದು ಭಾವಿಸುವುದಕ್ಕಿಂತ ಶಸ್ತ್ರಾಸ್ತ್ರಗಳ ನಿರ್ವಹಣೆಯಲ್ಲಿ ತರಬೇತಿ ಪಡೆಯಬೇಕೆಂದು ಅವರು ನಿರೀಕ್ಷಿಸಿದ್ದರು. ಆದರೆ ಗಾಂಧೀಯವರ ದೃಷ್ಟಿಯಲ್ಲಿ ಶಸ್ತ್ರಗಳು ದೌರ್ಬಲ್ಯದ ಸಂಕೇತ. ಸ್ತ್ರೀಯ ನಿಜವಾದ ಶಕ್ತಿ ಆಕೆಯ 'ಪಾವಿತ್ರ್ಯ ಹಾಗೂ ಪಾತಿವ್ರತ್ಯ'ದ ಪ್ರಜ್ಞೆ. 'ಥಳಥಳಿಸುವ ಈ ಪಾವಿತ್ರ್ಯವು' ಪಾಶವೀ ಸ್ವಭಾವದ ಗಂಡಸರನ್ನು ನಿರಾಯುಧರನ್ನಾಗಿಸಬಹುದು. ಸ್ತ್ರೀಯ ಶೀಲವೇ ಆಕೆಯನ್ನು ರಕ್ಷಿಸುತ್ತದೆ. ಏನೇ ಆಗಲಿ, ಆಕೆ ತನ್ನ ಶೀಲವನ್ನು ಕಳೆದುಕೊಳ್ಳುವ ಬದಲು ಪ್ರಾಣ ಕಳೆದುಕೊಳ್ಳುವುದು ಮೇಲು. ಇದು ಪುರುಷನ ಆಕ್ರಮಣದ ವಿರುದ್ಧ ಮಹಿಳೆ ತನ್ನನ್ನು ರಕ್ಷಿಸಿಕೊಳ್ಳಬೇಕಾದ ರೀತಿಯನ್ನು ಕುರಿತು ಗಾಂಧೀಯವರ ನಿಖರ ಉಪದೇಶ. ಸ್ವತಃ ತನಗೇ ಈ ಬಗೆಯ ಎದೆಗಾರಿಕೆ ಅಸಾಧ್ಯವೆಂದು ಅವರು ಒಪ್ಪಿಕೊಳ್ಳುತ್ತಾರೆ. ಆದರೆ ನಿಜಕ್ಕೂ ಪತಿವ್ರತೆಯಾದ ಮತ್ತು ಸಾಹಸಿಯಾದ ನಾರಿಯೊಬ್ಬಳಿಗೆ ಪಾತಿವ್ರತ್ಯದ ಬಲಿಪೀಠದಲ್ಲಿ ತನ್ನ ಪ್ರಾಣ ಅರ್ಪಿಸಲು ಕಷ್ಟವಾಗದೆಂದು ಅವರು ಖಚಿತವಾಗಿ ಭಾವಿಸಿದ್ದರು. ಮಹಿಳೆಯರು ದ್ರೌಪದಿಯಂತೆ 'ಆತ್ಮನಿರ್ಭರ'ರಾಗಿರಬೇಕು. "ದ್ರೌಪದಿಯನ್ನು ಯಾರು ತಾನೆ ಪರಾವಲಂಬಿ ಎಂದು ಕರೆಯುತ್ತಾರೆ? ಪಾಂಡವರು ಅವಳನ್ನು ರಕ್ಷಿಸಲು ವಿಫಲರಾದಾಗ ಆಕೆ ಕೃಷ್ಣನಿಗೆ ಮೊರೆಹೋಗಿ ತನ್ನನ್ನು ತಾನು ರಕ್ಷಿಸಿಕೊಳ್ಳಲಿಲ್ಲವೆ?" ಇಲ್ಲಿ ಕೃಷ್ಣನು ಭೌತಿಕ ಅಸ್ತಿತ್ವವುಳ್ಳ ಮನುಷ್ಯನನ್ನು ಪ್ರತಿನಿಧಿಸುವುದಿಲ್ಲ. ಭಗವದ್ಗೀತೆಯಲ್ಲಿ ಹೇಳಿರುವಂತೆ ಆತ ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದ ಧ್ವನಿ ; ಬಯಸಿದ ಹಾದಿಯಲ್ಲಿ ನಡೆಯಲು ಬೇಕಾದ ದೃಢ ಇಚ್ಛೆ.

ಸಾಂದರ್ಭಿಕವಾಗಿ ಹೆಚ್ಚು ಪ್ರಸ್ತುತವೆನಿಸುವ ಝಾನ್ಸಿರಾಣಿಯ ಸಂಕೇತವನ್ನು ಗಾಂಧೀಯವರು ಮತ್ತೆ ಮತ್ತೆ ಬದಿಗೊತ್ತಿ ಸೀತೆ ದ್ರೌಪದಿಯರ ಗುಣಗಳ ಸಮ್ಮಿಶ್ರಿತ ಸಂಕೇತವನ್ನು ಹೆಚ್ಚು ಇಷ್ಟಪಟ್ಟ ರೆಂಬುದು ಮಹತ್ವಪೂರ್ಣವಾದ ಅಂಶ. ಏಕೆಂದರೆ ಮಹಿಳೆಯ ವೈಯಕ್ತಿಕ ಶಕ್ತಿ ಹಾಗೂ ಅದನ್ನು ವೃದ್ಧಿಸುವ ವಿಧಾನಗಳಲ್ಲಿ ಅವರು ಸಮಸ್ಯೆಗೆ ಪರಿಹಾರ ಹುಡುಕ ಬಯಸಲಿಲ್ಲ. ಬದಲಿಗೆ ಮಹಿಳೆಯರ ಅಧ್ಯಾತ್ಮಿಕ ಹಾಗೂ ನೈತಿಕ ಸ್ಥೈರ್ಯದ ಕಕ್ಷೆಯಲ್ಲಿ ಅವರು ಉತ್ತರ ಬಯಸಿದರು. ಗಾಂಧೀಯವರು ಶೌರ್ಯ ಸಾಹಸಗಳ ಪ್ರದರ್ಶನಕ್ಕೆ ಹೆಚ್ಚು ಒತ್ತು ಕೊಡಲಿಲ್ಲ. ಬದಲಿಗೆ ಅವರು ಹೆಣ್ಣಿನ ಧೈರ್ಯದ ಒಂದು ನಿರ್ದಿಷ್ಟ ನಮೂನೆಯನ್ನು ಆಯ್ಕೆ ಮಾಡಿಕೊಂಡರು. ಮಹಿಳೆ ಯರೇ ಸಮಾಜದಲ್ಲಿ ಉನ್ನತ ಮಟ್ಟದ ನೈತಿಕ ಶಕ್ತಿಯ ದ್ಯೋತಕ ಎಂಬ ಅವರ ದೃಷ್ಟಿಯನ್ನು ಈ ಆಯ್ಕೆಯು ಬಿಂಬಿಸುತ್ತದೆ. ಮಹಿಳೆಯರು ತಮ್ಮ ಹಿತಾಸಕ್ತಿಗಳ ರಕ್ಷಣೆಗಾಗಿ ಮತ್ತು ರಾಜಕೀಯ ಅಧಿಕಾರ ಸಂಪಾದನೆಗಾಗಿ ಬಲಪ್ರಯೋಗ ಹಾಗೂ ಶೌರ್ಯ ಪ್ರದರ್ಶನ ಮಾಡುವುದಕ್ಕಿಂತ ಆತ್ಮಬಲಿದಾನ ಮಾಡುವುದು ಮತ್ತು ಯಾತನೆ ಯನ್ನು ಅನುಭವಿಸುವುದು ಮೇಲು ಎಂಬುದನ್ನು ಅವರ ಈ ದೃಷ್ಟಿಯು ಒತ್ತಿ ಹೇಳುತ್ತದೆ.

ಸಾಮಾಜಿಕ ನೀತಿ–ನಿಯಮಗಳನ್ನು ಮಹಿಳೆಯರ ಮೇಲೆ ಬಲಾತ್ಕಾರವಾಗಿ ಹೇರದೆ "ಪರಸ್ಪರ ಸಮಾಲೋಚನೆ ಮತ್ತು ಸಹಕಾರ" ದಿಂದ ರೂಪಿಸಬೇಕು. "ಎಂದಾದರೊಮ್ಮೆ ತಾನು ಜೀತ ಮುಕ್ತನಾಗಬಹುದು ಎಂದು ಯೋಚಿಸಲಾರದ ಹಳೆಯ ಕಾಲದ ಗುಲಾಮ" ರಂತೆ ಹೆಂಗಸರನ್ನು ಗಂಡಸರು ನಿರ್ಲಕ್ಷಿಸಿದ್ದರು. "ಶಾಸನ ಗಳನ್ನು ಬಹುತೇಕ ಗಂಡಸರೇ ರೂಪಿಸುತ್ತಿದ್ದರು. ಈ ಸ್ವಪ್ರೋಲ ಕಲ್ಪಿತ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಗಂಡಸು ನ್ಯಾಯ ಪರನಾಗಿ, ವಿವೇಚನಾಶೀಲನಾಗಿ ವರ್ತಿಸುತ್ತಿಲ್ಲ". ಆದ್ದರಿಂದ

ಸ್ತ್ರೀಯರಿಗೆ ನ್ಯಾಯ ದೊರೆಯಬೇಕಾದರೆ ಶಾಸ್ತ್ರ ಗ್ರಂಥಗಳನ್ನು ಪುನರ್ ಪರಿಷ್ಕರಿಸಬೇಕು. ಮಹಿಳೆಯರ ಘನತೆ, ಗೌರವ, ಹಕ್ಕು ಬಾಧ್ಯತೆಗಳಿಗೆ ವಿರುದ್ಧವಾಗಿರುವ ಎಲ್ಲ ಧರ್ಮಗ್ರಂಥಗಳನ್ನು ನಿಷೇಧಿಸಬೇಕು. ಈ ಕೆಲಸಕ್ಕಾಗಿ ಭಾರತೀಯ ನಾರಿಯರು "ದೃಢಚಿತ್ತನೆ, ಆತ್ಮನಿಗ್ರಹ ಮತ್ತು ಪರಿಶುದ್ಧಿಯುಳ್ಳ" ಹೊಸ ಸೀತೆ, ದ್ರೌಪದಿ ಹಾಗೂ ದಮಯಂತಿಯರನ್ನು ಸೃಷ್ಟಿಸಬೇಕು. ಈ ಸೀತೆ, ದ್ರೌಪದಿ, ದಮಯಂತಿಯರ "ಮಾತುಗಳಿಗೆ ಶಾಸ್ತ್ರ ಗ್ರಂಥಗಳಷ್ಟೇ ಮಹತ್ತರ ದೊರೆಯಲಿದೆ ಮತ್ತು ಹಿಂದಿನ ಸೀತೆ, ದ್ರೌಪದಿ, ದಮಯಂತಿಯರಿಗೆ ದೊರೆತಷ್ಟೇ ಗೌರವ ಆಧುನಿಕ ನಾರಿಯರಿಗೂ ದೊರೆಯಲಿದೆ.

"ಮೈತ್ರೇಯಿ, ಗಾರ್ಗಿ, ಸಾವಿತ್ರಿ ಮುಂತಾದ ಪ್ರಾಚೀನ ಭಾರತೀಯ ಸ್ತ್ರೀಯರನ್ನು ರೂಪಿಸಿದ ಕೆಚ್ಚು-ನೆಚ್ಚು, ಸ್ವತಂತ್ರ ಚಿಂತನಶಕ್ತಿ, ಉತ್ಸಾಹ ಮುಂತಾದ ಸಾತ್ವಿಕ ಗುಣಗಳನ್ನು ಬಹುತೇಕ ಭಾರತೀಯ ಮಹಿಳೆಯರು 'ಸಾಮಾಜಿಕ ದಬ್ಬಾಳಿಕೆಯ ಪರಿಣಾಮವಾಗಿ' ಕಳೆದು ಕೊಂಡಿದ್ದಾರೆ. ಆದ್ದರಿಂದಲೇ ಮಹಿಳಾ ವಿಮೋಚನೆಯ ಗುರಿಯನ್ನು ಕಾಂಗ್ರೆಸ್ಸಿಗರ ಮುಂದಿಡಲಾಯಿತು. "ಕಾಂಗ್ರೆಸ್ಸಿಗರು ತಂತಮ್ಮ ಮನೆಗಳಿಂದಲೆ ಆರಂಭ ಮಾಡಲಿ". ಅವರು ತಮ್ಮ ತಾಯಂದಿರು, ಹೆಂಡಂದಿರು ಹಾಗೂ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಈ ಕೆಲಸವನ್ನು ಆರಂಭಿಸತಕ್ಕದ್ದು. "ಸ್ವಾತಂತ್ರ್ಯ ಪ್ರತಿಯೊಂದು ರಾಷ್ಟ್ರದ ಮತ್ತು ವ್ಯಕ್ತಿಯ ಜನ್ಮಸಿದ್ಧ ಹಕ್ಕು" ಎಂದು ಅವರು ನಂಬುವುದಾದರೆ ಮತ್ತು ಅದನ್ನು ಸಾಧಿಸಲು ದೃಢ ಸಂಕಲ್ಪ ಮಾಡಿರುವುದಾದರೆ ಸರ್ವಾಂಗೀಣವೂ ಆರೋಗ್ಯಕರವೂ ಆದ ಅಭಿವೃದ್ಧಿಯನ್ನು ನಿರ್ಬಂಧಿಸುವ ದುಷ್ಟ ಸಂಪ್ರದಾಯಗಳಿಂದ ತಮ್ಮ ಹೆಂಗಸರನ್ನು "ಮೊದಲು ಅವರು ಬಿಡುಗಡೆಗೊಳಿಸಬೇಕು". ಬೇರೆಲ್ಲದಕ್ಕಿಂತಲೂ ರಾಜಕೀಯ ಹೋರಾಟಕ್ಕೆ ಹೆಚ್ಚಿನ ಮಹತ್ವ ಸಲ್ಲಿಸಬೇಕೆಂದು ವಾದಿಸಿದವರಿಗೆ ಗಾಂಧೀ ಹೀಗೆ ಉತ್ತರ

ನೀಡಿದರು, "ಸ್ವರಾಜ್ಯ ಸಂಪಾದನೆಯಾಗುವ ವರೆಗೂ ಸಮಾಜ ಸುಧಾರಣೆಯ ಗುರಿಯನ್ನು ಮುಂದೂಡಬೇಕೆಂದರೆ ಸ್ವರಾಜ್ಯದ ಅರ್ಥವನ್ನೇ ತಿಳಿದಿಲ್ಲ ಎಂದಂತಾಯಿತು".

ನಿಡುಗಾಲದಿಂದಲೂ ಮಹಿಳೆಯರನ್ನು ಮನೆಗಳಲ್ಲಿ, ಮನೆಯ ಹೊರಗಿನ ಪುಟ್ಟ ಅಂಗಳದಲ್ಲಿ ನಿರ್ಬಂಧಿಸಿರುವುದರಿಂದಾಗಿ ಅವರ ವ್ಯಕ್ತಿತ್ವದ ಮೇಲೆ ಮಾರಕ ಪರಿಣಾಮ ಉಂಟಾಗಿದೆ. ಅವರ ಲೋಕ ದೃಷ್ಟಿ ಸೀಮಿತಗೊಂಡಿದೆ. ಆಸಕ್ತಿಗಳು ಕ್ಷುಲ್ಲಕ ವಿಷಯಗಳಿಗಷ್ಟೇ ಸೀಮಿತಗೊಂಡಿವೆ. ವಿವಿಧ ಸಭೆಗಳಲ್ಲಿ ಮಹಿಳೆಯರನ್ನು ಉದ್ದೇಶಿಸಿ ಮಾತಾನಾಡಿದ ಗಾಂಧೀಯವರು, "ಸ್ತ್ರೀಯರು ಕೆಲವೊಮ್ಮೆ ಅಸಹನೀಯವಾದ ಗದ್ದಲ ಮಾಡುತ್ತಾರೆ, ತತ್‌ಕ್ಷಣದ ಬದುಕಿನಾಚೆಗಿನ ದೊಡ್ಡ ಸಮಸ್ಯೆಗಳಲ್ಲಿ ಅವರ ಆಸಕ್ತಿ ಕುದುರಿಸುವುದು ಕಷ್ಟ; ಏಕೆಂದರೆ ಸ್ವಾತಂತ್ರ್ಯದ ಸ್ವಚ್ಛ ಗಾಳಿಯಲ್ಲಿ ಉಸಿರಾಡಲು ಎಂದೂ ಅವರಿಗೆ ಅವಕಾಶ ದೊರೆಯಲಿಲ್ಲ; ಆದ್ದರಿಂದಲೇ ಈ ಸಮಸ್ಯೆಗಳ ಬಗ್ಗೆ ಅವರಿಗೇನೂ ತಿಳಿಯದು" ಎಂದು ಭಾವಿಸಿದ್ದರು. ಸ್ವಾತಂತ್ರ್ಯವನ್ನು ನಿರಾಕರಿಸುವ ಈ ಪ್ರವೃತ್ತಿಯು ಮಹಿಳೆಯರಲ್ಲಿ ಬಾಲಿಶ ಮನೋಭಾವನೆಯ ಬೆಳವಣಿಗೆಗೆ ಕಾರಣವಾಗುವುದು ಮಾತ್ರವಲ್ಲದೆ ಅದು ಈ ಬಗೆಯ ನಿರಾಕರಣೆಯನ್ನು ನ್ಯಾಯಬದ್ಧಗೊಳಿಸುವ, "ನೈತಿಕ ಪ್ರಜ್ಞೆಗೆ ಒಗ್ಗದ" ಧರ್ಮಶಾಸ್ತ್ರಗಳನ್ನು ವಿರೋಧಿಸಲೂ ಆಗದ ಪ್ರವೃತ್ತಿಗೆ ಕಾರಣವಾಗುತ್ತದೆ. ಆದ್ದರಿಂದ ಇದು ಕೊನೆಗೊಳ್ಳಬೇಕು. ವಾಸ್ತವವಾಗಿ, ಗಾಂಧೀಯವರ ಪ್ರಕಾರ ಹಿಂದೂ ಧರ್ಮದ ಮೂಲ ಮಂತ್ರವೇ ಪೂರ್ಣ ಸ್ವಾತಂತ್ರ್ಯ. ಆತ್ಮ ಸಾಕ್ಷಾತ್ಕಾರಕ್ಕಾಗಿಯೇ ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ ಅದರ ಸಾಧನೆಗಾಗಿ ತನಗೆ ಸರಿಕಂಡ ರೀತಿಯಲ್ಲಿ ನಡೆದುಕೊಳ್ಳಬಹುದು. ಆದರೆ ಒಂದು ನಿಶ್ಚಿತ ಚೌಕಟ್ಟಿನಲ್ಲಿ ಮಾತ್ರ ಈ ಪೂರ್ಣ ಸ್ವಾತಂತ್ರ್ಯ ಲಭ್ಯವಿದೆ.

ಮಹಿಳೆಯರ ಏಳಿಗೆಗೆ ಗಾಂಧೀಯವರ ಪ್ರಮುಖ ಕೊಡುಗೆ ಎಂದರೆ ಕುಟುಂಬ ಹಾಗೂ ಸಮಾಜ ಜೀವನದಲ್ಲಿ ಮಹಿಳೆಯರ ಘನತೆ ಹಾಗೂ ಸ್ವಾತಂತ್ರ್ಯಗಳಿಗಾಗಿ ಮುಕ್ತಕಂಠದಿಂದ ಒತ್ತಾಯಿಸಿದ್ದು. "ಗಂಡಸು ಹೆಂಗಸನ್ನು ತನ್ನ ಸಾಧನವೆಂದು ಬಗೆದಿದ್ದಾನೆ. ಹೆಂಗಸು ಕೂಡ ಗಂಡಸಿನ ಸಾಧನವಾಗಲು ಕಲಿತಿದ್ದಾಳೆ. ಹೀಗೆ ಆಗುವುದೇ ಸುಲಭ ಮತ್ತು ಆನಂದದಾಯಕವೆಂದು ಕಂಡುಕೊಂಡಿದ್ದಾಳೆ. ಏಕೆಂದರೆ ತಾನು ಬಿದ್ದು ಇನ್ನೊಬ್ಬರನ್ನೂ ತನ್ನತ್ತ ಸೆಳೆದುಕೊಂಡಾಗ ಅಪನತಿ ಸುಲಭವಾಗುತ್ತದೆ ಎಂಬುದನ್ನು ಗಾಂಧೀಯವರು ತಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಅನುಭವದಿಂದ ಮನಗಂಡಿದ್ದರು. "ಯಾವುದೇ ಬಗೆಯ ಅನಿಷ್ಟಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ಭಾರತೀಯ ಮಹಿಳೆಯಲ್ಲಿ ಇಲ್ಲ" ಎಂದೆನ್ನುವವರ ಅಭಿಪ್ರಾಯಗಳನ್ನು ಅವರು ಮಾನ್ಯ ಮಾಡಿದ್ದರು. ಆದರೂ ಮಹಿಳೆಯರು ತಮ್ಮ ಉದ್ಧಾರದ ಹೊಣೆಯನ್ನು ತಾವೇ ಹೊರಬೇಕೆಂದು ಅವರು ಒತ್ತಿ ಹೇಳಿದರು. "ಈ ಸ್ಥಿತಿಗೆ ಗಂಡಸೇ ಮೂಲಕಾರಣ ಎಂಬುದು ನಿಸ್ಸಂಶಯ. ಆದರೆ ಅನೇಕ ಮಹಿಳೆಯರು ಸದಾ ಗಂಡಸರ ಮೇಲೆ ಗೂಬೆಕೂರಿಸಿ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುತ್ತಾರೆ. ಆದರೆ ಪ್ರಜ್ಞಾವಂತರಾದ ಮಹಿಳೆಯರು ತಮ್ಮ ಸಹೋದರಿಯರಿಗೆ ಬಾಧ್ಯಸ್ಥರಲ್ಲವೆ? ಗಂಡಸರಿಗೆ ತಾಯಂದಿರಾದ ಇವರು ಸುಧಾರಣೆಯ ಹೊಣೆಯನ್ನು ಹೊರಬಾರದೆ? ಬಾಲವಿಧವೆಯರು ಹಾಗೂ ಬಾಲಿಕಾ ವಧುಗಳ ನಡುವೆ ಇದ್ದುಕೊಂಡು ಅವರ ಏಳಿಗೆಗಾಗಿ ದುಡಿಯುವ ದಿಟ್ಟ ಮಹಿಳೆಯರು ಎಲ್ಲಿದ್ದಾರೆ? ತಾನು ಪ್ರಾಯಪ್ರಬುದ್ಧಳಾಗದ ಹೊರತು ಮದುವೆಯಾಗುವುದಿಲ್ಲ ಮತ್ತು ತನ್ನ ಆಯ್ಕೆಯ ಪುರುಷನನ್ನಲ್ಲದೆ ಇನ್ನೊಬ್ಬನನ್ನು ಮದುವೆಯಾಗುವುದಿಲ್ಲ ಎಂದು ಪ್ರತಿಯೊಬ್ಬ ಹುಡುಗಿಯೂ ಹೇಳುವ ಶಕ್ತಿಗಳಿಸುವ ತನಕ ವಿಶ್ರಾಂತಿ ಪಡೆಯಲಾರೆ ಎಂದು ಸಾರುವ ದಿಟ್ಟ ಮಹಿಳೆಯರೆಲ್ಲಿ?" ತಮ್ಮ ಹಿತದೃಷ್ಟಿಯಿಂದ "ಮಹಿಳೆಯರ ಏಳಿಗೆ

ಗಾಗಿ ಪುರುಷರು ನೆರವಾಗಬೇಕು. ಆದರೆ ಕೊನೆಗೂ ತನಗೇನು ಬೇಕೆಂಬುದನ್ನು ಮಹಿಳೆಯೇ ದೃಢವಾಗಿ ನಿರ್ಧರಿಸಬೇಕು".

"ಹೆಂಡಂದಿರನ್ನು ಕಾಮದ ಗೊಂಬೆಗಳಂತೆ, ದೇಹದ ಹಸಿವು ತಣಿಸುವ ವಸ್ತುಗಳಂತೆ ನೋಡಬಾರದು. ಸಮಾನ ಸೇವೆಯಲ್ಲಿ ತೊಡಗಿರುವ ಗೌರವಾನ್ವಿತ ಸಂಗಾತಿಯಂತೆ ನಡೆಸಿಕೊಳ್ಳಬೇಕು". ಹೆಂಗಸರು ಕೂಡ ತಮ್ಮನ್ನು ಕಾಮದ ಆಟಿಕೆಗಳಂತೆ ನೋಡುವ ಪ್ರವೃತ್ತಿಯನ್ನು ವಿರೋಧಿಸಬೇಕು. "ಲೋಕ ವ್ಯವಹಾರಗಳಲ್ಲಿ ನೀವು ನಿಮ್ಮ ಪಾತ್ರವನ್ನು ನಿರ್ವಹಿಸಬೇಕೆಂದಿದ್ದರೆ ಗಂಡಿನ ತೃಪ್ತಿಗಾಗಿ ಸಿಂಗಾರ ಮಾಡಿಕೊಳ್ಳುವುದನ್ನು ವಿರೋಧಿಸಿ". ಅಷ್ಟು ಮಾತ್ರವಲ್ಲದೆ, "ಹೆಣ್ಣು ಹುಟ್ಟಿದ್ದೇ ಗಂಡಿನ ಆಟಿಕೆಯಾಗಲು ಎಂದು ತನ್ನ ಹಕ್ಕು ಚಲಾಯಿಸುವ ಗಂಡಸಿನ" ವಿರುದ್ಧ ಸಿಡಿದೇಳಬೇಕು. ಸೀತೆಯು ದೇಹ ಸೌಂದರ್ಯದಿಂದ ತನ್ನ ರಾಮನನ್ನು ಸಂಪ್ರೀತಗೊಳಿಸಲು ಒಂದೇ ಒಂದು ನಿಮಿಷವನ್ನು ಹಾಳು ಮಾಡಿದವಳಲ್ಲ ಎಂಬ ಕಾರಣದಿಂದಾಗಿ ಗಾಂಧೀಯವರು ಸದಾ ಚೈತನ್ಯದಾಯಿಯಾದ ಸೀತೆಯ ಸಂಕೇತವನ್ನು ನೆನಪು ಮಾಡಿಕೊಡುತ್ತಾರೆ. ಸ್ತ್ರೀತ್ವದ ಪರಿಶುದ್ಧತೆ ಹಾಗೂ ಘನತೆಯನ್ನು ಅವರು ಕಾಮರಹಿತತೆಯೊಂದಿಗೆ ಸಮೀಕರಿಸುತ್ತಾರೆ.

ಮಹಿಳೆಯರ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಗೌರವ ಅನುಲ್ಲಂಘನೀಯ ಎಂಬುದನ್ನು ಗಾಂಧೀಯವರು ಒತ್ತಿ ಹೇಳುತ್ತಾರೆ. ತನ್ನ ಗಂಡನಿಗೂ "ಒಲ್ಲೆ" ಎಂದೆನ್ನುವ ಹಕ್ಕು ಆಕೆಗಿದೆ. "ಪ್ರತಿರೋಧದ ಪ್ರಾಥಮಿಕ ಹಕ್ಕಿನ ಅರಿವು ಮಹಿಳೆಗೆ ಇರಬೇಕೆಂದು ನನ್ನ ಹಂಬಲ. ತನಗದು ದೊರೆತಿಲ್ಲವೆಂದು ಈಗ ಆಕೆಗೆ ತಿಳಿದಿದೆ". ತನ್ನ ಸ್ವಂತ ಶರೀರದ ಮೇಲಿನ ಹಕ್ಕು ಮಹಿಳೆಗೆ ಇದ್ದೇ ಇದೆ. ಮದುವೆಯಿಂದಾಗಿ ಆಕೆ ಅದನ್ನು ಜೀವನ ಪರ್ಯಂತ ಬೇರೊಬ್ಬರಿಗೆ ಒಪ್ಪಿಸಬೇಕಾದ್ದಿಲ್ಲ. ಕಾಮರಹಿತ ಮಹಿಳೆಯೇ ಘನತೆವೆತ್ತ ಮಹಿಳೆ ಹಾಗೂ

ಕೇವಲ ಸಂತಾನದ ಆಸೆಯಿಂದ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು ಮಾತ್ರ ನ್ಯಾಯಬದ್ಧ ಎಂಬ ವಿಚಾರದೊಂದಿಗೆ ಗಾಂಧೀಯವರ ಈ ದೃಷ್ಟಿಕೋನವೂ ಹೆಣೆದುಕೊಂಡಿದೆ.

ಹೆಣ್ಣು ತನ್ನ ಕಾಮುಕತನದಿಂದಾಗಿ ಮದುವೆಗೆ ಮೊದಲೇ ಲೈಂಗಿಕ ಸುಖಭೋಗ ಹಾಗೂ ದುರ್ವ್ಯವಹಾರಗಳಲ್ಲಿ ತೊಡಗಬಹುದೆಂಬ ಕಾರಣದಿಂದಾಗಿ ಅನೇಕರು ಆಕೆ ಮೈನೆರೆಯುವ ಮುನ್ನವೆ ನಡೆಯುತ್ತಿದ್ದ ವಿವಾಹಗಳನ್ನು ಸಮರ್ಥಿಸುತ್ತಿದ್ದರು. ಪಾವಿತ್ರ್ಯದ ಬಗೆಗಿನ ಈ ಗೀಳಿನ ಹೊರತಾಗಿಯೂ ಗಾಂಧೀಯವರು ಈ ಸಮರ್ಥನೆಗಳಿಗೆ ಪ್ರತಿಕ್ರಿಯೆಯಾಗಿ ಅಸಹನೆಯಿಂದ ಕಟಕಿಯಾಡಿದರು. ಸ್ತ್ರೀಯರ ಪರಿಶುದ್ಧತೆಯ ಬಗ್ಗೆ ಇಷ್ಟೊಂದು ಮಾರಕ ಆತಂಕ ಏಕಿದೆ? ಪುರುಷರ ಪರಿಶುದ್ಧತೆಯ ಬಗ್ಗೆ ಮಾತನಾಡಲು ಹೆಂಗಸರಿಗೆಲ್ಲಿದೆ ಅವಕಾಶ? ಸ್ತ್ರೀಯರ ಪರಿಶುದ್ಧತೆಯನ್ನು ನಿರ್ಣಯಿಸುವ ಅಧಿಕಾರವನ್ನು ಗಂಡಸರೇ ಏಕೆ ಅನ್ಯಾಯವಾಗಿ ತಮ್ಮ ಕೈಯಲ್ಲಿಟ್ಟುಕೊಳ್ಳಬೇಕು?"

ಗಾಂಧೀಯವರ ದೃಷ್ಟಿಯಲ್ಲಿ ಬಾಲವಿವಾಹ ಪದ್ಧತಿ ಭಾರತೀಯ ಸ್ತ್ರೀತ್ವಕ್ಕೆ ಕಳಂಕಪ್ರಾಯ. ಬಾಲವೈಧವ್ಯಕ್ಕೂ ಈ ಅನಿಷ್ಟಕ್ಕೂ ನಿಕಟ ಸಂಪರ್ಕವಿದೆ ಎಂಬುದನ್ನು ಅವರು ಗಮನಿಸಿದರು. "ಬರ್ಬರವಾದ ಆಚರಣೆಗೆ ಧಾರ್ಮಿಕ ಸಮ್ಮತಿ ನೀಡುವುದು ಧರ್ಮವಲ್ಲ; ಅಧರ್ಮ". ಇದನ್ನು ಅನುಮೋದಿಸಿ ಪ್ರೋತ್ಸಾಹಿಸುವ ಮೂಲಕ "ದೇವರು ಮತ್ತು ಸ್ವರಾಜ್ಯದಿಂದ ನಾವು ದೂರ ಸಿಡಿಯುತ್ತಿದ್ದೇವೆ". ಹೀಗೆ ಅವರು ಮಹಿಳಾ ಶೋಷಣೆಯ ಸಮಸ್ಯೆಯನ್ನು ಸಾಮಾಜಿಕ ಹಾಗೂ ರಾಷ್ಟ್ರೀಯ ಸ್ವಾಸ್ಥ್ಯದೊಂದಿಗೆ ತಳುಕು ಹಾಕಿದರು.

ಶಾರದಾ ವಿವಾಹ ಮಸೂದೆಯ ಪ್ರಕಾರ ಮದುವೆಗೆ ಅನುಮತಿ ನೀಡುವ ವಯಸ್ಸನ್ನು ೧೪ ಕ್ಕೆ ಏರಿಸಬೇಕೆಂಬ ಪ್ರಯತ್ನಗಳಾದಾಗ

ಗಾಂಧೀಯವರು ಈ ವಯಸ್ಸನ್ನು ೧೬ ಅಥವಾ ೧೮ಕ್ಕೆ ಏರಿಸ ಬೇಕೆಂದು ಸೂಚಿಸಿದರು. ರಾಷ್ಟ್ರದ ಸ್ವಾಸ್ಥ್ಯಕ್ಕೆ ಮಾರಕವಾದ, ಅನೈತಿಕ ಆಚರಣೆಗೆ ಅನುಮತಿ ನೀಡುವ ಅನುಮಾನಾಸ್ಪದ ಪ್ರಾಮಾಣ್ಯದ ಧರ್ಮಗ್ರಂಥಗಳನ್ನು ಅವರು ಕಡೆಗಣಿಸಲು ಸಿದ್ಧ ರಿದ್ದರು. ಕಾನೂನು ಕೇವಲ 'ಉಪಶಮನ' ಮಾತ್ರವಾದರೂ "ಅದು ಅಲ್ಪಸಂಖ್ಯಾತರನ್ನು ಹದ್ದುಬಸ್ತಿನಲ್ಲಿಡಲು ಸಾಕು". "ಸಾಮೂಹಿಕ ಅನಿಷ್ಟವೊಂದನ್ನು ಜಾಗೃತವಾದ ಸಾರ್ವಜನಿಕ ಅಭಿಪ್ರಾಯದಿಂದ" ಮಾತ್ರವೇ ನಿಯಂತ್ರಿಸಬಹುದು.

ಸುಕೋಮಲೆಯರಾದ ತಮ್ಮ ಹೆಣ್ಣುಮಕ್ಕಳನ್ನು ಪ್ರಾಯ ಬರುವುದಕ್ಕೆ ಮುಂಚೆಯೇ ಮದುವೆ ಮಾಡಿಕೊಡುವ ಹೆತ್ತವರು ಒಂದುವೇಳೆ ಆ ಹೆಣ್ಣುಮಕ್ಕಳು ಹದಿಹರೆಯದಲ್ಲೇ ವಿಧವೆಯರಾದರೆ ಅವರ ಪುನರ್ ವಿವಾಹ ಮಾಡಿಸುವ ಮೂಲಕ ತಾವು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಮರುಮದುವೆ ಯಾಗಲು ಗಂಡಸರಿಗೆ ಸ್ವಾತಂತ್ರ್ಯವಿರುವಂತೆ ಹೆಂಗಸರಿಗೂ ಕೂಡ ಮರುಮದುವೆಯಾಗುವ ಅನಿರ್ಬಂಧಿತ ಸ್ವಾತಂತ್ರ್ಯವಿರಬೇಕು. ಸಾವಿರಾರು ವಿಧವೆಯರ ಅಸ್ತಿತ್ವ ಯಾವುದೇ ಸಮಾಜಕ್ಕೆ ಅಂಟಿದ ಗಂಭೀರ ಕಳಂಕವೆಂದು ಗಾಂಧೀ ಭಾವಿಸಿದ್ದರು. ಇದು "ಯಾವುದೇ ಗಳಿಗೆಯಲ್ಲಿ ಸ್ಫೋಟಗೊಳ್ಳುವ ಜ್ವಾಲಾಮುಖಿಯ ಮೇಲೆ ಕುಳಿತಂಥ" ಅನುಭವ. ಬಾಲವಿಧವೆಯರ ಸಂಖ್ಯೆಯಲ್ಲಿ ಆದ ಹೆಚ್ಚಳದಿಂದ ಸಮಾಜವು ವಿನಾಶಕಾರಿ ಸ್ಥಿತಿಯನ್ನು ಮುಟ್ಟಿದೆ ಎಂಬುದನ್ನು ಗಾಂಧೀ ಯವರು ಗಮನಿಸಿದರು. "ಗಂಡಸರು ಹೆಂಗಸರಿಗೆ ನಿರಂತರ ವೈಧವ್ಯ ವನ್ನು ಕರುಣಿಸಿದ್ದಾರೆ. ಜೊತೆಗೆ ರುದ್ರಭೂಮಿಯಲ್ಲಿ ಇನ್ನೊರ್ವ ಳೊಂದಿಗೆ ಮದುವೆ ನಿಶ್ಚಯಿಸುವ ಹಕ್ಕನ್ನು ತಮಗೆ ತಾವೇ ದಯಪಾಲಿಸಿಕೊಂಡಿದ್ದಾರೆ".

ವಿಧವಾ ಜೀವನವು ಪಿತೃಪ್ರಧಾನ ಸಂಸ್ಕೃತಿಯ ಸ್ತ್ರೀದಮನ ಸಿದ್ಧಾಂತದ ಒಂದು ಅಂಗವೆಂಬ ಕಾರಣದಿಂದ ಅವರು ವಿಧವಾ ವಿವಾಹವನ್ನು ಪ್ರತಿಪಾದಿಸದೆ ಸಾಮಾಜಿಕ ಸ್ವಾಸ್ಥ್ಯದ ನಿಟ್ಟಿನಿಂದ ಪುನರ್ ವಿವಾಹವನ್ನು ಪ್ರತಿಪಾದಿಸಿದರು. "ವಿಧವೆಯೊಬ್ಬಳು ಕದ್ದು ಮುಚ್ಚಿ ಪಾಪ ಮಾಡುವುದಕ್ಕಿಂತ ಬಹಿರಂಗವಾಗಿ ಮದುವೆ ಯಾಗುವುದು ಮೇಲು". ಮದುವೆಯಾಚೆಗಿನ ಪ್ರತಿಯೊಂದು ಸಂಬಂಧವೂ ಪಾಪಕರವೆನಿಸಿದ್ದರಿಂದಲೆ ಬಾಲವಿಧವೆಯರ ಸಂದರ್ಭ ದಲ್ಲಿ ಗಾಂಧೀಯವರು ಪುನರ್‌ವಿವಾಹಕ್ಕೆ ವಿಶೇಷ ಒತ್ತು ನೀಡಿ ದರು. ಆದರೆ ಪ್ರಾಯಪ್ರಬುದ್ಧ ವಿಧವೆಯರ ಪ್ರಕರಣದಲ್ಲಿ ಅವರ ನಿಲುವು ಸಂದಿಗ್ಧವಾಗಿದೆ. ಆರೋಪಿತ ವೈಧವ್ಯವೂ ಒಂದು ಶಾಪವೇ. "ತನ್ನನ್ನು ತಾನು ನಿಯಂತ್ರಿಸಿಕೊಳ್ಳಲಾರದ ಪ್ರಾಯಕ್ಕೆ ಬಂದ ವಿಧವೆಗೂ ಯಾವುದೇ ವಿರೋಧವಿಲ್ಲದೆ ಮರು ಮದುವೆ ಮಾಡಿಕೊಳ್ಳುವ ಸ್ವಾತಂತ್ರ್ಯವಿರಬೇಕು".

ಇಷ್ಟಾದರೂ ಗಾಂಧೀಯವರು ಜೀವನದಲ್ಲಿ ಆರೋಗ್ಯಕರವಾಗಿ ತೊಡಗಿಕೊಳ್ಳುವುದನ್ನು ಬೆಂಬಲಿಸುವ ಬದಲು ಸಂಯಮ ಯುಕ್ತ ವೈರಾಗ್ಯವನ್ನು" ಬೆಂಬಲಿಸಿದರು. "ಸ್ವಯಂಪ್ರೇರಿತವೂ ಪ್ರಜ್ಞಾ ಪೂರ್ಣವೂ ಆದ ವೈಧವ್ಯವೇ" ಮಹಾನ್ ಸಾಮಾಜಿಕ ಸಂಪತ್ತೆಂದು ಬಗೆದ ಗಾಂಧೀಯವರು "ನಿಜವಾದ ಹಿಂದೂ ವಿಧವೆ ಒಂದು ನಿಧಿಯಿದ್ದಂತೆ. ಹಿಂದೂ ಧರ್ಮ ಮಾನವತೆಗೆ ನೀಡಿದ ಕೊಡುಗೆ ಆಕೆ" ಎಂದು ನಂಬಿದ್ದರು. ಯಾಕೆಂದರೆ ಹಿಂದೂ ವಿಧವೆಯು "ನೋವಿನಲ್ಲಿ ನಲಿವನ್ನು ಕಂಡವಳು ಯಾತನೆಯನ್ನು ಪವಿತ್ರವೆಂದು ಒಪ್ಪಿಕೊಂಡವಳು". "ಸುಶೀಲೆಯರೂ, ಪತಿವ್ರತೆಯರೂ ಆದ ಹೆಂಗಸರು ಯಾತನೆಯನ್ನು ಅಪ್ಪಿಕೊಳ್ಳಲಿ. ಆ ಯಾತನೆ ಯಾತನೆ ಯಲ್ಲ, ಆನಂದ". ಇದು ಎಷ್ಟೇ ಸಂಯಮಯುಕ್ತ ನೀತಿಯಾಗಿರಲಿ ಗಂಡಸರು ಕೂಡ ಹೆಂಗಸರ ಈ ಆದರ್ಶವನ್ನು ಅನುಸರಿಸಬೇಕೆಂದು

ಅವರು ಅಪೇಕ್ಷಿಸಿರುವುದು ಗಮನಾರ್ಹ. "ಎಲ್ಲಿಯವರೆಗೆ ಗಂಡಸರು ಯಾತನೆಯನ್ನು ಸ್ವೀಕರಿಸುವುದಿಲ್ಲವೊ ಅಲ್ಲಿಯವರೆಗೆ ಹಿಂದೂ ಧರ್ಮ ಅಪರಿಪೂರ್ಣವಾಗಿರುತ್ತದೆ", ವಿಧವೆಯರಂತೆ ಪುರುಷರು ಕೂಡ "ಇಹಜೀವನದ ಸುಖಭೋಗಗಳಿಂದ ವಿಮುಖರಾಗಬೇಕು".

ರಾಷ್ಟ್ರದ ಸೇವಕರಾಗಿ ವಿಧವೆಯರ ಅಂತಸತ್ವವನ್ನು ಗಾಂಧೀಯವರು ಒತ್ತಿ ಹೇಳಿದರು. "ಈ ದೇಶ ನೂರಾರು ಹಿರಿಯ ಕಿರಿಯ ವಿಧವೆಯರ ಸೇವೆಯನ್ನು ಹೇಗೆ ಪಡೆದುಕೊಳ್ಳಲು ಸಾಧ್ಯವೆಂಬುದನ್ನು ಎಚ್ಚರದಿಂದ ಪರಿಶೀಲಿಸಬೇಕು". ಬಹುತೇಕ ವಿಚ್ಛೇದಿತ ಹಿಂದೂ ಸ್ತ್ರೀಯರು "ಒಂದು ಕೆಟ್ಟ ಅನುಭವದ ಬಳಿಕ ಮತ್ತೊಮ್ಮೆ ಮದುವೆಯಾಗಲು" ಬಯಸುವುದಿಲ್ಲ ಎಂಬುದನ್ನು ಗಾಂಧೀ ಅರಿತಿದ್ದರು. ಆದ್ದರಿಂದ "ಇಂಥವರ ಬಂಧುಮಿತ್ರರು ಇವರನ್ನು ದಬ್ಬಾಳಿಕೆಯಿಂದ ಪಾರುಮಾಡಿ ಸಮಾಧಾನಪಟ್ಟುಕೊಂಡರೆ ಸಾಲದು. ಸಮಾಜ ಸೇವೆ ಮಾಡಲು ಅರ್ಹರಾಗುವಂತೆ ಇವರನ್ನು ಪ್ರಚೋದಿಸಬೇಕು. ಈ ಬಗೆಯ ತರಬೇತಿಯೇ ಪತಿಯ ಸಂಸರ್ಗದಿಂದ ದೊರೆಯಬಹುದಾದ ಸುಖಕ್ಕಿಂತ ಮಿಗಿಲಾದ ಕೊಡುಗೆ".

ಗಂಡಸ ನಡತೆ ನ್ಯಾಯಬಾಹಿರವಾಗಿದ್ದರೆ ಅವನಿಂದ ಬೇರೆಯಾಗಿ ಬದುಕುವ ಹಕ್ಕು ಹೆಂಡತಿಗಿದೆ ಎಂದು ಗಾಂಧೀ ನಂಬಿದ್ದರು. ವಿಚ್ಛೇದನವೇ "ಕೊನೆಗುಳಿದ ಪರಿಹಾರ ಆಗಿದ್ದರೆ ಆ ಕ್ರಮವನ್ನೂ ಮಾನ್ಯ ಮಾಡಲು" ಅವರು ಹಿಂತೆಗೆಯರು. ಇನ್ನೊಬ್ಬರ "ನೈತಿಕ ಪ್ರಗತಿ"ಯಲ್ಲಿ ಹಸ್ತಕ್ಷೇಪ ಮಾಡುವುದಕ್ಕಿಂತ ವಿಚ್ಛೇದನ ಪಡೆಯುವುದೇ ಲೇಸು. ಒಂದು ನಿರ್ದಿಷ್ಟ ಮಿತಿಯಲ್ಲಿ ವಿಚ್ಛೇದನವನ್ನು ಗಾಂಧೀಯವರು ಪುರಸ್ಕರಿಸಿದರೂ "ಅದರ ಪರವಾಗಿ ಪ್ರಚಾರ ಮಾಡುವುದನ್ನು ಅವರೆಂದೂ ಕಲ್ಪಿಸಿಕೊಳ್ಳಲಾರದವರಾಗಿದ್ದರು".

ವರದಕ್ಷಿಣೆಯ ಶೋಷಣಾ ವ್ಯವಸ್ಥೆ ಕೂಡ ಗಾಂಧೀಯವರ ಕಟು ಟೀಕೆಗೆ ಗುರಿಯಾಯಿತು. ನಮ್ಮ ಹೆಣ್ಣುಮಕ್ಕಳು ವರದಕ್ಷಿಣೆ

ಬೇಕೆಂದು ಪೀಡಿಸುವ ಗಂಡಸರನ್ನು ಮದುವೆಯಾಗಿ ಅಪಮಾನಕ್ಕೆ ತುತ್ತಾಗುವುದಕ್ಕಿಂತ ಜೀವನಪರ್ಯಂತ ಮದುವೆಯಾಗದಿರುವುದೇ ಲೇಸೆಂದು ಗಾಂಧೀಯುವರ ಅಭಿಪ್ರಾಯ. ಮಹಿಳೆಯುರು ಇಂಥ ಅನಿಷ್ಟ ಪದ್ಧತಿಗಳನ್ನು ವಿರೋಧಿಸುವುದಾದರೆ "ಜೀವಮಾ ಪರ್ಯಂತ ಇಲ್ಲವೆ ಕೆಲವು ವರ್ಷ ಕಾಲ ಕನ್ಯೆಯುರಾಗಿಯೇ ಉಳಿಯುವ ಮೂಲಕ ತಮ್ಮ ಪ್ರತಿಭಟನೆಯುನ್ನು ತೋರಿಸಬೇಕು". ವರದಕ್ಷಿಣೆ ಆಧಾರಿತ ವಿವಾಹಗಳನ್ನು ಗಾಂಧೀಯುವರು 'ಹೃದಯಹೀನ'ವೆಂದು ಕರೆದು ದಲ್ಲದೆ ಈ ವ್ಯವಸ್ಥೆ ತೊಲಗಬೇಕೆಂದರು. ತಂದೆ ತಾಯಿಗಳು ಹಣಕ್ಕಾಗಿ ಮಾಡಿದ ವ್ಯವಸ್ಥೆಯೇ ಮದುವೆ ಎಂಬುದು ಕೊನೆಗೊಳ್ಳಬೇಕು.

ವರದಕ್ಷಿಣೆಯು ಜಾತಿ ವ್ಯವಸ್ಥೆಯೊಂದಿಗೆ ತಳುಕು ಹಾಕಿಕೊಂಡಿದೆ. ಒಂದು ನಿರ್ದಿಷ್ಟ ಜಾತಿಯಲ್ಲಿ ಕೆಲವು ನೂರು ಗಂಡು ಹೆಣ್ಣುಗಳಿಗಷ್ಟೇ ಆಯ್ಕೆ ಸೀಮಿತವಾಗಿರುವುದರಿಂದ ವರದಕ್ಷಿಣೆಯ ವಿರುದ್ಧ ಏನೇ ಹೇಳಿದರೂ ಅದು ಮುಂದುವರಿಯುತ್ತದೆ. ಹುಡುಗ, ಹುಡುಗಿ ಅಥವಾ ಅವರ ಹೆತ್ತವರು ಜಾತಿಯ ಸಂಕೋಲೆಗಳನ್ನು ಕಿತ್ತೊಗೆಯದ ಹೊರತು ಈ ಅನಿಷ್ಟ ಪದ್ಧತಿ ತೊಲಗದು. ವಿವಾಹದ ವಯೋಮಿತಿಯುನ್ನು ಹೆಚ್ಚಿಸಬೇಕು. ಸೂಕ್ತ ವರ ದೊರೆಯದ ಸಂದರ್ಭಗಳಲ್ಲಿ ಬ್ರಹ್ಮಚಾರಿಣಿಯಾಗಿಯೇ ಉಳಿಯುವರ ಧೀರ ನಿರ್ಧಾರವನ್ನು ಹೆಣ್ಣುಮಕ್ಕಳು ಕೈಗೊಳ್ಳಬೇಕು". ಗಾಂಧೀಯುವರ ಪ್ರಕಾರ "ಪರಸ್ಪರ ಒಪ್ಪಿಗೆ ಮತ್ತು ಪ್ರೇಮವೇ ವಿವಾಹದಲ್ಲಿ ಮಾನ್ಯವಾಗಬೇಕಾದ ಶರತ್ತುಗಳು".

ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಗಾಂಧೀಯುವರ ಸಂದೇಶದ ಪ್ರಭಾವ ಹೆಚ್ಚು ಪ್ರಖರಗೊಂಡಿತು. ಅದರಲ್ಲೂ ಮುಖ್ಯವಾಗಿ ಆಂದೋಳನ ತೀವ್ರಗೊಂಡಾಗ ದೇಶದ ವಿವಿಧ ಭಾಗಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿಧ್ಯುಕ್ತವಲ್ಲದ ಸರಳವಾದ ವಿವಾಹಗಳನ್ನು ಪ್ರಚುರ

ಪಡಿಸಿದರು. ಬಂಧುಮಿತ್ರರ ಚಪ್ಪಾಳೆಯ ನಡುವೆ ವಧೂವರರು ಹೂ ಹಾರ ವಿನಿಮಯ ಮಾಡಿಕೊಳ್ಳುವ ಈ ಮದುವೆಗಳಿಗೆ 'ಗಾಂಧೀ ಲಗ್ನ' ವೆಂದೇ ಹೆಸರಾಯಿತು. ಗ್ರಾಮೀಣ ಭಾರತದಲ್ಲೂ ಇಂಥ ಹಲವು ಮದುವೆಯ ಪ್ರಕರಣಗಳು ವರದಿಯಾಗಿವೆ.

ಮಹಿಳೆಯರು ತಮ್ಮ ಸಹಜ ಹಕ್ಕುಗಳನ್ನು ರಕ್ಷಿಸಿಕೊಳ್ಳಲು, ವಿವೇಕದಿಂದ ಚಲಾಯಿಸಲು ಮತ್ತು ಸಂದರ್ಭ ಬಂದಾಗ ಅವನ್ನು ವಿಸ್ತರಿಸಲು ಶಿಕ್ಷಣ ಒಂದು ಸಾಧನ ಎಂದು ಗಾಂಧೀಯವರು ಬಗೆದರು. ಆದರೂ "ಓದುಬರಹದ ಪರಿಜ್ಞಾನವಿಲ್ಲದೆಯೂ" ಸಾಕಷ್ಟು ಉತ್ತಮ ವಾದ, ಉಪಯುಕ್ತವಾದ ಕೆಲಸ ಮಾಡಬಹುದು. "ಅನಕ್ಷರತೆಯ ಆಧಾರದ ಮೇಲೆ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನಿರಾಕರಿಸಲು ಗಂಡಸರಿಗೆ ಯಾವ ಸಮರ್ಥನೆಯೂ ಇಲ್ಲ" ಎಂದು ಅವರು ವಾದಿಸಿದರು. ಮೇಲಾಗಿ, ಮದುವೆಯ ಬಳಿಕ ಗಂಡನ ಕೈಗೊಂಬೆ ಆಗುವುದಾದರೆ ಮತ್ತು ಭವಿಷ್ಯದ ಪ್ರಜೆಗಳನ್ನು ಅನತಿ ಕಾಲದಲ್ಲೇ ಸಾಕುವ ಹೊಣೆ ಹೊರುವುದಾದರೆ ಶಿಕ್ಷಣದಿಂದ ಏನು ತಾನೆ ಪ್ರಯೋಜನ?"

ವೇಶ್ಯಾವೃತ್ತಿಯನ್ನು ಕುರಿತು ಗಾಂಧೀಯವರ ವಿಚಾರಗಳು

ವೇಶ್ಯಾವೃತ್ತಿಯ ಅನಿಷ್ಟ ಸಂಪ್ರದಾಯವನ್ನು ಗಾಂಧೀಯವರು ತೀಕ್ಷ್ಣವಾಗಿ ಖಂಡಿಸಿದರು. ಅವರ ಪ್ರಕಾರ "ಮಾನವನ ಪಾಶವೀ ಪ್ರವೃತ್ತಿಯು ಈ ಅಸಹ್ಯಕರ ಅಪರಾಧವನ್ನು ಆಕರ್ಷಕ ದಂಧೆಯನ್ನಾಗಿ ಮಾಡಿದೆ". ಗಾಂಧೀಯವರ ದೃಷ್ಟಿಯಲ್ಲಿ ಇದು ಸ್ತ್ರೀ ಪುರುಷರಿಬ್ಬರನ್ನೂ ಕೆಳಮಟ್ಟಕ್ಕೆ ಇಳಿಸಿದೆ. "ಗಂಡಸರ ಕಾಮದಾಹ ತೀರಿಸಲು ಹೆಂಗಸರು ತಮ್ಮ ಪಾವಿತ್ರ್ಯವನ್ನು ಮಾರಾಟ ಮಾಡಬೇಕಾಗಿ ಬಂದಿರುವುದು ನಾಚಿಕೆಗೇಡಿನ, ಅಪಮಾನದ, ವಿಷಾದದ ವಿಚಾರ. ತಥಾಕಥಿತ ಅಬಲೆಯರನ್ನು ಕೀಳಾಗಿ ಕಾಣುವ ನ್ಯಾಯಪಾಲಕ ಗಂಡಸು

ಈ ಅಪರಾಧಕ್ಕಾಗಿ ಭಾರಿ ಬೆಲೆ ತೆರಬೇಕಾದೀತು. ಭಾರತದ ಪುರುಷ ರಾದ ನಾವು ನಮ್ಮ ಘನತೆಯನ್ನು ಮನಗಂಡರೆ ಈ ಅನಿಷ್ಟವನ್ನು ಒಂದೇ ಒಂದು ದಿನದಲ್ಲಿ ಕೊನೆಗಾಣಿಸಬಹುದು. ಗಂಡಸು ತನ್ನ ನಯವಂಚನೆಯ ವಿಧಾನಗಳಿಂದ ಮಹಿಳೆಯ ಪವಿತ್ರ ಭಾವನೆಗಳನ್ನು ದೋಚಿ, ಆ ಬಳಿಕ ಆಕೆಯ ವಿರುದ್ಧವೇ ನಡೆಯುವ ಅಪರಾಧದಲ್ಲಿ ಆಕೆಯನ್ನು ಪಾಲುದಾರಳನ್ನಾಗಿ ಮಾಡುವುದಿಲ್ಲವೇನು? ಆದರೆ "ನತದೃಷ್ಟ ಸೋದರಿಯರ ಉದ್ಧಾರದ ವಿಚಾರವನ್ನು ತಜ್ಞರಿಗೆ ಬಿಡಬೇಕೆಂಬುದು" ಗಾಂಧೀಯವರ ಅಭಿಪ್ರಾಯವಾಗಿತ್ತು. ಏಕೆಂದರೆ ಉದ್ಧಾರದ ಕಾರ್ಯವನ್ನು ಅತ್ಯಂತ ಉತ್ಸಾಹದಿಂದ ಕೈಗೆತ್ತಿಕೊಳ್ಳುವ ಎಲ್ಲ ಕಾಂಗ್ರೆಸ್ಸಿಗರು ಸದುದ್ದೇಶ ಪ್ರೇರಿತರು ಹಾಗೂ ಸಮಸ್ಯಾ ಪರಿಹಾರದಲ್ಲಿ ನಿಪುಣರು ಎಂಬ ಬಗ್ಗೆ ಅವರಿಗೆ ಭರವಸೆ ಇರಲಿಲ್ಲ. ಇದರ ಬದಲಿಗೆ "ಕುಖ್ಯಾತಿಯ ವೇಶ್ಯಾವಾಟಿಕೆಗಳಿಗೆ ಭೇಟಿಕೊಟ್ಟು ಸಮಾಜ ತಲೆತಗ್ಗಿಸುವಂತೆ ಮಾಡುವವರ ಮಧ್ಯೆ ಕಾಂಗ್ರೆಸ್ಸಿಗರು ಕೆಲಸ ಮಾಡಬೇಕೆಂದು" ಸಲಹೆ ನೀಡಿದರು.

ಪುನರ್ ನಿರ್ಮಾಣ ಮತ್ತು ಶುದ್ಧೀಕರಣ ಕಾರ್ಯಕ್ರಮದ ಅವಿನಾಭಾಗವಾಗಿರುವ ವೇಶ್ಯಾವೃತ್ತಿಯ ವಿರುದ್ಧದ ಹೋರಾಟ ಹಾಗೂ "ನಮ್ಮ ಜಾರಿದ ಸೋದರಿಯರ" ಪುನರ್‌ವಸತಿಯ ಕೆಲಸವನ್ನು ಮಹಿಳೆಯರು ಕೈಗೆತ್ತಿಕೊಳ್ಳಬೇಕೆಂದು ಗಾಂಧೀಯವರು ಒತ್ತಾಯಿಸಿದರು. ಇದಕ್ಕಾಗಿ ಮಹಿಳಾ ಸ್ವಯಂಸೇವಾ ಘಟಕವೊಂದರ ಸ್ಥಾಪನೆಯಾಗಬೇಕೆಂದು ಸೂಚಿಸಿದರು. ಗಾಂಧೀಯವರ ಕರೆಗೆ ಓಗೊಟ್ಟು ವೇಶ್ಯಾವೃತ್ತಿಯನ್ನು ಕೈಬಿಟ್ಟು ಚರಖ ಹಿಡಿದು ನೂಲು ತೆಗೆದ ಹಲವು ಹಿರಿಯ ಕಿರಿಯ ವೇಶ್ಯೆಯರ ನಿದರ್ಶನಗಳುಂಟು. ಬಂಗಾಳದ ಮದರಿಪುರ ಮತ್ತು ನೌಖಾಲಿಯಲ್ಲಿ ಇಂಥ ಪ್ರಕರಣಗಳು ಕಂಡು ಬಂದಿವೆ. ಆದರೆ ಗಾಂಧೀಯವರ ಸರ್ವರೋಗಾಪಹಾರಿ ಔಷಧ ವೆನಿಸಿದ ಚರಖ ಹಾಗೂ ಖಾದಿಯನ್ನು ಬಿಟ್ಟರೆ ಈ ಮಹಿಳೆಯರ

ಪುನರ್ವಸತಿಗೆ ಅವರ ಬಳಿ ತಕ್ಕ ಪರಿಹಾರವಾಗಲಿ, ಅನಿಷ್ಟ ನಿವಾರಣಾ ಉಪಾಯವಾಗಲಿ ಇರಲಿಲ್ಲ. ಆದ್ದರಿಂದಲೆ ಇಂಥ ಮಹಿಳೆಯರು 'ಅಗೌರವದ ವೃತ್ತಿ' ಯನ್ನು ಬಿಟ್ಟು ಭಾರತದ 'ಸನ್ಯಾಸಿನಿ'ಗಳಾಗಬೇಕೆಂದು ಅವರು ಕರೆನೀಡಿದರು. ಅವರ ಕಾಳಜಿ ಪ್ರಾಮಾಣಿಕವಾಗಿದ್ದರೂ ಅದು "ಪಶುಗಳಾಗದಂತೆ ನಿಮ್ಮನ್ನು ನೀವು ನಿಯಂತ್ರಿಸಿಕೊಳ್ಳಿ; ಶುದ್ಧವಾಗಿರಿ" ಎಂದು ಗಂಡಸರಲ್ಲಿ ಮನವಿ ಮಾಡುವ ಮಟ್ಟದಲ್ಲೇ ಉಳಿಯಿತು.

ಇನ್ನೊಂದೆಡೆ ಬರಿಸಾಲ್‌ನಲ್ಲಿ ನಡೆಯುತ್ತಿದ್ದ "ಜಾರಿದ ಸೋದರಿಯರ" ಪುನರುದ್ಧಾರ ಕಾರ್ಯಕ್ರಮಗಳ ಸ್ವರೂಪದ ವಿಚಾರ ಗಾಂಧೀಯವರ ಕಿವಿಗೆ ಬಿದ್ದಾಗ ಅವರು ತಮ್ಮ ಸಾತ್ವಿಕ ಕ್ರೋಧವನ್ನು ವ್ಯಕ್ತಪಡಿಸಿದರು. ಬಡವರು ಹಾಗೂ ರೋಗಗ್ರಸ್ತ ಮಹಿಳೆಯರಿಗೆ ನೆರವಾಗಲು, ವಿದ್ಯಾಪ್ರಸಾರ ಮಾಡಲು, ನೂಲುವಿಕೆ ಹಾಗೂ ನೇಯ್ಗೆಯನ್ನು ಪ್ರಚುರ ಪಡಿಸಲು, ಸತ್ಯಾಗ್ರಹದಲ್ಲಿ ತೊಡಗಿಕೊಂಡ ಇತರ ಸಂಘಟನೆಗಳಿಗೆ ಸಹಾಯ ಮಾಡಲು ಕಾಂಗ್ರೆಸಿನ ಪತಾಕೆಯಡಿ ಇಲ್ಲಿನ ಮಹಿಳೆಯರನ್ನು ಸಂಘಟಿಸಲಾಗಿತ್ತು. "ತಮ್ಮನ್ನು ತಾವು ಮೊದಲು ಸುಧಾರಣೆ ಮಾಡಿಕೊಳ್ಳದೆ ಮಾನವೀಯ ಕೆಲಸಗಳನ್ನು ಕೈಗೊಳ್ಳಲು" ಈ ಹೆಂಗಸರಿಗೆ ಉಪದೇಶಿಸಿದ ಸಂಘಟನೆಯ ದಾಖಲೆ ಪತ್ರಗಳನ್ನು 'ಅಶ್ಲೀಲ ಪ್ರಣಾಳಿಕೆ' ಎಂದು ಗಾಂಧೀಯವರು ಜರೆದರು. ಈ ಮಹಿಳೆಯರು "ಬುದ್ಧಿವಂತರು, ವಿನಯವಂತರು ಹಾಗೂ ಮರ್ಯಾದಸ್ಥರು"; ಅವರ ನಿರ್ಧಾರ ಯಾವುದೇ 'ಸತ್ಯಾಗ್ರಹಿ'ಯ ನಿರ್ಧಾರದಷ್ಟೇ ಅಚಲ ಎಂಬುದನ್ನು ಒಪ್ಪಿಕೊಂಡರೂ ಅವರನ್ನು ಕಾಂಗ್ರೆಸ್ ಸದಸ್ಯರೆಂದು ಸ್ವೀಕರಿಸಲು ಮಾತ್ರ ನಿರಾಕರಿಸಿದರು.

ತಮ್ಮ ವೇಶ್ಯಾವೃತ್ತಿಯನ್ನು ತ್ಯಜಿಸದ ಹೊರತು "ಅವರು ನೀಡುವ ಯಾವುದೇ ಕಾಣಿಕೆಗಳನ್ನು" ಸ್ವೀಕರಿಸಲು ನಿರಾಕರಿಸಿದರು.

"ಶುದ್ಧಾಂತ:ಕರಣ ಹಾಗೂ ಶುದ್ಧ ಹಸ್ತವಿಲ್ಲದ ಯಾರೂ ಸ್ವರಾಜ್ಯದ ವೇದಿಕೆ ಏರುವಂತಿಲ್ಲ" ಎಂದು ಈ ವೇಶ್ಯೆಯರಿಗೆ ತಿಳಿಸಿದರು. ಈ ಮಹಿಳೆಯರ 'ಅನಾರೋಗ್ಯಕರ ಪ್ರಗತಿ'ಗೆ ಕಾರಣವಾಗುವ ಅವರ "ವ್ಯಾಪಾರಿ ಪ್ರವೃತ್ತಿ" ಗಾಂಧೀಯವರಲ್ಲಿ ಕಳವಳ ಉಂಟುಮಾಡಿತ್ತು. ಈ ಮಹಿಳೆಯರನ್ನು ಗಾಂಧೀಯವರು ಕಳ್ಳರಿಗಿಂತಲೂ ಕಡೆ ಎಂದು ಭಾವಿಸಿದರು, ಏಕೆಂದರೆ ಕಳ್ಳರು ಭೌತಿಕ ಸಂಪತ್ತನ್ನು ಮಾತ್ರ ಅಪಹರಿಸುತ್ತಾರೆ. ಇವರಾದರೋ 'ಶೀಲಾಪಹರಣ' ಮಾಡುತ್ತಾರೆ. ಗಾಂಧೀಯವರು ಇವರನ್ನು ಕಳ್ಳರಿಗೆ ಹೋಲಿಸಿರುವುದು ಕೊತೂಹಲ ಕರವಾದ ಒಳನೋಟವೊಂದನ್ನು ಒದಗಿಸುತ್ತದೆ. ನಮ್ಮ ಸಮಾಜದ ಸುಪರಿಚಿತ ಶೋಷಕರ ವಿರುದ್ಧ ಗಾಂಧೀಯವರೆಂದೂ ಈ ಬಗೆಯ ಸಾತ್ವಿಕ ಕ್ರೋಧ ಪ್ರಕಟಿಸಿದ್ದಿಲ್ಲವೆಂಬುದು ಗಮನಾರ್ಹ. ಅತ್ಯಂತ ಭ್ರಷ್ಟ ವ್ಯಾಪಾರಿಗಳಿಗೆ ಮತ್ತು ಕ್ರೂರ ಜಮೀನ್ದಾರರಿಗೆ ಕೂಡ ಕಾಂಗ್ರೆಸ್ಸಿನ ಬಾಗಿಲುಗಳು ಮುಚ್ಚಿರಲಿಲ್ಲ.

ಗಾಂಧೀಯವರ ಕಲ್ಪನೆಯ ಆದರ್ಶ ನಾರಿ

ಗಾಂಧೀಯವರ ದೃಷ್ಟಿಯಲ್ಲಿ ಸೀತೆಯೇ ಆದರ್ಶ ನಾರಿ. ಆದರೆ ಭಾರತೀಯ ಮಹಿಳೆಯರು ಹೆಂಡತಿಯ ಸ್ಥಾನದಿಂದ ಮೇಲೇರಿ "ಸೋದರಿ"ಯರಾಗಬೇಕೆಂದು ಅವರು ಕರೆ ನೀಡಿದರು. ಅವರ ಅಭಿಪ್ರಾಯದ ಪ್ರಕಾರ ಹೆಂಡತಿ ಎಂದೂ ಆ ಶಬ್ದದ ಪೂರ್ಣಾರ್ಥದಲ್ಲಿ ಸೋದರಿಯಾಗಲಾರಳು. "ಸೋದರಿ ಜಗತ್ತಿನ ಎಲ್ಲರಿಗೂ ಸೋದರಿಯೇ; ಆದರೆ ಹೆಂಡತಿಯು ತನ್ನನ್ನು ಓರ್ವ ಗಂಡಿಗೆ ಒಪ್ಪಿಸಿಕೊಳ್ಳುತ್ತಾಳೆ. ಪತ್ನೀತ್ವ ಬೇಕು, ಆದರೆ ಅದು ರಾಗಾನುರಾಗಗಳನ್ನು ತೃಪ್ತಿಪಡಿಸುವಷ್ಟಕ್ಕೆ ಮಿತಗೊಳ್ಳಬಾರದು." ನಮ್ಮ ಮಹಿಳೆಯರಿಗೆ "ಹೆಂಡಂದಿರಾಗಿ ಹೇಗಿರಬೇಕೆಂದು ಗೊತ್ತೇ ಹೊರತು ಸೋದರಿಯರಾಗಿ ಹೇಗಿರಬೇಕೆಂದು ಗೊತ್ತಿಲ್ಲ" ಎಂದು ಅವರು ವಿಷಾದಿಸಿದರು. ಬ್ರಹ್ಮಚರ್ಯವನ್ನು ಸ್ವಾಭಾವಿಕ ನಿಯಮವೆಂಬಂತೆ

ಅನುಸರಿಸುವ ಮೂಲಕ ಮತ್ತು 'ಸೇವಾ ಮನೋಭಾವದ ಕಿಡಿ'ಯನ್ನು ಬೆಳಗುವ ಮೂಲಕ 'ವಿಶ್ವ ಸೋದರಿ'ಯರಾಗುವುದು ಸಾಧ್ಯವೆಂಬುವುದು ಅವರ ಅಭಿಪ್ರಾಯ. ಗಾಂಧೀಯವರ ಕಲ್ಪನೆಯು 'ಆದರ್ಶ ಪತ್ನಿ ಸೀತೆ'ಯಾದರೂ ಪ್ರತಿಯೊಬ್ಬ ಪತಿಯೂ ಆದರ್ಶ ಪುರುಷನಾಗಲು ಸಾಧ್ಯವಿಲ್ಲ ಎಂಬುದನ್ನು ಅವರು ಅನುಮೋದಿಸಲು ಸಿದ್ಧರಿದ್ದರು. ಆದ್ದರಿಂದಲೆ ರಾಷ್ಟ್ರೀಯ ಸೇವೆಯಲ್ಲಿ ಭಾಗಿಯಾಗಲು ತವಕಿಸುವ ಪತ್ನಿಯೊಬ್ಬಳು ಗಂಡನ ಮಾತನ್ನು ಉಲ್ಲಂಘಿಸುವುದು ಹೇಗೆ ಎಂಬ ಪ್ರಶ್ನೆಗೆ ಗಾಂಧೀಯವರು ಉತ್ತರ ನೀಡುತ್ತಾ ಹೆಂಡತಿಯಾದವಳು ತನ್ನ ಭಾವನೆಗಳನ್ನು ಗಮನಿಸುವುದಾಗಲಿ, ತನ್ನ ಮೇಲೆ ಗಂಡನದೇ ಪರಮಾಧಿಕಾರ ಎಂದು ಭಾವಿಸುವುದಾಗಲಿ ಸರಿಯಲ್ಲ ಎಂದು ನುಡಿದರು. ಈ ದಿಸೆಯಲ್ಲಿ ೧೬ನೆಯ ಶತಮಾನದ ಸಂತ ಕವಯಿತ್ರಿ ಮೀರಾಬಾಯಿ ದಾರಿತೋರಿದ್ದಾಳೆಂದು ಅವರು ಭಾವಿಸಿದ್ದರು. ಗಾಂಧೀಯವರ ದೃಷ್ಟಿಯಲ್ಲಿ ಮೀರಾ ಹೆಂಡತಿ ಮತ್ತು ತಾಯಿಯ ಪರಿಮಿತ ಪಾತ್ರವನ್ನು ಧಿಕ್ಕರಿಸುವ ಧೈರ್ಯ ತೋರಿದವಳು; ತನ್ನ ಗಂಡ ಮತ್ತು ಆತನ ಬಲಿಷ್ಠ ಕುಟುಂಬ ವರ್ಗ ನೀಡಿದ ಯಾತನೆಗಳಿಂದ ಬೆಚ್ಚದೆ ಬೆದರದೆ ತಲೆಎತ್ತಿ ನಿಂತವಳು. ಸಾಮಾಜಿಕ ನಡುವಳಿಕೆಗೆ ವಿರುದ್ಧವಾಗಿ ಆಯ್ದುಕೊಂಡ ಹಾದಿಯಲ್ಲಿ ನಡೆಯುವ ತನ್ನ ಅಚಲ ನಿರ್ಧಾರ ಹಾಗೂ ನೈತಿಕ ಸ್ಥೈರ್ಯದಿಂದಾಗಿ ತನ್ನ ಗಂಡನನ್ನು ಸಹ ಓರ್ವ ಭಕ್ತನನ್ನಾಗಿ ಪರಿವರ್ತಿಸಲು ಆಕೆಗೆ ಸಾಧ್ಯವಾಯಿತು. ಹೀಗೆ "ಪ್ರತಿಯೊಬ್ಬ ಪತ್ನಿಗೂ ತನ್ನದೇ ಹಾದಿ ಕಂಡುಕೊಳ್ಳುವ ಹಕ್ಕಿದೆ. ಒಂದು ಘನವಾದ ಉದ್ದೇಶಕ್ಕಾಗಿ ಪತಿಯನ್ನು ವಿರೋಧಿಸುವ ಸಂದರ್ಭ ಬಂದರೆ ತನ್ನ ಹಾದಿ ಸರಿಯಾದುದೆಂದು ಮನವರಿಕೆಯಾದರೆ ಆಕೆ ಪರಿಣಾಮವನ್ನು ಎದುರಿಸಲೂ ಸಿದ್ಧವಾಗಿರಬೇಕು."

ದರಿದ್ರರ ಹಾಗೂ ನತದೃಷ್ಟರ ಸೇವೆ ಮಾಡುವ ಮೂಲಕ ಮಹಿಳೆಯರು 'ಕರುಣೆಯ ಸೋದರಿ'ಯರಾಗಬೇಕೆಂದು ಅವರು ಆಶಿ

ಸಿದರು. ಮಹಿಳೆಯರು ತಮ್ಮ ಬಿಡುಗಡೆಯ ಹೋರಾಟವನ್ನು ಇನ್ನಿತರ ಶೋಷಿತರ ಹೋರಾಟದೊಂದಿಗೆ ಸಮನ್ವಯಿಸಿಕೊಂಡು ಸಮಾನ ಉದ್ದೇಶಗಳಿಗಾಗಿ ಹೋರಾಡಬೇಕೆಂದು ಕರೆ ನೀಡಿದರು. ಹೀಗೆ ಮಹಿಳೆಯರ ಆಶೋತ್ತರಗಳನ್ನು ರಾಷ್ಟ್ರೀಯ ಆಶೋತ್ತರಗಳೊಂದಿಗೆ ಸಮ್ಮಿಲನಗೊಳಿಸುವ ಮೂಲಕ ಆಂದೋಳನಕ್ಕೆ ವಿಶಾಲ ವ್ಯಾಪ್ತಿ ಹಾಗೂ ವಿಶೇಷ ಸಮರ್ಥನೆಯನ್ನು ಗಾಂಧೀಯವರು ಒದಗಿಸಿದರು.

ಸ್ತ್ರೀಯರು ಕೇವಲ ತಮ್ಮ ಸಮಸ್ಯೆಗಳ ಬಗ್ಗೆ ಮಾತ್ರ ಆಸಕ್ತಿ ವಹಿಸದೆ ಒಟ್ಟು ಸಮಾಜದ ಪುನರ್ ನಿರ್ಮಾಣ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಬೇಕು. ಇದಕ್ಕಾಗಿ "ದೇಶದಲ್ಲಿರುವ ಕೆಲವೇ ಕೆಲವು ಸುಶಿಕ್ಷಿತ ಮಹಿಳೆಯರು ತಮ್ಮ ಪಶ್ಚಿಮದ ಶಿಬಿರಗಳಿಂದ ಭಾರತದ ಬಯಲಿಗೆ ಇಳಿದು ಬರಬೇಕು. ಆಗ ಮಹಿಳೆಯರ ಬಿಡುಗಡೆ, ಭಾರತದ ಸ್ವಾತಂತ್ರ್ಯ, ಅಸ್ಪೃಶ್ಯತಾ ನಿವಾರಣೆ, ಜನಸಮೂಹದ ಆರ್ಥಿಕ ಅಭಿವೃದ್ಧಿ ಇವೇ ಮುಂತಾದ ಸಮಸ್ಯೆಗಳು ಅವರು ಹಳ್ಳಿಗಳಿಗೆ ತೆರಳುವಂತೆ. ಹಳ್ಳಿಗಳ ಜೀವನದ ಸುಧಾರಣೆ ಪುನರ್ ನಿರ್ಮಾಣಕ್ಕೆ ಕಟಿಬದ್ಧರಾಗುವಂತೆ ಉತ್ತೇಜಿಸುತ್ತವೆ."

ಗಾಂಧೀಯವರ ದೃಷ್ಟಿಯಲ್ಲಿ ಮದುವೆ ಮತ್ತು ತಾಯ್ತನವಷ್ಟೇ ಹೆಣ್ಣಿನ ಜೀವನದ ಪರಮ ಧ್ಯೇಯವಲ್ಲ. ಸಮಾಜ ಸೇವೆಯ ಘನವಾದ ಉದ್ದೇಶಕಾಗಿ ಮದುವೆಯಾಗಲಾರೆನೆಂದು ನಿಶ್ಚಯಿಸುವುದು ಆತ್ಮ ಸಾಕ್ಷಾತ್ಕಾರದ ದೃಷ್ಟಿಯಿಂದ ಉನ್ನತ ಧ್ಯೇಯವೆಂದು ಅವರು ಭಾವಿಸಿದರು. "ಶಾಲೆ ಕಾಲೇಜುಗಳಿಂದ ಹೊರಗೆ ಬಂದೊಡನೆಯೆ ಬಹಳಷ್ಟು ಹೆಣ್ಣು ಮಕ್ಕಳು ಸಾರ್ವಜನಿಕ ಜೀವನದಿಂದ ಕಣ್ಮರೆಯಾಗುತ್ತಾರೆ" ಎಂದು ಅವರು ಪದೇಪದೇ ಬೇಸರ ವ್ಯಕ್ತ ಪಡಿಸುತ್ತಿದ್ದರು. ನಮ್ಮ ಹೆಣ್ಣುಮಕ್ಕಳು ಅತ್ಯುತ್ತಮ ಆದರ್ಶಗಳಿಂದ

ಸ್ಫೂರ್ತಿ ಪಡೆಯಬೇಕೆಂದು ಅವರು ಆಶಿಸಿದರು. "ಪ್ರತಿಯೊಬ್ಬ ಭಾರತೀಯ ಹೆಣ್ಣು ಮದುವೆಯಾಗಲೆಂದೇ ಹುಟ್ಟಿದವಳಲ್ಲ. ಒಬ್ಬನ ಸೇವೆ ಮಾಡುವ ಬದಲು ಇಡಿ ಸಮಾಜದ ಸೇವೆಗಾಗಿ ತಮ್ಮನ್ನು ಮುಡಿಪಾಗಿಟ್ಟುಕೊಂಡ ಅನೇಕ ಹುಡುಗಿಯರನ್ನು ನಾನು ನಿಮಗೆ ತೋರಿಸಬಲ್ಲೆ." ಆದರೂ ಗಾಂಧೀಯವರ ದೃಷ್ಟಿಯಲ್ಲಿ ಮದುವೆ ಮತ್ತು ತಾಯ್ತನವನ್ನು ವರ್ಜಿಸುವುದೆಂದರೆ ಲೈಂಗಿಕ ಸಂಬಂಧಗಳನ್ನು ಸಂಪೂರ್ಣವಾಗಿ ವರ್ಜಿಸುವುದೆಂದರ್ಥ.

ಅವಿವಾಹಿತರಾಗಿ ಉಳಿಯುವ ಉದ್ದೇಶದಿಂದ ಸಾಮಾಜಿಕವಾಗಿ ಉಪಯುಕ್ತ ಜೀವನ ನಡೆಸುವವರನ್ನು ಒಂದೆಡೆ ಗಾಂಧೀಯವರು ಪ್ರೋತ್ಸಾಹಿಸಿದರು. ತನ್ನದೇ ಮನೆ, ಕುಟುಂಬ ಎಂದು ಹೆಣಗುವವರ ಆಸಕ್ತಿಗಳು ಸೀಮಿತ. ಅವರ ಔದಾರ್ಯದ ಫಲ ಇಡೀ ಮಾನವತೆಗೆ ದೊರೆಯುವ ಬದಲು ಕೆಲವೇ ಕೆಲವು ಆಯ್ದ ವ್ಯಕ್ತಿಗಳಿಗೆ ಮಾತ್ರ ದೊರೆಯುತ್ತದೆ ಎಂಬ ಅಂಶವನ್ನು ಅವರ ವಿಚಾರದ ಒಂದು ಎಳೆ ಒತ್ತಿ ಹೇಳುತ್ತದೆ. ಇನ್ನೊಂದೆಡೆ ಗಾಂಧೀಯವರು ವಿವಾಹದ ಸಾಂಸ್ಥಿಕ ಸ್ವರೂಪವನ್ನು ಸಾರಾಸಗಟಾಗಿ ತಿರಸ್ಕರಿಸಲಿಲ್ಲ. ಏಕೆಂದರೆ, ಕಾಮವನ್ನು ಸಂಪೂರ್ಣವಾಗಿ ಜಯಿಸಬೇಕೆಂದು ಅವರೆಷ್ಟೇ ಪ್ರಚಾರ ಮಾಡಿದರೂ ಅದನ್ನು ನಿವಾರಿಸಲು ಸಾಧ್ಯವಿಲ್ಲ ಎಂಬುದನ್ನು ಮನಗಂಡಿದ್ದರು. ಅದೆಷ್ಟೇ ಅಸಮರ್ಪಕವೆನಿಸಿದರೂ ಮದುವೆಯೊಂದೇ ಲೈಂಗಿಕತೆಯನ್ನು ನಿಯಂತ್ರಣವಲ್ಲಿಡಬಹುದೆಂದು ಅವರು ಗಮನಿಸಿದ್ದರು. ಅವರು ವಿವಾಹ ಸಂಬಂಧಗಳಲ್ಲಿ ಕನಿಷ್ಟ ಮಟ್ಟದ ಲೈಂಗಿಕ ಸಂಪರ್ಕವನ್ನೂ ವಿವಾಹದ ಹೊರಗೆ ಸಂಪೂರ್ಣ ಲೈಂಗಿಕ ನಿರ್ಬಂಧವನ್ನೂ ಪ್ರತಿಪಾದಿಸಿದರು. "ಮದುವೆಯು ಬೇಲಿಯೋಪಾಯದಲ್ಲಿ ಧರ್ಮವನ್ನು ಕಾಪಾಡುತ್ತದೆ. ಬೇಲಿಯೇ ಮುರಿದು ಬಿದ್ದರೆ ಧರ್ಮವು ನುಚ್ಚುನೂರಾಗುವುದು. ನಿಯಂತ್ರಣವೇ ಧರ್ಮದ ತಳಹದಿ. ಮದುವೆ ಎಂಬುದು ನಿಯಂತ್ರಣವಲ್ಲದೆ ಮತ್ತೇನೂ ಅಲ್ಲ" ಎಂದಿದ್ದರು.

ಮದುವೆಯನ್ನು ಕುರಿತು ಅವರ ಈ ದ್ವಂದ್ವ ಮನೋಭಾವವು ಒಂದು ಮುಖ್ಯ ಅಂಶವನ್ನು ನಿರ್ಲಕ್ಷಿಸಿದೆ. ನಿಯಂತ್ರಣವು ಅರ್ಥ ಪೂರ್ಣವಾಗಬೇಕಾದರೆ ಅದು ಸ್ವಯಂಪ್ರೇರಿತವಾಗಿರಬೇಕು. ಆದರೆ ವಿವಾಹ ಸಂಬಂಧಗಳಲ್ಲಿ ಕಂಡು ಬರುವ ನಿಯಂತ್ರಣವು ಸಾಮಾಜಿಕ ವಾಗಿ ಆರೋಪಿತವಾದದ್ದು. ಈ ನಿರ್ಬಂಧದ ಉಲ್ಲಂಘನೆಯಾದರೆ – ಅದೂ ಮಹಿಳೆಯರಿಂದ – ಅವರು ಉಗ್ರ ಶಿಕ್ಷೆಯನ್ನು ಅನುಭವಿಸ ಬೇಕಾಗುತ್ತದೆ. ಸಧ್ಯ ರೂಢಿಯಲ್ಲಿರುವ ವಿವಾಹ ಪದ್ಧತಿಯು ಅಧಿಕಾರ ಸಂಬಂಧಗಳ ವಿಷಮ ಸ್ಥಿತಿಯಿಂದ ಉದ್ಭವಿಸುವ ದ್ವಂದ್ವ ನೀತಿಯನ್ನು ಸಾಂಸ್ಥೀಕರಿಸುತ್ತದೆ. ಈ ಅಂಶವನ್ನು ಗಾಂಧೀಯವರ ದ್ವಂದ್ವ ಮನೋಭಾವವು ಅಷ್ಟಾಗಿ ಗಮನಕ್ಕೆ ತೆಗೆದುಕೊಂಡಿಲ್ಲ. ಆದ್ದರಿಂದ ಗಂಡಸರಿಗೆ ಎಲ್ಲಿಲ್ಲದ ಸ್ವಾತಂತ್ರ್ಯವನ್ನು ದಯಪಾಲಿಸುವ ವಿವಾಹವೆಂಬ ಸಂಸ್ಥೆಯು ಮಹಿಳೆಯರನ್ನು ಅತ್ಯಂತ ನಿರ್ದಯವಾಗಿ ದಮನಿಸುತ್ತದೆ.

ಪ್ರತಿಯೋರ್ವ ಮಹಿಳೆಯ ಮೇಲೆ ಗಾಂಧೀಯವರ ವಿಚಾರಗಳ ಪ್ರಭಾವ

ಮದುವೆಯಾಗಲು ಒಪ್ಪದೆ ರಾಷ್ಟ್ರೀಯ ಆಂದೋಳನದಲ್ಲಿ ಧುಮುಕಿದ ಅನೇಕ ಮಹಿಳೆಯರ ವೈಯಕ್ತಿಕ ಆಕಾಂಕ್ಷೆಗಳನ್ನು ರೂಪಿಸುವುದರಲ್ಲಿ ಗಾಂಧೀ ಅಧಿಕತರ ಪ್ರಭಾವಶಾಲಿಗಳಾಗಿದ್ದರೆನ್ನಿಸು ತ್ತದೆ. ಸೀತೆಯ ಬಗೆಗಿನ ವಿಶೇಷ ಆಸಕ್ತಿಯ ಹೊರತಾಗಿಯೂ ಅವರ ಭಾಷಣಗಳು, ಸಂಭಾಷಣೆಗಳು ಹಾಗೂ ಬರವಣಿಗೆಗಳಿಂದ ವ್ಯಕ್ತವಾಗುವ ಚಿತ್ರವೆಂದರೆ ಮದುವೆಯನ್ನು ಸಾಮಾಜಿಕ ಅಗತ್ಯ ವೆಂದು ಸಹಿಸಿಕೊಳ್ಳಬಹುದಾದರೂ ಅದು ಅಪೇಕ್ಷಣೀಯವೇನಲ್ಲ, ಗೌರವಾರ್ಹವೂ ಅಲ್ಲ. ಘನವಾದ ಉದ್ದೇಶದಿಂದ ಮದುವೆಯ ಮಿತಿ ಗಳನ್ನು ಮೀರಿ ಹೊರಬಂದ ಮೀರಾಬಾಯಿ ಮುಂತಾದ ಅನೇಕ ಮಹಿಳೆಯರನ್ನು ಅವರು ಉದಾತ್ತ ಪಾತ್ರಗಳೆಂಬ ಗೌರವದಿಂದ

ಕಂಡರು. ಮಹಿಳೆಯು ಸಾಮಾಜಿಕ ಪುನರ್‌ನಿರ್ಮಾಣಕಿಯಾಗ ಬೇಕು ಹಾಗೂ ಪುರುಷಸದೃಶಳಾಗಿರಬೇಕೆಂಬ ಭಾವನೆಯನ್ನು ಮೂಡಿ ಸಲು ಯತ್ನಿಸಿದರು. ವಿವಾಹಕ್ಕಿಂತಲೂ ಏಕಾಂಗಿತನವೇ ಅಸ್ಮಿತ್ವದ ಘನತೆವೆತ್ತ ರೂಪ, ಸಂತಾನೋತ್ಪತ್ತಿಗಿಂತ ಬ್ರಹ್ಮಚರ್ಯವೇ ಗೌರ ವಾರ್ಹ ಎಂಬಿವೇ ವಿಚಾರಗಳು ಸ್ವಾತಂತ್ರ್ಯ ಆಂದೋಳನದಲ್ಲಿದ್ದ ಅನೇಕ ಮಹಿಳೆಯರಲ್ಲಿ ಮುಕ್ತಿಯ ಶಕ್ತಿಯಾಗಿ ಕೆಲಸ ಮಾಡಿದವು. ಇವರಲ್ಲಿ ಅನೇಕರು ಅವಿವಾಹಿತರಾಗಿ ಉಳಿಯಲು ಬಯಸಿದರು. ಇದರಿಂದಾಗಿ ಸಂಗಾತಿಗಳಾದ ಗಂಡಸರೊಂದಿಗೆ ಕೆಲಸ ಮಾಡುವಾಗ, ಅವರೊಂದಿಗೆ ಪ್ರತಿಸ್ಪಂದಿಸುವಾಗ ಅಸಾಧಾರಣವಾದ ಸ್ವಾತಂತ್ರ್ಯ ವನ್ನು ಅನುಭವಿಸಲು ಅವರಿಗೆ ಸಾಧ್ಯವಾಯಿತು.

ಇಷ್ಟಾದರೂ ಅವಿವಾಹಿತರಾಗಿಯೇ ಉಳಿಯ ಬಯಸಿದ ಸ್ತ್ರೀಯರ ಸಂಖ್ಯೆ ಸೀಮಿತವಾಗಿತ್ತು. ಅವರ ಸಾಮಾಜಿಕ, ಆರ್ಥಿಕ ಸನ್ನಿವೇಶದಿಂದಾಗಿ ಇದು ಅನೇಕ ಮಹಿಳೆಯರಿಗೆ ನಿಜವಾದ ಅವಕಾಶ ವಾಗಿ ಪರಿಣಮಿಸಲಿಲ್ಲ. ಆದರೆ ಆಂದೋಳನದಿಂದ ಉಂಟಾದ ಸಾಮಾಜಿಕ ಗೌರವದ ವಾತಾವರಣದಲ್ಲಿ ಕೆಲವೇ ಕೆಲವು ಮಹಿಳೆಯರು ಈ ನಿರ್ಧಾರ ಕೈಗೊಂಡರು. ಅವರ ಪ್ರಯತ್ನದ ಫಲವನ್ನು ಈಗಲೂ ಕಾಣಬಹುದು. ರಾಷ್ಟ್ರೀಯ ಆಂದೋಳನದಲ್ಲಿ ಭಾಗವಹಿಸಿ ಸ್ವಯಂ ನಿರ್ಧಾರದ ಮೂಲಕವೇ ಅವಿವಾಹಿತರಾಗಿ ಉಳಿದ ಮಹಿಳೆಯರ ಸಂಖ್ಯೆಯನ್ನು ಇಂದಿನ ತಲೆಮಾರಿನವರೊಂದಿಗೆ ಹೋಲಿಸಿದರೆ – ಅಂದಿನ ಸಂಖ್ಯೆಯೇ ಅಧಿಕವೆನಿಸುತ್ತದೆ.

ಮಹಿಳೆಯರ ಉದ್ಧಾರದ ಕುರಿತಾದ ಗಾಂಧೀಯವರ ವಿಚಾರ ಗಳಲ್ಲಿ ೧೯ ನೆಯ ಶತಮಾನದ ಸುಧಾರಕರ ವಿಚಾರಗಳಿಂದ ಭಿನ್ನವಾದ ಅಂಶಗಳೇನೂ ಕಂಡುಬರುವುದಿಲ್ಲ. ಮಹಿಳೆಯರ ಅಸಮಾನತೆಗೆ ಕಾರಣಗಳನ್ನು ವಿವರಿಸುವ ಅವರ ಪ್ರಯತ್ನಗಳು ಅನೇಕ ವೇಳೆ ಅಸಮರ್ಪಕವೆನಿಸುತ್ತವೆ; ಮಾತ್ರವಲ್ಲದೆ ಅವು ಸಮಸ್ಯೆಯ ಬಾಹ್ಯ-

ಲಕ್ಷಣಗಳಿಗೆ ಮಾತ್ರ ಸೀಮಿತವಾಗಿವೆ. ಉದಾಹರಣೆಗೆ, ಶಾರದಾ ಕಾಯ್ದೆಯನ್ನು ಅಂಗೀಕರಿಸುವ ಸಂದರ್ಭದಲ್ಲಿ ಗಾಂಧೀಯವರ "ಪರಸ್ಪರ ಕಾಮಪಿಪಾಸೆಯೇ ಸ್ತ್ರೀ ಪುರುಷರ ನಡುವಣ ಅಸಮಾನತೆ ಯೆಂಬ ಅನಿಷ್ಟದ ಮೂಲ" ಎಂದು ಬಣ್ಣಿಸಿದರು. ಸ್ತ್ರೀಯರ ಅನೇಕ ಅನರ್ಹತೆಗಳಿಗೆ ಇದೇ ಕಾರಣ. ಇದೇ ರೀತಿ, 'ಪರ್ದಾ ಪದ್ಧತಿ'ಯ ಆರಂಭವನ್ನು "ಹಿಂದೂ ಅವನತಿಯ ಕಾಲಕ್ಕೆ ಗಂಟು ಹಾಕಲಾಗಿದೆ". "ಪುರುಷನ ಕುರುಡು ನಂಬಿಕೆ ಅಜ್ಞಾನ ಮತ್ತು ಮದಾಂಧತೆಯೆ ಸತಿ ಪದ್ಧತಿಯ ಮೂಲ". ಗಂಡಸರು ಹೆಂಗಸರಿಗೆ ಹಿಂಸೆ ಕೊಟ್ಟರೆ ಗಾಂಧೀಯವರ 'ರೋಗ ಪರೀಕ್ಷಣ'ದ ಪ್ರಕಾರ "ಆಧುನಿಕ ಹುಡುಗಿಯರು ಅರ್ಧ ಡಜನ್ ರೋಮಿಯೋಗಳಿಗೆ ಜೂಲಿಯಟ್‌ಗಳಾಗ ಬಯಸುತ್ತಾರೆ. ಅವರು ರೋಮಾಂಚನ ಪ್ರಿಯರು". ಹೀಗೆಯೆ, "ಬಾಲ್ಯವಿವಾಹದಂಥ ದುಷ್ಟ ಪದ್ಧತಿಗೆ ಪುರುಷರ ಕಾಮದಾಹವೇ ಕಾರಣ". ಆದ್ದರಿಂದ ಗಾಂಧೀಯವರು ಕೆಲವು ಸಲ ಸೂಚಿಸುವ ಪರಿಹಾರಗಳು ಪ್ರಾಥಮಿಕ ಸ್ವರೂಪದವು. ನಗರಗಳನ್ನು ಬಿಟ್ಟು ಹಳ್ಳಿಗಳಿಗೆ ತೆರಳಿ ಕೆಲಸ ಮಾಡಿರೆಂದು ಗಾಂಧೀ ಯವರು ಮಹಿಳೆಯರಿಗೆ ಉಪದೇಶಿಸಿದರು. ಗಾಂಧೀಯವರ ಭಾವನೆಯಂತೆ ಹಳ್ಳಿಗಳಲ್ಲಿ ಮಹಿಳೆಯರನ್ನು ಹೆಚ್ಚು ಆದರದಿಂದ ಕಾಣಲಾಗುತ್ತದೆಯಲ್ಲದೆ ಅಲ್ಲಿ ಅವರ ಶೀಲ ಹೆಚ್ಚು ಸಂರಕ್ಷಿತ ಕೂಡ.

ವರ್ಣಿಸಲು ಬಳಸಿದ ಶಬ್ದಗಳಿಗಿಂತ ವಾಸ್ತವದಲ್ಲಿ ಹೆಚ್ಚು ಕ್ರಿಯಾತ್ಮಕವಾದ ವ್ಯಕ್ತಿತ್ವ ಪಡೆದಿದ್ದ ಅಪರೂಪದ ನಾಯಕರಲ್ಲಿ ಗಾಂಧೀ ಓರ್ವರು. ಸಾರ್ವಜನಿಕ ಜೀವನದಲ್ಲಿ ಹೊಸ ಘನತೆ, ಗೌರವ, ರಾಷ್ಟ್ರದ ಮುಖ್ಯ ವಾಹಿನಿಯಲ್ಲಿ ಹೊಸ ಸ್ಥಾನಮಾನ, ಹೊಸ ಆತ್ಮ ವಿಶ್ವಾಸ, ಆತ್ಮ ವೀಕ್ಷಣೆ ಮತ್ತು ಶೋಷಣೆಯ ವಿರುದ್ಧ ತಾವೇ ಸ್ವಯಂ ಹೋರಾಡಬಹುದೆಂಬ ಹೊಸ ಎಚ್ಚರ – ಈ ಎಲ್ಲವನ್ನೂ ಗಳಿಸಲು ಮಹಿಳೆಯರಿಗೆ ಗಾಂಧೀ ನೆರವಾದರು. ಈ ದಿಸೆಯಲ್ಲಿ

ಇಂದಿಗೂ ಅವರು ಬೀರಿದ ಪ್ರಭಾವ ಮತ್ತು ಪರಿಣಾಮವನ್ನು ಮೀರಿಸಲು ಬೇರೊಬ್ಬರಿಂದ ಸಾಧ್ಯವಿಲ್ಲ. ಜಡವಸ್ತುಗಳಂತಿದ್ದ ಮಹಿಳೆಯರು ಗಾಂಧೀಯವರಿಂದಾಗಿ ಕ್ರಿಯಾಶೀಲ ಪ್ರಜೆಗಳಾದರು; ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಅನಾಹುತಗಳನ್ನು ನಿವಾರಿಸುವ ಸುಧಾರಣೆಯ ಪ್ರವರ್ತಕರಾದರು.

೨

ಸ್ವರಾಜ್ಯಕ್ಕಾಗಿ ನಡೆದ ಸಂಘರ್ಷದಲ್ಲಿ ಮಹಿಳೆಯರ ಪಾತ್ರ

ಮಹಿಳಾ ಶಕ್ತಿಯೊಂದಿಗೆ ಗಾಂಧೀಯವರ ಪ್ರಥಮ ಮುಖಾಮುಖಿ ದಕ್ಷಿಣ ಆಫ್ರಿಕೆಯಲ್ಲಾಯಿತು. "ಪುಸ್ತಕಜ್ಞಾನ ಬೇಕಿಲ್ಲದ, ಆದರೆ, ಯಾತನೆ ಮತ್ತು ನಂಬಿಕೆಯಿಂದ ಹೊಮ್ಮುವ ವಿಶಾಲ ಹೃದಯದ ಅಗತ್ಯವಿರುವ ಸತ್ಯಾಗ್ರಹದಲ್ಲಿ" ಮಹಿಳೆಯರು ಹೇಗೆ ಧುರೀಣರಾಗಬಹುದೆಂಬುದನ್ನು ದಕ್ಷಿಣ ಆಫ್ರಿಕೆಯಲ್ಲಿ ಗಾಂಧೀ ಮನಗಂಡರು. ೧೯೧೩ ರಲ್ಲಿ ಕರಾಳ ಮಸೂದೆಯ ವಿರುದ್ಧ ನಡೆದ ಚಳವಳಿಯ ಸಂದರ್ಭ. ಭಾರತೀಯರ ಮೇಲೆ ಆದಾಗಲೆ ವಿಧಿಸಿದ್ದ ನಿರ್ಬಂಧಗಳನ್ನು ತೆಗೆದು ಹಾಕುವ ಬದಲು ಸುಪ್ರೀಂಕೋರ್ಟ್ ತನ್ನ ಹೊಸ ತೀರ್ಪೊಂದರಲ್ಲಿ ಹಿಂದೂ, ಮುಸ್ಲಿಂ ಹಾಗೂ ಪಾರ್ಸಿ ಮದುವೆಗಳೆಲ್ಲ ಅಸಿಂಧು ಎಂದು ಘೋಷಿಸಿತು. ಗಾಂಧೀಯವರು "ಇದ್ದಕ್ಕಿದ್ದಂತೆ ಆವೇಶಭರಿತ ಆರಾಧಕರ ಸಂಘಟಿತ ತಂಡವೊಂದರ ನಾಯಕರಂತೆ ತಮ್ಮನ್ನು ತಾವು ಕಂಡುಕೊಂಡರು." ದೀರ್ಘ ವಿಳಂಬದ ಬಳಿಕ ಮಹಿಳೆಯರೂ ಸತ್ಯಾಗ್ರಹಕ್ಕೆ ಧುಮುಕಿದ್ದರಿಂದಾಗಿ ಹೊಸ ಶಕ್ತಿ ಸಂಚಾರವಾದಂತಾಯಿತು. ಸ್ತ್ರೀಯರು ಸ್ವಇಚ್ಛೆಯಿಂದ ಸೆರೆಮನೆ ಸೇರಿದರು. ಕಷ್ಟಗಳನ್ನು ಅನುಭವಿಸಿದರು. ಹೋರಾಟದ ಕಾಲದಲ್ಲಿ ಅವರು ತಮ್ಮ ಬಂಧುಬಾಂಧವರನ್ನು ಅಗಲ ಬೇಕಾಯಿತು. ಈ ಅಗಲಿಕೆಯಿಂದಾಗಿ ಕೆಲವರು ತಮ್ಮ ಮಕ್ಕಳನ್ನು ಕಳೆದುಕೊಂಡರು; ಆದರೂ ಧೃತಿಗೆಡಲಿಲ್ಲ. ಸ್ತ್ರೀಯರ ಈ ಮನವಿಗಳಿಗೆ ಮನ್ನಣೆ ಕೊಟ್ಟ ಸಾವಿರಾರು ಗಣಿ ಕೆಲಸಗಾರರು ಪ್ರತಿಭಟನಾ ಪ್ರದರ್ಶನವೊಂದರಲ್ಲಿ ಭಾಗವಹಿಸಿದರು. ಸತ್ಯಾಗ್ರಹದ ಈ ಯಶಸ್ಸು ಸಣ್ಣದೇ

ನಲ್ಲ. ಏಕೆಂದರೆ ಮಹಿಳೆಯರ ನೈತಿಕ ಶಕ್ತಿಯಿಂದಾಗಿ ಸತ್ಯಾಗ್ರಹವು ಸಫಲವಾಯಿತು. ಗಾಂಧೀಯವರು ಕೂಡಲೆ ಇದರಿಂದ ಪಾಠ ಕಲಿತರು. "ಮಹಿಳೆಯರ ಸ್ಥಿತಿಗತಿಗಳಿಂದಾಗಿ ನಮ್ಮ ಅನೇಕ ಆಂದೋಳನಗಳು ಅರ್ಧಕ್ಕೆ ನಿಂತುಬಿಡುತ್ತವೆ. ನಮ್ಮ ಬಹಳಷ್ಟು ಕಾರ್ಯಗಳು ಸೂಕ್ತ ಪರಿಣಾಮ ಬೀರುತ್ತಿಲ್ಲ. ನಮ್ಮ ಜನರು ಪೈಸೆ ಉಳಿಸಲು ಹೋಗಿ ರೂಪಾಯಿ ಕಳೆದುಕೊಳ್ಳುವ ವ್ಯಾಪಾರಿಯಂತೆ". ಗಾಂಧೀಯವರಾದರೋ ಭಾರತದಲ್ಲಿ ತನ್ನ ಆದರ್ಶದ ಹಂಬಲದಲ್ಲಿ ಸತ್ಯಾಗ್ರಹವೆಂಬ ಹೊಸ ಬಂಡವಾಳ ಹೂಡಿ ಅಧಿಕ ಲಾಭ ಗಳಿಸಲು ಹವಣಿಸಿದರು.

ಮಹಿಳೆಯರ ಸಂಘರ್ಷವನ್ನು ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಳನದೊಂದಿಗೆ ಮಿಳಿತಗೊಳಿಸುವ ಉದ್ದೇಶದಿಂದ ಗಾಂಧೀಯವರು ೧೯೨೧ ರಲ್ಲಿ ಮೊದಲ ಅಸಹಕಾರ ಆಂದೋಳನದಲ್ಲಿ ಮಹಿಳೆಯರನ್ನು ಬುದ್ಧಿಪೂರ್ವಕವಾಗಿ ಸೇರಿಸಿಕೊಂಡರು. ಮಹಿಳೆಯರು ಮನೆಯಲ್ಲಿದ್ದುಕೊಂಡೇ ಆಂದೋಳನದಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಅಸಹಕಾರದ ಅಂಗವಾಗಿ ಸರಕಾರ ಮತ್ತು ಅದರ ಅಕ್ರಮ ಕಾನೂನುಗಳನ್ನು ಶಾಂತಿಯುತ ರೀತಿಯಲ್ಲಿ ವಿರೋಧಿಸಲು ಸರಕಾರಿ ಶಿಕ್ಷಣ ಸಂಸ್ಥೆಗಳು, ನ್ಯಾಯಾಲಯ ಹಾಗೂ ಶಾಸನ ಸಭೆಗಳನ್ನು ಬಹಿಷ್ಕರಿಸಲು ಕಾಂಗ್ರೆಸ್ಸಿಗರಿಗೆ ಕರೆನೀಡಲಾಗಿತ್ತು. ಬ್ರಿಟಿಷ್ ವಸ್ತುಗಳ ಬಹಿಷ್ಕಾರ, ನೂಲುವಿಕೆ ಹಾಗೂ ಖಾದಿ ವಸ್ತ್ರಧಾರಣೆಯ ಸುತ್ತ ರಚನಾತ್ಮಕವಾದ ಸ್ವದೇಶಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಹಿಳೆಯರ ಮನೆವಾರ್ತೆಯ ದೆಸೆಯಿಂದಾಗಿ ಅವರು ಸಮಾಜಕ್ಕೆ ಸಲ್ಲಿಸಬಹುದಾದ ಕೊಡುಗೆಯ ಮೇಲೆ ಪರಿಮಿತಿ ಹೇರಲ್ಪಟ್ಟಿದೆಯಷ್ಟೆ. ಈ ಪರಿಮಿತಿಯ ಬಗ್ಗೆ ಗಾಂಧೀಯವರಿಗೆ ಗಂಭೀರ ಆಕ್ಷೇಪಗಳೇನೂ ಇಲ್ಲ. ಅವರ ಸ್ವದೇಶಿ ಕಾರ್ಯಕ್ರಮ ಹಾಗೂ ಅಸಹಕಾರ ಆಂದೋಳನ

ಮಹಿಳೆಯರ ಈ ಪರಿಸ್ಥಿತಿಗೆ ಹೊಂದಿಕೊಳ್ಳುವಂತಿತ್ತು. ವಾಸ್ತವವಾಗಿ ಗಾಂಧೀಯವರ ಕಾರ್ಯಕ್ರಮ ಸ್ತ್ರೀಯರ ಮನೆವಾರ್ತೆ ಕೆಲಸಗಳಿಗೆ ಪೂರಕವೆಂಬಂತೆ ಇತ್ತು; ಆದರೂ ಅವರು ಮಹಿಳೆಯರ ಬದುಕಿಗೆ ಒಂದು ಉದ್ದೇಶಬದ್ಧತೆಯನ್ನು ದೊರಕಿಸಿಕೊಟ್ಟರು. "ನೂಲುವಿಕೆ ತೀರ ಸಾವಧಾನದ ಒಂದು ನಿಶ್ಯಬ್ದ ಪ್ರಕ್ರಿಯೆ. ಮಹಿಳೆಯು ತ್ಯಾಗದ ಸಾಕಾರ ಮೂರ್ತಿ. ಆದ್ದರಿಂದಲೇ ಆಕೆ ಅಹಿಂಸೆಯ ಪ್ರತೀಕ. ಹೀಗಾಗಿ ಅವಳು ಮಾಡುವ ಕೆಲಸಗಳೂ ಕೂಡ ಶಾಂತಿಗೆ ಹೆಚ್ಚು ಒತ್ತಾಸೆ ನೀಡುತ್ತವೆ".

ಗಮನಾರ್ಹವಾದ ಒಳನೋಟಗಳನ್ನು ಹೊಂದಿದ್ದ ಗಾಂಧೀಯವರು ಮಹಿಳೆಯರ ಸಾಂಪ್ರದಾಯಿಕ ಪಾತ್ರವನ್ನು ಪ್ರಶ್ನಿಸದೆಯೂ ಅವರನ್ನು ತಮ್ಮ ಆಂದೋಲನದ ಮುಖ್ಯ ಸಾಮಾಜಿಕ ತಳಹದಿಯಾಗಿ ಮಾಡಿಕೊಂಡರು. ರೈತರು ಹಾಗೂ ವಿದ್ಯಾರ್ಥಿಗಳಿಗೆ ಹೇಳಿದಂತೆ ಗಾಂಧೀಯವರು ಮಹಿಳೆಯರಿಗೂ ಕೂಡ ತಮ್ಮ ಪರಿಸ್ಥಿತಿಯನ್ನು ಮಾತ್ರವಲ್ಲದೆ ಸಾಮಾಜಿಕ ಪರಿಸ್ಥಿತಿಯನ್ನೂ ಬದಲಾಯಿಸುವ ಜವಾಬ್ದಾರಿ ಹೊರಬೇಕೆಂದು ತಿಳಿಸಿದರು. "ಭಾರತದ ಆರ್ಥಿಕ ಹಾಗೂ ನೈತಿಕ ಮುಕ್ತಿ ಮುಖ್ಯವಾಗಿ ನಿಮ್ಮ ಹೆಗಲ ಮೇಲಿದೆ" ಎಂದರು. ಖಾದಿಯು ಸ್ವಾವಲಂಬನೆ ಹಾಗೂ ನವಚೈತನ್ಯದ ಸಂಕೇತವೆಂದು ಹಲವರು ತಿಳಿದುದರಿಂದಾಗಿ ಅದು ಹಲವಾರು ಸಮಸ್ಯೆಗಳನ್ನು ಪರಿಹರಿಸಬಹುದೆಂದು ಭಾವಿಸಲಾಗುತ್ತಿತ್ತು. "ಸ್ವದೇಶಿಯ ಈ ರೂಪದ ಮೇಲೆ ಆಣೆಯಿಟ್ಟು ಹೇಳುತ್ತೇನೆ.' ಅರೆಗೆಲಸ ಹಾಗೂ ಉಪವಾಸ ಜೀವನ ನಡೆಸುವ ಭಾರತದ ಮಹಿಳೆಯರಿಗೆ ಇದರ ಮೂಲಕವೇ ನಾನು ಉದ್ಯೋಗ ಒದಗಿಸಬಹುದು. ಈ ಮಹಿಳೆಯರು ನೂಲು ತೆಗೆದು ಭಾರತದ ಜನರಿಗೆ ಖಾದಿ ತೊಡಿಸುವಂತಾಗಬೇಕೆಂಬುದು ನನ್ನ ಆಲೋಚನೆ". ವಸಾಹತುಶಾಹಿಯ ಪ್ರಭಾವದಿಂದಾಗಿ ಭಾರತದ ಗುಡಿ ಕೈಗಾರಿಕೆಗಳು ಅದರಲ್ಲೂ ಮುಖ್ಯವಾಗಿ ವಸ್ತ್ರೋದ್ಯಮಯು

ಅವನತಿ ಹೊಂದಿತು. ಇದರ ಪರಿಣಾಮವಾಗಿ ಮಿಲಿಯಗಟ್ಟಲೆ ಸ್ತ್ರೀಯರು ತಮ್ಮ ಜೀವನೋಪಾಯವನ್ನು ಕಳೆದುಕೊಂಡರು. ಅವರೆಲ್ಲ ಗಾಂಧೀಯವರ ಕರೆಗೆ ಓಗೊಟ್ಟವರು.

ಗುಜರಾತ ಹಿಂದೂ ಸ್ತ್ರೀ ಮಂಡಲದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ ಗಾಂಧೀಯವರು ನೂಲುವುದು ಮತ್ತು ನೇಯು ವುದು ಮಹಿಳೆಯರ ಪಾಲಿಗೆ "ಉದ್ದಿಮೆಯ ಶಾಲೆಯಲ್ಲಿ ಮೊದಲ ಪಾಠ"ವೆಂದು ನುಡಿದರು. ಮಧ್ಯಮ ವರ್ಗದ ಮಹಿಳೆಯರಿಗೆ 'ಚರಖ'ವು - ಕುಟುಂಬದ ಆದಾಯಕ್ಕೆ ಪೂರಕವಾದರೆ, ಬಡ ಮಹಿಳೆ ಯರಿಗೆ ಅದು ಜೀವನೋಪಾಯ. ಇದಲ್ಲದೆ "ನೂಲುವ ಚಕ್ರವು ವಿಧವೆಯ ಪ್ರೀತಿಪೂರ್ವಕ ಸಂಗಾತಿ". ಆದರೆ ಸುಶಿಕ್ಷಿತ, ಶ್ರೀಮಂತ ಮಹಿಳೆಯರ ಪಾಲಿಗೆ "ನೂಲು ತೆಗೆಯಿರಿ" ಎಂಬ ಗಾಂಧೀಯವರ ಕರೆಯು "ಒಂದು ಕರ್ತವ್ಯ-ಧರ್ಮ". ಅದು ಈ ದೇಶದ ಬಡ ಮಹಿಳೆಯರ ಬದುಕುಗಳೊಂದಿಗೆ ಅವರ ಬದುಕುಗಳನ್ನು ಬೆಸೆಯುವ ಕೊಂಡಿ.

ಅದ್ದರಿಂದಲೆ ಖಾದಿ ಬದುಕಿನ ವಿವಿಧ ಸ್ತರಗಳಿಂದ ಬಂದ ಮಹಿಳೆಯರನ್ನು ಒಗ್ಗೂಡಿಸುವ ಸಾಧನವಾಯಿತು. ಅನೇಕ ಸಾಮಾನ್ಯ ಮಹಿಳೆಯರ ಪಾಲಿಗೆ ಖಾದಿ ಎಂದರೆ ನೂಲುವುದು, ನೇಯುವುದು; ಅದೇ ಶ್ರೀಮಂತ ಮಹಿಳೆಯರಿಗೆ ವಿದೇಶಿ ನಾಜೂ ಕನ್ನು ತ್ಯಜಿಸಿ, ದೇಹ ಮನಸ್ಸನ್ನು ಪವಿತ್ರಗೊಳಿಸುವ ಸಾಧನವೆಂಬ ಎಂಬ ಅರ್ಥ ಸ್ಫುರಿಸಿತು. ೧೯೨೧ ರಲ್ಲಿ ವಿದೇಶಿ ವಸ್ತ್ರಗಳನ್ನು ಸುಡುವ ಕಾರ್ಯಾಚರಣೆ ವ್ಯಾಪಕವಾಗಿ ಹಬ್ಬಿತು. ಸರಳಾದೇವಿ ಚೌಧರಾಣಿಯವರು ಸಮಾರಂಭಗಳಿಗೆ ಖಾದಿ ಸೀರೆಯುಟ್ಟು ಹೋಗುವ ಸಂಪ್ರದಾಯವನ್ನು ಆರಂಭಿಸಿದರು. ಅವರು ಖಾದಿಗೆ ಬೆಂಬಲ ಕೋರಿ ಉತ್ತರ ಭಾರತದ ಹಲವಾರು ಪ್ರಾಂತ್ಯಗಳಲ್ಲಿ ಸಂಚರಿಸಿದರು. ತ್ಯಾಗ, ನಿರ್ಭಯತೆ ಹಾಗೂ ಸರ್ವಸ್ವವನ್ನೂ ಆಂದೋಳನಕ್ಕೆ

ಅರ್ಪಿಸುವ ಮನೋಭಾವ ಇವೇ ಮುಂತಾದ ಗುಣಗಳನ್ನು ಗಾಂಧೀಯವರು ನಾರಿಯರ ಆದರ್ಶ ಗುಣಗಳೆಂದು ಎತ್ತಿಹಿಡಿದರು. ಈ ಆದರ್ಶ ಗುಣಗಳಿಗೆ ತಕ್ಕಂತೆ ಬದುಕಿದ ಸರಳಾದೇವಿ ಚೌಧರಾಣಿ ಹಾಗೂ ಅವರಂತಹ ಅನೇಕರು ಆಧುನಿಕ ನಾರೀಮಣಿಯ ಸಂಕೇತವಾದರು. ಚರಖಾದಿಂದ ನೂಲು ತೆಗೆಯುವುದು ಮತ್ತು ಖಾದಿ ವಸ್ತ್ರಧಾರಣೆಯ ಪರವಾಗಿ ಗಾಂಧೀಯವರು ನಡೆಸಿದ ಅವ್ಯಾಹತ ಪ್ರಚಾರವು ದೇಶದ ಪ್ರತಿಯೊಂದು ಮನೆ ಮನೆಗೂ ರಾಷ್ಟ್ರೀಯತೆ ಹಾಗೂ ಸ್ವಾತಂತ್ರ್ಯದ ಸಂದೇಶ ಮುಟ್ಟಿಸಲು ನಿಯೋಜಿತವಾಗಿತ್ತು.

ವಸಾಹತುಶಾಹಿಯ ಆಡಳಿತದ ವಿರುದ್ಧದ ಹೋರಾಟ ಮುಂತಾದ ಅಮೂರ್ತವಾದ ರಾಜಕೀಯ ವಿಚಾರಗಳು ಈ ರೀತಿಯಾಗಿ ಸಾಮಾನ್ಯ ಮನುಷ್ಯನ ಮುಂದೆ ಮೂರ್ತರೂಪ ತಳೆದವು. ಇದು ಮಹಿಳೆಯರನ್ನು ತಲಪುವ ಒಂದು ವಿಧಾನ ಮಾತ್ರವಲ್ಲದೆ ಅವರ ಖಾಸಗಿ ಜೀವನ ಮತ್ತು ರಾಷ್ಟ್ರದ ಆರ್ಥಿಕ, ರಾಜಕೀಯ ಜೀವನವನ್ನು ಬೆಸೆಯುವ ವಿಧಾನ ಕೂಡ. ಏನನ್ನು ತೊಡಬೇಕು, ಏನನ್ನು ತೊಡಬಾರದು ಎಂಬ ನಿರ್ಣಯವು ಬಹುಪಾಲು ಮಹಿಳೆಯರ ನಿಯಂತ್ರಣದಲ್ಲಿರುತ್ತದೆ. ಆದರೆ ಮೇಲ್ನೋಟಕ್ಕೆ ನೀರಸವಾಗಿ ಕಾಣುವ ಜೀವನದ ಈ ರಂಗಕ್ಕೆ ಗಾಂಧೀಯವರು ಒಂದು ಹೊಸ ರಾಜಕೀಯ ಹಾಗೂ ನೈತಿಕ ಮಹತ್ವ ದೊರಕಿಸಿಕೊಟ್ಟರು.

ನೂಲುವುದು, ಖಾದಿ ಧರಿಸುವುದು ಅತ್ಯಂತ ಸರಳವಾದ, ಕಿಂಚಿತ್ತೂ ನಾಟಕೀಯವಲ್ಲದ, ವಿಶೇಷತ: ಶೌರ್ಯ ಪ್ರದರ್ಶನಕ್ಕೆ ಅವಕಾಶವಿಲ್ಲದ ಒಂದು ಆಯ್ಕೆ. ಇಷ್ಟಲ್ಲದೆ ಅದು ಪ್ರತಿಯೊಬ್ಬ ವ್ಯಕ್ತಿಯ ಜೀವನ ಸಿದ್ಧಾಂತ ಅಥವಾ ಬದುಕುವ ದಾರಿಯ ಪ್ರಜ್ಞಾಪೂರ್ವಕ ಆಯ್ಕೆಯನ್ನು ಪ್ರತಿಬಿಂಬಿಸುತ್ತದೆ. ವಸಾಹತುಶಾಹಿ ಆಡಳಿತದ ವಿರುದ್ಧ ಪ್ರತಿಭಟನೆ, ಬಡವರು ಹಾಗೂ ಶೋಷಿತರೊಂದಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳುವುದು, ಸ್ವಾವಲಂಬನೆ

ಹಾಗೂ ಸ್ವಾತಂತ್ರ್ಯದ ಸಂಕಲ್ಪವನ್ನು ಪ್ರತಿಷ್ಠಾಪಿಸುವುದು – ಹೀಗೆ ಖಾದಿ ಧರಿಸುವುದರ ಅರ್ಥ ಹಲವು ಬಗೆಯಾಗಿತ್ತು.

ತಾಳಿಕೆ, ಬಾಳಿಕೆ, ಸೌಲಭ್ಯ ಹಾಗೂ ಕಡಮೆ ಬೆಲೆಯ ದೃಷ್ಟಿಯಿಂದ ನೋಡಿದರೆ ಖಾದಿ ನಿಜವಾಗಿಯೂ ವಿದೇಶಿ ಮಿಲ್ ಬಟ್ಟೆಯೊಂದಿಗೆ ಸ್ಪರ್ಧಿಸುವುದು ಸಾಧ್ಯವಿರಲಿಲ್ಲ ಎಂಬ ಮಾತನ್ನು ನೆನಪಿಡಬೇಕು. ಆದ್ದರಿಂದಲೆ ಖಾದಿ ವಸ್ತ್ರಧಾರಣೆ ಎನ್ನುವುದು ಸಂಬಂಧಪಟ್ಟ ವ್ಯಕ್ತಿ ಸ್ವಾತಂತ್ರ್ಯಕಾಗಿ ಬೆಲೆ ತೆರಲು ಸಿದ್ಧನಿದ್ದಾನೆ, ಸ್ವಾತಂತ್ರ್ಯ ಸಂಗ್ರಾಮದ ಉತ್ಕರ್ಷಕ್ಕೆ ಕೊಡುಗೆ ನೀಡಲೆಂದು ಸ್ವಇಚ್ಛೆಯಿಂದ ಕಷ್ಟ ಜೀವನವನ್ನು ಆಯ್ದುಕೊಂಡಿದ್ದಾನೆ ಎಂಬ ಒಂದು ವ್ಯಕ್ತಿಗತ ಹೇಳಿಕೆಯಾಯಿತು.

ಕೆಲವು ವ್ಯಾವಹಾರಿಕ ಕಾರಣಕ್ಕಾಗಿ ಸ್ವದೇಶಿ ಆಂದೋಳನದಲ್ಲಿ ಮಹಿಳೆಯರ ತೊಡಗುವಿಕೆ ಅವಶ್ಯಕವೆನಿಸಿತು. "ಸ್ತ್ರೀಯರು ಸಹಾಯ ಮಾಡದಿದ್ದರೆ ಸ್ವದೇಶಿ ಪ್ರತಿಜ್ಞೆಯ ಪಾಲನೆ ಕಷ್ಟಸಾಧ್ಯ. ಈ ವಿಷಯದಲ್ಲಿ ಕೇವಲ ಗಂಡಸರು ಏನೂ ಮಾಡಲಾರರು. ಅವರಿಗೆ ತಮ್ಮ ಮಕ್ಕಳ ಮೇಲೆ ನಿಯಂತ್ರಣವಿಲ್ಲ. ಅದೇನಿದ್ದರೂ ಮಹಿಳಾ ವಿಭಾಗ. ಮಕ್ಕಳ ಲಾಲನೆ ಪಾಲನೆ ಮಾಡುವುದು ತಾಯಿಯ ಕರ್ತವ್ಯ; ಆದ್ದರಿಂದ ಮಹಿಳೆಯರಲ್ಲಿ ಸ್ವದೇಶಿಯ ಕಿಡಿ ಹೊತ್ತಿ ಉರಿಯಬೇಕು. ಅದು ಎಲ್ಲಿಯವರೆಗೆ ಆಗುವುದಿಲ್ಲವೋ ಅಲ್ಲಿಯ ವರೆಗೆ ಪುರುಷರು ವಚನಬದ್ಧರಾಗಲು ಸಾಧ್ಯವಿಲ್ಲ". ಹೀಗಾಗಿ ಸಂಪ್ರದಾಯ ಶರಣತೆಯ ಸೌಧವೆನಿಸಿದ ಕುಟುಂಬ ಅಥವಾ ಮನೆಯನ್ನು ಒಂದು ಘಟಕವಾಗಿ ಸ್ವೀಕರಿಸಿ ಅಲ್ಲಿ ಪ್ರಚೋದನೆಯುಂಟು ಮಾಡುವ ಅಗತ್ಯವಿದೆ. ಒಟ್ಟು ಜನಸಂಖ್ಯೆಯ ಒಂದರ್ಧ ಭಾಗ ನಿಷ್ಕ್ರಿಯವಾಗಿದ್ದರೆ, ನಿರಾಸಕ್ತಿ ಪ್ರದರ್ಶಿಸಿದರೆ ಯಾವುದೇ ಆಂದೋಳನ ಯಶಸ್ವಿಯಾಗಲಾರದೆಂಬ ತಿಳಿವಳಿಕೆ ಗಾಂಧೀಯವರಲ್ಲಿತ್ತು.

ಮಹಿಳೆಯರು ಮುಖ್ಯ ಪಾತ್ರ ನಿರ್ವಹಿಸಬೇಕಾಗಿದ್ದ ಇನ್ನೊಂದು ಕ್ಷೇತ್ರವೆಂದರೆ ಅಸ್ಪೃಶ್ಯತಾ ನಿವಾರಣೆ. "ಹಿಂದೂ ಹೃದಯದಿಂದ ಅಸ್ಪೃಶ್ಯತೆಯ ಕಳಂಕವನ್ನು ತೊಡೆದುಹಾಕಲು ಮಹಿಳೆಯರು ಬಹಳಷ್ಟು ಶ್ರಮಿಸಬೇಕು". ಇದು 'ಆತ್ಮಶುದ್ಧಿ'ಯ ಅತಿ ದೊಡ್ಡ ಆಂದೋಳನವಾಗಿದ್ದು ವಿರಕ್ತಿ ಹಾಗೂ ಪಶ್ಚಾತ್ತಾಪ ಪಡುವ ಅಪಾರ ಶಕ್ತಿ ಹೊಂದಿದ್ದ ಮಹಿಳೆಯರಿಗೆ ಸಂದರ್ಭಕ್ಕೆ ತಕ್ಕಂತೆ ವರ್ತಿಸಲು ಸೂಚಿಸಲಾಯಿತು. ಗಾಂಧೀಯವರು ತಮ್ಮ 'ಹರಿಜನ' ಪ್ರವಾಸ ಕಾಲದಲ್ಲಿ "ಶೋಷಿತ ವರ್ಗಗಳ ಸಂಬಂಧವಾಗಿ ನಮ್ಮ ಕರ್ತವ್ಯಗಳು" ಎಂಬ ವಿಷಯವನ್ನು ಕುರಿತು ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿದರು. ಇದಾದ ಬಳಿಕ ಹಲವಾರು ಮಹಿಳಾ ಸಂಘಟನೆಗಳು ಸ್ವತಂತ್ರವಾಗಿ ಈ ಸಮಸ್ಯೆಯನ್ನು ಕೈಗೆ ಎತ್ತಿ ಕೊಂಡವು. ಮತ್ತೊಮ್ಮೆ ಈ ಸಂದರ್ಭದಲ್ಲಿ ಮಾಡಲಾದ ಮನವಿಯು ಅವರ ಖಾಸಗಿ ಬದುಕಿಗೆ ನೇರವಾಗಿ ಸಂಬಂಧಿಸಿ ದ್ದಾಗಿತ್ತು. "ಇನ್ನೊಬ್ಬರ ಮಲಮೂತ್ರಗಳನ್ನು ಬಳಿದು ಶುಚಿ ಗೊಳಿಸುವವರಾದ್ದರಿಂದ ಹರಿಜನರನ್ನು ನೀವು ಅಸ್ಪೃಶ್ಯರೆಂದು ಭಾವಿಸುವುದಾದರೆ ತನ್ನ ಮಕ್ಕಳಿಗಾಗಿ ಈ ಬಗೆಯ ಸೇವೆ ಮಾಡುವ ತಾಯಿಯು ಏನಾಗಬೇಕು?"

ಎಲ್ಲಿಯವರೆಗೆ ಸ್ತ್ರೀಯರು ಪ್ರತಿಭಟಿಸುತ್ತಾರೊ ಅಲ್ಲಿಯವರೆಗೆ ಅಸ್ಪೃಶ್ಯತಾ ನಿವಾರಣೆಯಲ್ಲಿ ಹೆಚ್ಚಿನದೇನನ್ನೂ ಸಾಧಿಸಲಾಗುವುದಿಲ್ಲ ಎಂಬ ಸಂಗತಿಯನ್ನು ಗಾಂಧೀಯವರು ತಮ್ಮ ಮನೆಯ ಅನುಭವದ ಮೂಲಕವೇ ಗ್ರಹಿಸಿದ್ದರು. ಅಸ್ಪೃಶ್ಯತೆಯ ವಿಚಾರದಲ್ಲಿ ತಮ್ಮ ಪತ್ನಿಯಿಂದ ತೀವ್ರ ವಿರೋಧವನ್ನು ಎದುರಿಸಬೇಕಾಯಿತೆಂಬ ಅಂಶ ವನ್ನು ಅವರ ಆತ್ಮಚರಿತ್ರೆಯು ಸ್ಪಷ್ಟಪಡಿಸುತ್ತದೆ. ಅಸ್ಪೃಶ್ಯರು ಆಶ್ರಮದಲ್ಲಿ ಕುಟುಂಬದ ಸದಸ್ಯರಂತೆ ತಮ್ಮೊಂದಿಗೆ ಬದುಕು ವುದನ್ನು ಮೌನವಾಗಿ ಕಸ್ತೂರಿಬಾ ವಿರೋಧಿಸಿದರು. ಈ

ಕ್ರಮವನ್ನು ಒಪ್ಪಿಕೊಳ್ಳಲು ಅವರಿಗೆ ಕೂಡಲೇ ಸಾಧ್ಯವಾಗಲಿಲ್ಲ.

೧೯೩೩ ರ 'ಹರಿಜನ' ಪ್ರವಾಸ ಕಾಲದಲ್ಲಿ ಹಾಗೂ ಇನ್ನಿತರ ಸಂದರ್ಭಗಳಲ್ಲಿ ಗಾಂಧೀಯವರು ಮಹಿಳಾ ಸಭೆಯನ್ನು ಉದ್ದೇಶಿಸಿ ಮಾತನಾಡಿದಾಗ ಅನೇಕ ಹೃದಯಸ್ಪರ್ಶಿ ದೃಶ್ಯಗಳು ಕಂಡುಬಂದವು. "ನೀವು ತೊಡುವ ಎಲ್ಲ ಅಥವಾ ಹೆಚ್ಚಿನ ಆಭರಣಗಳನ್ನು ಕೊಡಿರಿ" ಎಂದು ಗಾಂಧೀಯವರು ಮನವಿ ಮಾಡಿಕೊಳ್ಳುತ್ತಿದ್ದರು. ಸಣ್ಣಪುಟ್ಟ ಹೆಣ್ಣುಮಕ್ಕಳು, ತರುಣಿಯರು, ಮುದುಕಿಯರು ತಮ್ಮ ಚಿನ್ನ – ಬೆಳ್ಳಿಯ ಆಭರಣಗಳನ್ನು ಹರಿಜನೋದ್ಧಾರ ಹಾಗೂ ಸ್ವದೇಶಿ ಆಂದೋಳನಕ್ಕಾಗಿ ಗಾಂಧೀಯವರಿಗೆ ಅರ್ಪಿಸುತ್ತಿದ್ದರು. ಈ ಸಂದರ್ಭದಲ್ಲಿ ಗಾಂಧೀಯವರು ವಿಧಿಸುತ್ತಿದ್ದ ಅಚಲವಾದ ಷರತ್ತೆಂದರೆ "ಯಾವುದೇ ಕಾರಣಕ್ಕೂ ದಾನ ಮಾಡಿದ ಆಭರಣಗಳನ್ನು ಮರಳಿ ಕೊಡಲಾಗುವುದಿಲ್ಲ." ಆಂದೋಳನದಲ್ಲಿ ಮಹಿಳೆಯರು ವೈಯಕ್ತಿಕವಾಗಿ ತೊಡಗಿಕೊಳ್ಳುವ ಗಮನಾರ್ಹ ವಿಧಾನ ಇದು. ಏಕೆಂದರೆ ಗಾಂಧೀಯವರೇ ಒಮ್ಮೆ ವೇದಿಕೆಯಿಂದ ಹೇಳಿದ ಮಾತುಗಳಿವು "ಭಾರತೀಯ ಮಹಿಳೆಯ ಬಳಿ ತನ್ನದೆಂದು ಹೇಳಿಕೊಳ್ಳುವ ಹಣವಿರುವುದಿಲ್ಲ. ಆದರೆ ತನ್ನ ಪತಿ ಅಥವಾ ಯಜಮಾನನ ಅನುಮತಿ ಇಲ್ಲದೆ ಯಾರಿಗೂ ಅದನ್ನು ಕೊಡದಿದ್ದರೂ ಅವಳ ಆಭರಣ ಅವಳಿಗೇ ಸೇರಿದ್ದು. ತನ್ನದು ಎಂದು ಕರೆದು ಕೊಳ್ಳುವ ಆಭರಣವನ್ನು ಒಳ್ಳೆಯ ಕಾರಣಕ್ಕಾಗಿ ಅರ್ಪಿಸುವುದು ಅವಳನ್ನು ಉದಾತ್ತೀಕರಿಸುತ್ತದೆ." ಯಾವುದೇ ಮಹಿಳೆಯ ನಿಜವಾದ ಆಭರಣಗಳೆಂದರೆ ಅವಳ ಗುಣಶೀಲಗಳು. ಈ ಚಿನ್ನ ಬೆಳ್ಳಿಯ ಆಭರಣಗಳು ಸ್ತ್ರೀಯರನ್ನು ದಾಸ್ಯಕ್ಕೆ ಒಡ್ಡಿವೆ. ಎಲ್ಲಕ್ಕಿಂತ ಹೆಚ್ಚಾಗಿ "ಅರೆಹಸಿದ ಮಿಲಿಯಗಟ್ಟಲೆ ಜನರು, ನ್ಯೂನ್ಯ ಪೋಷಣೆಯಿಂದ ನರಳುತ್ತಿರುವ ಶೇಕಡಾ ೮೦ ರಷ್ಟು ಜನರಿರುವ ಈ ದೇಶದಲ್ಲಿ ಆಭರಣಗಳನ್ನು ತೊಟ್ಟುಕೊಳ್ಳುವುದೇ ಕಣ್ಣು ಕುಕ್ಕುವ ಒಂದು ಅಪ

ರಾಧ; ದೇಶದ ದೃಷ್ಟಿಯಿಂದ ನಷ್ಟ. ಇಷ್ಟೊಂದು ಸಂಪತ್ತು ಒಂದೆಡೆ ವ್ಯರ್ಥ ಕೊಳೆಯಲು ಮತ್ತು ನಶಿಸಲು ಅವಕಾಶ ಕೊಟ್ಟಂತಿದೆ." ಆಭರಣಗಳನ್ನು ತ್ಯಜಿಸುವುದೇ ಮಹಿಳೆಯರನ್ನು ಬಂಧನದಿಂದ ಬಿಡುಗಡೆಗೊಳಿಸುವುದು ಮಾತ್ರವಲ್ಲದೆ ಈ ದೇಶ ದಲ್ಲಿರುವ ಕಡು ಬಡವರಿಗೆ ಸಹಾಯಕವಾಗುತ್ತದೆ.

ಕೋಮುವಾದವನ್ನು ವಿರೋಧಿಸುವ ಹಾಗೂ ಪ್ರತಿ ಮನೆ ಯನ್ನೂ ವೈಯಕ್ತಿಕ ಸತ್ಯಾಗ್ರಹದ ವೇದಿಕೆಯನ್ನಾಗಿ ರೂಪಿಸುವುದರ ಮೂಲಕ ರಾಷ್ಟ್ರೀಯ ಭಾವೈಕ್ಯವನ್ನು ಉದ್ದೀಪಿಸುವ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ಪ್ರಮುಖ ಪಾತ್ರ ಲಭಿಸಿತ್ತು. "ಹಿಂದೂ ಮುಸ್ಲಿಂ ಏಕತೆ ಅತ್ಯವಶ್ಯಕವೆಂಬುದು ನಿಮಗೆ ಮನವರಿಕೆಯಾಗಿದ್ದರೆ ಸರಕಾರದ ವಿರುದ್ಧ ನೀವು ಪರಿಣಾಮಕಾರಿಯಾಗಿ ಬಳಸಿದ ಸತ್ಯಾಗ್ರಹದ ಅಸ್ತ್ರ ವನ್ನು ಈಗ ನಿಮ್ಮ ದೇಶವಾಸಿಗಳ ವಿರುದ್ಧ ಬಳಸಿರೆಂದು ನಿಮ್ಮನ್ನು ಕೇಳಿಕೊಳ್ಳುವೆ". ಮನೆಯ ಗಂಡಸರೊಂದಿಗೆ ಸಹಕರಿಸಬೇಡಿರೆಂದು ಮಹಿಳೆಯರಿಗೆ ಗಾಂಧೀ ಕರೆನೀಡಿದರು. ಗಂಡಸರಿಗೆ ಅಡುಗೆ ಮಾಡಿ ಹಾಕಲು ನಿರಾಕರಿಸಬೇಕಲ್ಲದೆ "ಎಲ್ಲಿಯವರೆಗೆ ಗಂಡಸರು ಕೋಮು ಜಗಳಗಳಿಂದ ಹೊಲಸಾದ ತಮ್ಮ ಕೈಗಳನ್ನು ತೊಳೆದುಕೊಳ್ಳುವು ದಿಲ್ಲವೋ ಅಲ್ಲಿಯವರೆಗೆ ಹೆಂಗಸರು ಪ್ರತಿಭಟನಾರ್ಥ ಉಪವಾಸ ಮಾಡಬೇಕು". ಹೀಗೆ ಗಾಂಧೀಯವರು ಮಹಿಳೆಯರ ಬಲವನ್ನು ಹೆಂಡಂದಿರು ಹಾಗೂ ತಾಯಂದಿರ ಬಲವನ್ನಾಗಿ ವಿಸ್ತರಿಸಲು ಬಯಸಿ ದರು. "ಕೈಕೇಯಿಯು ತನ್ನ 'ದುರಾಗ್ರಹ'ದ ಮೂಲಕವೇ ತನಗೆ ಬೇಕಾದುದೆಲ್ಲವನ್ನೂ ದಶರಥನಿಂದ ಪಡೆಯಲು ಸಾಧ್ಯವಾಗಿದ್ದರೆ ಸತ್ಯಾಗ್ರಹದ ಮೂಲಕ ಮಹಿಳೆಯರು ಏನನ್ನಾದರೂ ಸಾಧಿಸಲು ಸಾಧ್ಯವಿಲ್ಲವೇನು?" ಹೀಗೆ ಗಾಂಧೀಯವರ ಈ ಹೊಸ ಅಸ್ತ್ರವು ಪ್ರತಿ ಯೊಂದು ಕುಟುಂಬದ ಪ್ರತಿ ಮಹಿಳೆಯ ವೈಯಕ್ತಿಕ ಹೋರಾಟದ ದೃಷ್ಟಿಯಿಂದಲೂ ಪರಿಣಾಮಕಾರಿ ಅನ್ನಿಸಿತು.

ಮುಂಚೂಣಿಯಲ್ಲಿ ಮಹಿಳೆಯರು

ಉಪ್ಪಿನ ಸತ್ಯಾಗ್ರಹವು ಸ್ವಾತಂತ್ರ್ಯ ಆಂದೋಳನದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಒಂದು ಹೊಸ ಹೆಜ್ಜೆ ಗುರುತಾಯಿತು. ಗಾಂಧೀಯವರು ಉಪ್ಪನ್ನು ಪ್ರತಿಭಟನೆಯ ಸಂಕೇತವಾಗಿ ಆಯ್ಕೆ ಮಾಡಿಕೊಂಡದ್ದು ಹಲವರಿಗೆ ತಮಾಷೆಯಾಗಿ ಕಂಡಿತು. ಬ್ರಿಟಿಷರು ನಕ್ಕುಬಿಟ್ಟರು. ಕಾಂಗ್ರೆಸ್ಸಿಗರಲ್ಲಿ ಹಲವರು ಈ ವಿಚಿತ್ರ ವಿಚಾರದಿಂದ ತಬ್ಬಿಬ್ಬಾದರು. ಮೇಲ್ನೋಟಕ್ಕೆ ಬಹಳ ಸಣ್ಣದೆಂದು ಕಾಣುವ, ಆದರೆ ಮಹಿಳೆಯರ ವರ್ತುಲಕ್ಕೆ ಸೇರಿದ ದೈನಂದಿನ ಜೀವನದ ಅವಶ್ಯ ವಿವರಗಳ ಮಹತ್ವವನ್ನು ಗ್ರಹಿಸುವ ಗಾಂಧೀಯವರ ಅಸಾಧಾರಣ ಪ್ರತಿಭೆಯನ್ನು ಈ ಪ್ರಕರಣವು ರುಜುವಾತು ಪಡಿಸಿತು.

ಉಪ್ಪು ಅತ್ಯಂತ ಅಗ್ಗವಾಗಿ ಸಿಗುವ ವಸ್ತುವಾಗಿದ್ದು ಪ್ರತಿಯೊಬ್ಬ ಮಹಿಳೆಯೂ ಅದನ್ನು ಕೊಂಡುಕೊಂಡು ನಿಯೋಜನೆಯಿಂದ ಬಳಸುತ್ತಾಳೆ.

ಹಿಂದೆ ಕೂಡ ಜನ ತಮಗೆ ಬೇಕಾದ ಉಪ್ಪನ್ನು ತಯಾರಿಸುತ್ತಿದ್ದರು ಇಲ್ಲವೆ ಸ್ವಾಭಾವಿಕ ನಿಕ್ಷೇಪಗಳಿಂದ ಸಂಗ್ರಹಿಸುತ್ತಿದ್ದರು. ಆದರೆ ಬ್ರಿಟಿಷರು ಈ ನಿತ್ಯ ಬಳಕೆಯ ವಸ್ತುವಿನ ಮೇಲೆ ತಮ್ಮ ಏಕಸ್ವಾಮ್ಯ ಸ್ಥಾಪಿಸಲು ಯತ್ನಿಸಿದರು. ಸರಕಾರವು ತನ್ನ ಮಳಿಗೆಗಳಿಂದ ಜನರಿಗೆ ಒದಗಿಸುವ ಉಪ್ಪೇ ಕಾನೂನುಬದ್ಧವೆಂದು ಸಾರಿತು. ಸರಕಾರ ವಿಧಿಸುವ ತೆರಿಗೆಯನ್ನು ಅವಲಂಬಿಸಿ ಅದರ ಬೆಲೆ. ಹೀಗೆ ಸರಕಾರವು ಬಡವರನ್ನೂ ಒಳಗೊಂಡಂತೆ ಪ್ರತಿಯೊಬ್ಬರ ಮೇಲೆ ಕರಭಾರ ಹೊರಿಸಿತು.

ಉಪ್ಪಿನ ತಯಾರಿಯನ್ನು ನಿಷೇಧಿಸುವ ಬ್ರಿಟಿಷರ ಕಾನೂನುಗಳನ್ನು ಮುರಿದು ಉಪ್ಪು ತಯಾರಿಸುವುದೆಂದರೆ ತಮ್ಮ ದೈನಂದಿನ ಜೀವನದಲ್ಲಿ ಸ್ವಾವಲಂಬನೆಯನ್ನು ಘೋಷಿಸುವ, ಅಡುಗೆ ಮನೆಯ

ಬದುಕಿನೊಂದಿಗೆ ರಾಷ್ಟ್ರ ಜೀವನವನ್ನೂ, ವೈಯಕ್ತಿಕ ಬದುಕಿನೊಂದಿಗೆ ರಾಜಕೀಯ ಜೀವನವನ್ನೂ ಬೆಸೆಯುವ ವಿಧಾನವಾಯಿತು. ಈ ಪ್ರಚಾರಸತ್ರದಲ್ಲಿ ಮಹಿಳೆಯರನ್ನು ವ್ಯಾಪಕ ಪ್ರಮಾಣದಲ್ಲಿ ಸೆಳೆದು ಕೊಳ್ಳಲು ಸಾಧ್ಯವಾಯಿತು. ಏಕೆಂದರೆ ಈ ಕ್ರಿಯೆ ಸರಳವಾಗಿ ಕಂಡರೂ ಅವರ ಕಲ್ಪನಾಶಕ್ತಿಯನ್ನು ತಟ್ಟಿ ಎಚ್ಚರಿಸಿತು; ಅದು ಮಹಿಳೆಯರ ದೈನಂದಿನ ಬದುಕನ್ನು ಸ್ಪರ್ಶಿಸುವ ಸಾಂಕೇತಿಕ ಮೌಲ್ಯ ವನ್ನು ಹೊಂದಿತ್ತು.

ಗುಜರಾತಿನ ಹಳ್ಳಿಗಳಲ್ಲಿ ಹಾದುಹೋದ ಪ್ರಸಿದ್ಧವಾದ ದಂಡಿಯಾತ್ರೆಯನ್ನು ಗಾಂಧೀಯವರು ೭೯ ಸತ್ಯಾಗ್ರಹಿಗಳೊಂದಿಗೆ ಆರಂಭಿಸಿದರು. ದಂಡಿಯಾತ್ರೆಯ ನಡುವೆ ಅಕ್ಕಪಕ್ಕದ, ಸುತ್ತ ಮುತ್ತಲಿನ ಹಳ್ಳಿಗಳ ಜನ ಸ್ವಯಂಪ್ರೇರಣೆಯಿಂದ ಬಂದು ಸೇರಿ ಕೊಂಡರು. ಮೆರವಣಿಗೆಯು ದಂಡಿಯನ್ನು ಸಮೀಪಿಸುವಷ್ಟರಲ್ಲಿ ಸಾವಿರಾರು ಜನ ಗಾಂಧೀಯವರ ಜೊತೆಜೊತೆ ಹೆಜ್ಜೆ ಹಾಕುತ್ತಿದ್ದರು. ಇವರಲ್ಲಿ ಅನೇಕರು ಮಹಿಳೆಯರು. ಹಲವರು ನಗರದ ಶ್ರೀಮಂತ ವರ್ಗಕ್ಕೆ ಸೇರಿದವರು. ಆದರೆ ಗ್ರಾಮೀಣ ಪ್ರದೇಶಕ್ಕೆ ಸೇರಿದ ಸೀದಾ ಸಾದಾ ಮಹಿಳೆಯರೆ ಅಧಿಕ ಸಂಖ್ಯೆಯಲ್ಲಿದ್ದರು.

ಉಪ್ಪಿನ ಮೇಲೆ ಹೇರಿದ್ದ ಕರವನ್ನು ವಿರೋಧಿಸಿ ಕಸ್ತೂರಬಾ ಸಾಬರಮತಿ ಆಶ್ರಮದ ೩೭ ಮಹಿಳಾ ಸ್ವಯಂಸೇವಕರೊಂದಿಗೆ ಸತ್ಯಾಗ್ರಹ ಹೂಡಿದರು. ಸರೋಜಿನಿ ನಾಯ್ದು ಮಣಿಲಾಲ್ ಗಾಂಧೀಯೊಂದಿಗೆ ಸೇರಿಕೊಂಡು "ಧರಾಸನ ಸಾಲ್ಟ ವರ್ಕ್ಸ್" ವಿರುದ್ಧ ಪ್ರದರ್ಶನ ನಡೆಸಿದರು. ಈ ಪ್ರದರ್ಶನದ ವೇಳೆ ಅಹಿಂಸಾನಿರತ 'ಸತ್ಯಾಗ್ರಹಿ'ಗಳನ್ನು ದಮನಿಸುವ ಉದ್ದೇಶದಿಂದ ಪೋಲಿಸರು ಬಲಪ್ರಯೋಗ ಮಾಡಿದರು. ಕಮಲಾದೇವಿಯವರು "ವಾಡ್ಲಾ ಸಾಲ್ಟ್ ವರ್ಕ್ಸ್' ವಿರುದ್ಧ ೧೫,೦೦೦ ಮಂದಿಯನ್ನು ಕೂಡಿಸಿ ಒಂದು ಮೆರವಣಿಗೆ ಹೊರಡಿಸಿದರು. ಉಪ್ಪಿನ ಕಾಯ್ದೆಗಳನ್ನು

ಮುರಿಯುವಲ್ಲಿ ಮಹಿಳಾ ಸಂಘಟನೆಗಳು ಸಕ್ರಿಯ ಪಾತ್ರ ವಹಿಸಿದವು. ಮಹಿಳಾ ಸ್ವಯಂಸೇವಕರು ಉಪ್ಪು ತಯಾರಿಸಲೆಂದು ಚೌಪಾಟಿ ಕಡಲ ಕಿನಾರೆಯಿಂದ ಲೋಟಗಳಲ್ಲಿ ಸಮುದ್ರದ ನೀರು ಕೊಂಡೊಯ್ಯು ತ್ತಿದ್ದರು. ಇವರಲ್ಲಿ ಅನೇಕರು ಹೀಗೆ ತಾವು ತಯಾರಿಸಿದ ಉಪ್ಪನ್ನು ಮತ್ತು ಬ್ರಿಟಿಷರು ನಿಷೇಧಿಸಿದ ಉಪ್ಪನ್ನು ಅಗ್ಗದ ಬೆಲೆಗೆ ಮಾರಾಟ ಮಾಡಿದರು.

ಉಪ್ಪಿನ ಸತ್ಯಾಗ್ರಹ ಹಾಗೂ ಅಸಹಕಾರ ಆಂದೋಳನಗಳು ಹೆಚ್ಚು ಹೆಚ್ಚು ಮಹಿಳೆಯರ ತೊಡಗುವಿಕೆಯನ್ನು ಉತ್ತೇಜಿಸಿದವು. ಜೊತೆಗೆ ಗಾಂಧೀಯವರು ಕೂಡ ಈ ಆಂದೋಳನಗಳಿಗೆ ಮಹಿಳೆಯರ ತಾತ್ಕಾಲಿಕ ಬೆಂಬಲವನ್ನು ನಿರೀಕ್ಷಿಸಿದ್ದರು ಎಂಬ ಅಂಶವನ್ನು ನಿಚ್ಚಳ ಗೊಳಿಸಿತು, ಈ ವೇಳೆಗೆ ಕೇವಲ ಸಹಾಯಕರಾಗಿ ತೃಪ್ತಿ ಕಾಣದ ಕೆಲವು ಮಹಿಳೆಯರು ದಂಡಿಯಾತ್ರೆಯಲ್ಲಿ ಪಾಲ್ಗೊಳ್ಳಲು ಆಯ್ಕೆ ಯಾದ ಮುಖ್ಯ ಸ್ವಯಂಸೇವಕ ತಂಡಕ್ಕೆ ತಮ್ಮನ್ನೂ ಸೇರಿಸಿ ಕೊಳ್ಳ ಬೇಕೆಂದು ಗಾಂಧೀಯವರನ್ನು ಒತ್ತಾಯಿಸಿದರು. ಇವರು ಸ್ತ್ರೀ ಪುರುಷರ ನಡುವಿನ ಸಾಂಪ್ರದಾಯಿಕವಾದ ಶ್ರಮ ವಿಭಜನೆಯ ತತ್ತ್ವ ವನ್ನು ಆಂದೋಳನಕ್ಕೂ ವಿಸ್ತರಿಸಲು ಬಯಸಲಿಲ್ಲ. ಬದಲಿಗೆ ಸ್ವಾತಂತ್ರ್ಯಕ್ಕಾಗಿ ಗಂಡಸರಷ್ಟೆ ಸರಿಸಮಾನವಾಗಿ ಹೋರಾಡಲು ಬಯಸಿದ್ದರು. ಈ ಹಂತದವರೆಗೆ ಮನೆಯಲ್ಲೇ ಇದ್ದು ಮಾಡ ಬಹುದಾದ ಸ್ವದೇಶಿ ಹಾಗೂ ನೂಲುವ ಕೆಲಸವನ್ನು ಮಹಿಳೆಯರಿಗೆ ನೀಡಲಾಗುತ್ತಿತ್ತು. ರಾಜಕೀಯ ಸಂಘಟನೆ ಹಾಗೂ ಸಾರ್ವಜನಿಕ ಪ್ರತಿಭಟನಾ ಸಭೆಗಳ ನಿರ್ವಹಣೆಯ ಜವಾಬ್ದಾರಿಯು ಗಂಡಸರ ಮೇಲಿತ್ತು. ಆದರೆ ಇದೀಗ ಮಹಿಳೆಯರು ಹೆಚ್ಚು ಸಕ್ರಿಯವಾದ ರಾಜಕೀಯ ಭೂಮಿಕೆ ತಮಗೆ ನೀಡಬೇಕೆಂದು ಒತ್ತಾಯಿಸತೊಡಗಿ ದರು. ಗಾಂಧೀಯವರು ಈ ಆಸಹನೆಯನ್ನು "ಆರೋಗ್ಯದ ಲಕ್ಷಣ" ವೆಂದು ಗುರುತಿಸಿದರೂ ಕೂಡ ಉಪ್ಪಿನ ಕಾಯ್ದೆ ಮುರಿಯುವುದ

ಕ್ಕಿಂತಲೂ ಗಂಭೀರವಾದ ಜವಾಬ್ದಾರಿ ಸ್ತ್ರೀಯರ ಮೇಲಿದೆ ಎಂಬ ಕಾರಣವೊಡ್ಡಿ ದಂಡಿಯಾತ್ರೆಯಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ನಿರಾಕರಿಸಿದರು. ಈ ಅವಕಾಶವೇನೊ ನಿರಾಕರಿಸಲ್ಪಟ್ಟಿತು; ಆದರೆ ಎಲ್ಲ ಸ್ತ್ರೀ ಪುರುಷರು ದೇಶಾದ್ಯಂತ ಉಪ್ಪಿನ ಕಾಯ್ದೆ ಮುರಿಯ ಬೇಕೆಂಬುದು ಬಲು ಸ್ಪಷ್ಟವಾಗಿತ್ತು.

ಇಷ್ಟಾದರೂ ಗಾಂಧೀಯವರ ಪ್ರಕಾರ ಮದ್ಯ ಹಾಗೂ ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸುವುದು ಮಹಿಳೆಯರಿಗೆ ಸರಿ ಹೊಂದುವ ಕೆಲಸ. “ಮಹಿಳೆಯರಿಗಿಂತಲೂ ಹೆಚ್ಚು ಚೆನ್ನಾಗಿ ಯಾಗು ತಾನೇ ನಮ್ಮ ಕರುಳು ಕರಗಿಸಬಲ್ಲರು?” ಅಹಿಂಸೆ ಕುರಿತು ಮಹಿಳೆಯರಲ್ಲಿ ಆಂತರಿಕ ಒಲವಿದೆ ಎಂಬ ಕಾರಣಕ್ಕಾಗಿ ಈ ಕೆಲಸ ಮಾಡಲು ಅವರು ಮಹಿಳೆಯರನ್ನು ಆಯ್ದುಕೊಂಡರು. ೧೯೨೧ರ ಅಸಹಕಾರ ಆಂದೋಳನದಲ್ಲಿ ಪಿಕೆಟಿಂಗ್ ನಡೆಸುವ ಜವಾಬ್ದಾರಿ ಯನ್ನು ಗಂಡಸರಿಗೆ ವಹಿಸಿಕೊಟ್ಟಿದ್ದರಿಂದಾಗಿ ಹಿಂಸೆ ಭುಗಿಲೆದ್ದಿತು. ಹೀಗಾಗಿ ಆಂದೋಳನವು ಸ್ವಲ್ಪಮಟ್ಟಿಗೆ ಸೋತಿತೆಂದು ಗಾಂಧೀ ಯವರು ಭಾವಿಸಿದ್ದರು. “ಮದ್ಯ ಹಾಗೂ ಮಾದಕ ದ್ರವ್ಯಗಳಿಗೆ ಯಾರು ದಾಸರಾಗುತ್ತಾರೋ ಅಂಥವರ ನೈತಿಕ ಅಸ್ತಿತ್ವವನ್ನೇ ಅವು ನುಂಗಿ ನೊಣೆಯುತ್ತವೆ. ವಿದೇಶಿ ವಸ್ತ್ರಗಳು ರಾಷ್ಟ್ರದ ಆರ್ಥಿಕ ಶಕ್ತಿಯನ್ನೇ ಅಲುಗಾಡಿಸುತ್ತವೆ; ಮಿಲಿಯಗಟ್ಟಲೆ ಜನ ನಿರುದ್ಯೋಗಿ ಗಳಾಗುತ್ತಾರೆ. ಈ ಎಲ್ಲ ಪ್ರಕರಣಗಳಲ್ಲಿ ವ್ಯಕ್ತಿಯ ಕುಟುಂಬದ ಮೇಲೆ ಅದರಲ್ಲೂ ಮುಖ್ಯವಾಗಿ ಸ್ತ್ರೀಯರ ಮೇಲೆ ನೇರ ದುಷ್ಪರಿ ಣಾಮವಾಗುತ್ತದೆ”. ಇಲ್ಲಿ ಮತ್ತೆ ಸ್ತ್ರೀಯರ ಖಾಸಗಿ ಬದುಕು ಹಾಗೂ ಸಮಸ್ಯೆಗಳು ಸಾಮಾಜಿಕ ಉದ್ದೇಶದೊಂದಿಗೆ ತಳುಕು ಹಾಕಿ ಕೊಂಡಿವೆ ಎಂಬುದನ್ನು ಗಾಂಧೀಯವರು ಎತ್ತಿ ತೋರಿಸಿದರು. ಎಲ್ಲಕ್ಕಿಂತ ಮಿಗಿಲಾಗಿ, “ಪಿಕೆಟಿಂಗ್ ಆರಂಭಿಸಿ ಅದನ್ನು ನಿಯಂತ್ರಿಸ ಬೇಕಾದವರು ಮಹಿಳೆಯರೇ. ಅವರು ಗಂಡಸರಿಂದ ಯಥಾಶಕ್ತಿ

ಸಹಕಾರವನ್ನು ಪಡೆಯಬೇಕು. ಆದರೆ ಗಂಡಸರು ಮಾತ್ರ ಕಟ್ಟು ನಿಟ್ಟಾಗಿ ಸ್ತ್ರೀಯರು ಹೇಳಿದಂತೆ ಕೇಳಬೇಕು".

ಮಹಿಳೆಯರು "ಈ ಎರಡು ಚಟುವಟಿಕೆಗಳನ್ನು ಕೈಗೆತ್ತಿ ಕೊಂಡು ಅವುಗಳಲ್ಲಿ ಪರಿಣತರಾದರೆ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಅವರು ಪುರುಷರಿಗಿಂತಲೂ ಹೆಚ್ಚಿನ ಕಾಣಿಕೆ ಕೊಡಲು ಸಾಧ್ಯ. ಇಲ್ಲಿಯ ವರೆಗೆ ಅವರು ಆತ್ಮವಿಶ್ವಾಸ ಹಾಗೂ ರಾಜಕೀಯ ಅಧಿಕಾರಕ್ಕೆ ಅಪರಿಚಿತರಾಗಿದ್ದರು. ಈ ಚಟುವಟಿಕೆಗಳಿಂದಾಗಿ ಅವರು ಈ ಎರಡು ಗುಣಗಳನ್ನು ಸಂಪಾದಿಸಬಹುದು". "ಶಾಂತಿಯುತವಾದ, ಪ್ರತಿರೋಧವಿಲ್ಲದ ಚಳವಳಕ್ಕೆ ಸರಕಾರ ಬಹಳ ಕಾಲ ಜಡವಾದ ಪ್ರತಿಕ್ರಿಯೆ ತೋರುವಂತಿಲ್ಲ". ವಿದೇಶಿ ವಸ್ತ್ರಗಳ ವ್ಯಾಪಾರದಲ್ಲಿ ತೊಡಗಿದ್ದ ಭಾರತೀಯ ವರ್ತಕರ ಮೇಲೆ ಕೂಡ ಈ ಚಳವಳಿ ಪರಿಣಾಮ ಬೀರಿತು. ಮಹಿಳೆಯರನ್ನು ಪ್ರದರ್ಶನಕಾರರನ್ನಾಗಿ ಬಳಸಿಕೊಂಡ ಕ್ರಮ ಎರಡೂ ಕಡೆಯಿಂದ ಪ್ರಚೋದನೆಯನ್ನು ಹತ್ತಿಕ್ಕಲು ಸಹಕಾರಿಯಾಯಿತು. ಭಾರತೀಯರ ಒಗ್ಗಟ್ಟನ್ನು ಭೇದಿ ಸುವ ವರ್ತಕರ ದ್ವೇಷಭಾವನೆಯನ್ನು ನಿಗ್ರಹಿಸುವ ಈ ಕ್ರಮ ಗಾಂಧೀಯವರ ಅತ್ಯಂತ ಚಾಣಾಕ್ಷ ಕ್ರಮ. ವಾಸ್ತವವಾಗಿ, ಮಹಿಳಾ ಪ್ರದರ್ಶನಕಾರರನ್ನು ವಿರೋಧಿಸಿದ ವರ್ತಕರ ಉದಾಹರಣೆಗಳು ಬಲು ವಿರಳ.

"ಸಹಸ್ರಾರು ಶಿಕ್ಷಿತ ಹಾಗೂ ಅಶಿಕ್ಷಿತ ಮಹಿಳೆಯರಿಗೆ ಭಾಗವಹಿ ಸುವ ಅವಕಾಶ ದೊರೆಯಿತೆಂಬುದೇ" ಈ ಆಂದೋಳನದ ಇನ್ನೊಂದು ಗುಣ. ಉನ್ನತ ವ್ಯಾಸಂಗ ಮಾಡಿದ ಮಹಿಳೆಯರಿಗೆ "ತಮ್ಮನ್ನು ಜನಸಮೂಹದೊಂದಿಗೆ ಗುರುತಿಸಿಕೊಳ್ಳುವ ಹಾಗೂ ಅವರಿಗೆ ನೈತಿಕ ವಾಗಿ, ಆರ್ಥಿಕವಾಗಿ ಸಹಾಯ ಮಾಡುವ ಅವಕಾಶ" ದೊರೆಯಿತು. ಅಹಿಂಸಾತ್ಮಕವಾಗಿದ್ದರೂ ಇದೊಂದು 'ದಿಟ್ಟ' ಹೆಜ್ಜೆಯಾಗಿತ್ತು. ಆದ್ದರಿಂದಲೇ ಗಾಂಧೀಯವರು "ಇವರಲ್ಲಿ ಹಲವರು ಸೆರೆಮನೆ

ಸೇರಬಹುದು. ಅಪಮಾನಕ್ಕೆ ಒಳಗಾಗಬಹುದು. ಕೈ–ಮೈಗಳಿಗೆ ಪೆಟ್ಟಾಗಬಹುದು. ಆದರೆ ಈ ಬಗೆಯ ಅಪಮಾನ, ಹೊಡೆತ-ಬಡಿತವನ್ನು ಸಹಿಸಿಕೊಳ್ಳುವುದು ಅವರಿಗೆ ಹೆಮ್ಮೆ ತರುವ ವಿಷಯ" ಎಂಬ ಎಚ್ಚರಿಕೆಯನ್ನು ನೀಡಿದ್ದರು.

ಈ ಪಿಕೆಟಿಂಗ್ ಕಾರ್ಯಕ್ರಮ ಕೆಲ ಸಮಯದ ಮಟ್ಟಿಗಾದರೂ ಮಹಿಳೆಯರ ಕಲ್ಪನಾಶಕ್ತಿಯನ್ನು ಪ್ರಚೋದಿಸಿತು. ಇದು "ಪೂರ್ಣ ಸ್ವರಾಜ್ಯ"ಗಳಿಸುವ ಪ್ರಯತ್ನವೆಂದು ಹಂಸಾ ಮೆಹ್ತಾ ಬಣ್ಣಿಸಿದರು. ಕೇವಲ ನೂಲುವಿಕೆಯಿಂದ ಆರಂಭಗೊಂಡು ಪಿಕೆಟಿಂಗ್ ಹಂತದವರೆಗೆ ಸಾಗಿದ ಹಾದಿ ಸ್ಪಷ್ಟವಾಗಿ ಸ್ಥಿತ್ಯಂತರವನ್ನು ಎತ್ತಿ ತೋರಿಸುತ್ತದೆ. ಇದೀಗ ಮಾರುಕಟ್ಟೆಯೇ ಮಹಿಳೆಯರ ಚಟುವಟಿಕೆಯ ಕೇಂದ್ರ ವಾಯಿತು. ಉದಾಹರಣೆಗೆ, ಮದ್ಯಪಾನ ನಿಷೇಧದ ಪ್ರಾಂತೀಯ ಸಮಿತಿಯು ಮುಂಬೈಯಲ್ಲಿ ಸುಮಾರು ೨೫೦ ಸ್ವಯಂಸೇವಿಕೆಯರಿಗೆ ಮನವಿ ಮಾಡಿಕೊಂಡಿತು. ಕಿತ್ತಳೆ ಬಣ್ಣದ ಖಾದಿ ಸೀರೆ ತೊಟ್ಟ ಮಹಿಳೆಯರು ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಿದರು. "ನೂರಾರು ಮಂದಿ ಜೈಲಿಗೆ ಹೋದರು. ಹೆಚ್ಚು ಹೆಚ್ಚು ಮಹಿಳೆಯರು ತಮ್ಮ ಏಕಾಂತದಿಂದ ಹೊರಬಂದು ಸೆರೆಮನೆ ಸೇರಿದ ಮಹಿಳೆಯರ ಸ್ಥಾನ ತುಂಬಿದರು".೨

ಅಸಹಕಾರ ಅಂದೋಳನದ ಬಗೆಗಿನ ಭ್ರಮನಿರಸ ಬೆನ್ನಲ್ಲೇ ಈ ಅಂದೋಳನವೂ ದುರ್ಬಲಗೊಂಡಿತು. ಆದರೂ ಗಾಂಧೀಯವರು ಭಾರತೀಯ ಸ್ತ್ರೀ ಪುರುಷರ ಮನಸ್ಸುಗಳನ್ನು ಬಂಧಮುಕ್ತಗೊಳಿಸಲು ಯತ್ನಿಸಿದರು. ಅವರಿಗೆ "ಬೆನ್ನೆಲುಬು" ನೀಡಲು ಪ್ರಯತ್ನಿಸಿದರು; ತಮ್ಮನ್ನು ಶೋಷಿಸುವವರ ಕಣ್ಣಲ್ಲಿ ಕಣ್ಣುನೆಟ್ಟು ನೋಡುವುದನ್ನು ಕಲಿಸಿದರು. ತೀರ ಸಾಂಪ್ರದಾಯಿಕವಾದ, ಕರ್ಮಠವಾದ ಕುಟುಂಬಗಳಿಗೆ ಸೇರಿದ, ಸದಾ 'ಪರ್ದಾ'ದ ಒಳಗೇ ಮುಖ ಹದುಗಿಸಿ ಕೊಂಡಿದ್ದ ಸ್ತ್ರೀಯರು "ಸಾರ್ವಜನಿಕ ಮೆರವಣಿಗೆಗಳಲ್ಲಿ ಪರ್ದಾವನ್ನು

ಬದಿಗೆ ಸರಿಸಿ ಮುಖವೆತ್ತಿಕೊಂಡು ನಡೆದರು. ಮುಂದೆ ಇದೆಲ್ಲವೂ ಅವರ ಸೆರೆಮನೆ ವಾಸದ ಒಂದು ಭಾಗವೇ ಆಯಿತು."[೩] ಈ ಪ್ರಕ್ರಿಯೆಯಲ್ಲಿ ಅವರು ತಮ್ಮ ಧಾರ್ಮಿಕ ಹಾಗೂ ಜಾತೀಯ ಪೂರ್ವಾಗ್ರಹವನ್ನು ಕಿತ್ತೊಗೆದರು. "ಸ್ವರಾಜ್ಯದ ಘನವಾದ ಧ್ಯೇಯವು ಎಲ್ಲ ಮೂಢನಂಬಿಕೆಗಳನ್ನು ಗಾಳಿಗೆ ತೂರಿತು".[೪] ಅವರು ಸೆರೆಮನೆಯಲ್ಲಿ ಸ್ವಇಚ್ಛೆಯಿಂದ ಅಸ್ಪೃಶ್ಯರ ಕೈಯಿಂದ ಊಟ ಉಪಾಹಾರ ಸ್ವೀಕರಿಸಿದರು. ಇದಕ್ಕೆ ಸಂಬಂಧಿಸಿದ ಹಾಗೆ ಶ್ರೀಮತಿ ಕಸಿನ್ಸರವರು ಉಲ್ಲೇಖಿಸುವ ಒಂದು ಸಂದರ್ಭ ಗಮನಾರ್ಹವಾಗಿದೆ : "ಗಾಂಧೀಯವರ ಅಸಹಕಾರ ಆಂದೋಳನದ ಕರೆಗೆ ಓಗೊಟ್ಟ ದೇವದಾಸಿಯೋರ್ವಳನ್ನು ಬಂಧಿಸಿ ಸೆರೆಮನೆಗೆ ತಂದಾಗ ಕರ್ಮಠ ಬ್ರಾಹ್ಮಣ ಮಹಿಳೆಯರು ಕೂಡ ಆಕೆಯನ್ನು ಸಹೋದರಿ ಭಾವದಿಂದ ನೋಡಿಕೊಂಡರು". ಇನ್ನೊಂದು ಉಲ್ಲೇಖನೀಯ ಪ್ರಸಂಗವೆಂದರೆ ತನ್ನ ಮೂವರು ಹದಿಹರೆಯದ ಮೊಮ್ಮಕ್ಕಳು ಜೈಲಿನಲ್ಲಿರುವಾಗಲೇ ಆ ಮಕ್ಕಳ ಅಜ್ಜಿ ಕೂಡ ಬಂಧನಕ್ಕೊಳಗಾದಳು. ಒಟ್ಟು ೩,೦೦೦ ಮಹಿಳೆಯರು ಕಾರಾಗೃಹವಾಸ ಅನುಭವಿಸಿದರು. ಬ್ರೈಲ್ಸ್‌ಫೋರ್ಡ್ ಗಮನಿಸಿರುವಂತೆ "ಮಹಿಳೆಯರನ್ನು ವಿಮೋಚನಗೊಳಿಸುವುದಕ್ಕಿಂತ ಹೆಚ್ಚಿಗನೂ ಮಾಡದಿದ್ದರೂ" ಈ ಆಂದೋಳನ ಅರ್ಥಪೂರ್ಣ. ಈ ಆಂದೋಳನ ಮಹಿಳೆಯರಿಗೆ ಹೊಸ ಶಕ್ತಿ ಹಾಗೂ ಆತ್ಮ ಪರಿಶೀಲನ ಸಾಮರ್ಥ್ಯವನ್ನು ನೀಡಿತು. ಈ ಹಂತದಿಂದ ಮತ್ತೆ ಹಿಂತಿರುಗಿ ನೋಡುವ ಪ್ರಶ್ನೆಯೇ ಉದ್ಭವಿಸಲಿಲ್ಲ.

ಸಾಂಪ್ರದಾಯಿಕವಾದ ಮನೆಯ ವಾತಾವರಣದಲ್ಲಿ ಬಂಧಿಯಾಗಿದ್ದ ಮಹಿಳೆಯನ್ನು ಪ್ರಚೋದಿಸಿ ಅವಳನ್ನು ರಾಜಕೀಯ ಕಾರ್ಯಾಚರಣೆಯ ಶಕ್ತಿಶಾಲಿ ಸಾಧನವಾಗಿ ರೂಪಿಸುವಲ್ಲಿ ಗಾಂಧೀ ಯಶಸ್ವಿಯಾದರು. ಈ ವಿದ್ಯಮಾನದಿಂದಾದ ಪ್ರಾಸಂಗಿಕ ಪರಿಣಾಮ ತತ್‌ಕ್ಷಣಕ್ಕೆ ಎದ್ದುಕಾಣುವಂಥದಲ್ಲವಾದರೂ ಗಮನಾರ್ಹವಾಗಿದೆ.

ರಾಷ್ಟ್ರೀಯವಾದಿಗಳು ಮಹಿಳಾ ವಿಮೋಚನೆಯ ಧ್ಯೇಯವನ್ನು ಎತ್ತಿಹಿಡಿಯುವುದಕ್ಕೆ ಗಾಂಧೀಯವರು ಒತ್ತಾಸೆ ನೀಡಿದರು.

ಕಾಂಗ್ರೆಸ್ ಪಕ್ಷದ ಒಳಗೆ ಮಹಿಳಾ ವಲಯ ನಿರ್ಮಾಣವಾಗುವುದಕ್ಕೆ ಬಹಳ ಮುಂಚೆಯೇ ಅಂದರೆ ೧೯೨೫ ರಲ್ಲಿ ಗಾಂಧೀಯವರು ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಸರೋಜಿನಿ ನಾಯ್ಡು ಅವರ ಹೆಸರನ್ನು ಸೂಚಿಸಿದ್ದರು. ೧೯೨೦ ರ ಸುಮಾರಿಗೆ ಶಾಸನ ಸಭೆಗಳಲ್ಲಿ ಮಹಿಳೆಯರು ಪ್ರತಿನಿಧಿಸಿದ ರೀತಿ ಇನ್ನೂ ಮಹತ್ವದ ಸಂಗತಿ. ೧೯೧೭ರಲ್ಲಿ ಮಾಂಟೆಗೂ ಹಾಗೂ ಚೆಲ್ಮ್ಸ್‌ಫೋರ್ಡ್ ಅವರು ಸ್ವಯಂ ಸರಕಾರದ ಕುರಿತಾಗಿ ಕೆಲವು ಸುಧಾರಣೆಗಳನ್ನು ಚರ್ಚಿಸಲು ಭಾರತಕ್ಕೆ ಬಂದರು; ಸರೋಜಿನಿ ನಾಯ್ಡು ಹಾಗೂ ಆ್ಯನಿಬೆಸೆಂಟ್ ಮಹಿಳೆಯರ ಒಂದು ನಿಯೋಗದೊಂದಿಗೆ ಅವರನ್ನು ಭೇಟಿಮಾಡಿ ಶಾಸನ ಸಭೆಗಳಲ್ಲಿ ಪುರುಷರಿಗಿರುವ ಪ್ರತಿನಿಧಿತ್ವದ ಹಕ್ಕುಗಳು ಮಹಿಳೆಯರಿಗೂ ಸಿಗಬೇಕೆಂದು ಒತ್ತಾಯಿಸಿದರು. ಭಾರತೀಯ ಸದಸ್ಯರನ್ನೊಳಗೊಂಡ ಹೊಸ ಶಾಸನ ಸಭೆಗಳು ಈ ಸಮಸ್ಯೆಯನ್ನು ಚರ್ಚಿಸಬೇಕೆಂದು ಹೇಳಿ ಬ್ರಿಟಿಷ್ ಸರಕಾರ ಈ ವಿಚಾರವನ್ನು ತೇಲಿಸಿಬಿಡಲು ಯತ್ನಿಸಿತು. ಬಹಳ 'ಹಿಂದುಳಿದ' ಭಾರತೀಯರು ಮಹಿಳೆಯರಿಗೆ ಸಮಾನ ರಾಜಕೀಯ ಹಕ್ಕುಗಳನ್ನು ನೀಡುವ ವಿಚಾರವನ್ನು ಎಂದೆಂದಿಗೂ ಅನುಮೋದಿಸಲಾರರೆಂಬ ನಂಬಿಕೆಯಿಂದ ಬ್ರಿಟಿಷ್ ಸರಕಾರ ಹೀಗೆ ಹೇಳಿತು. ಆದರೆ ಗಾಂಧೀಯವರು ರಾಜಕೀಯ ಪ್ರವೇಶ ಮಾಡಿದ ಕೆಲವೇ ವರ್ಷಗಳಲ್ಲಿ ಮತ್ತು ಆಂದೋಳನದ ಜೊತೆಗೆ ಮಹಿಳಾ ಸಮಸ್ಯೆಗಳನ್ನು ಹೆಣೆಯುವ ಅವರ ಪ್ರಯತ್ನಗಳಿಂದಾಗಿ ಕಾಂಗ್ರೆಸ್ ಪಕ್ಷದ ಬಹಳಷ್ಟು ಸದಸ್ಯರಲ್ಲಿ ಈ ವಿಚಾರವಾಗಿ ಅಸಾಧಾರಣವಾದ ಸಹಾನುಭೂತಿಪರ ಜಾಗೃತಿ ಮೂಡಿತು. ಹೀಗೆ ೧೯೨೨ ಮತ್ತು ೧೯೨೯ರ ಮಧ್ಯೆ ಮದ್ರಾಸ್ ಶಾಸನ ಸಭೆಯಿಂದ ತೊಡಗಿ ಪ್ರತಿಯೊಂದು ಶಾಸನ ಸಭೆಯಲ್ಲೂ ಮಹಿಳೆಯರಿಗೆ ಪ್ರಾತಿನಿಧ್ಯ ಒದಗಿ

ಸುವ ಪ್ರಯತ್ನಗಳು ನಡೆದವು.

೧೯೩೦ ರಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಮಹಿಳೆಯರು ಹಠಾತ್ತಾಗಿ ಮತ್ತು ದೊಡ್ಡ ಸಂಖ್ಯೆಯಲ್ಲಿ ಬಂದು ಸೇರಿಕೊಂಡದ್ದು ಅವರಿಗೆ ನಿರಾಕರಿಸಲಾಗದ ಅವಕಾಶಗಳನ್ನು ತೆರೆದು ತೋರಿತು. ರಾಜಕೀಯ ಹಾಗೂ ಸಾರ್ವಜನಿಕ ಜೀವನದಲ್ಲಿನ ಭಾಗವಹಿಸುವಿಕೆಯಿಂದಾಗಿ ಪುರುಷರಿಗೆ ಸಿಗುವಷ್ಟೇ ಘನತೆ ಗೌರವಗಳು ಸ್ತ್ರೀಯರಿಗೂ ದೊರಕಿದವು. ಆದ್ದರಿಂದಲೆ ೧೯೩೧ ರಷ್ಟು ಹಿಂದೆಯೇ ಕಾಂಗ್ರೆಸ್ ಪಕ್ಷವು ಕರಾಚಿ ವಾರ್ಷಿಕ ಅಧಿವೇಶನದಲ್ಲಿ ವಿದ್ಯಾರ್ಹತೆ ಹಾಗೂ ಘನತೆಯನ್ನು ಲೆಕ್ಕಿಸದೆ ಮಹಿಳೆಯರಿಗೆ ರಾಜಕೀಯ ಸಮಾನತೆ ನೀಡುವ ಮಹತ್ವದ ನಿರ್ಣಯ ಕೈಗೊಂಡಿತು. ಇದು ಅತ್ಯಂತ ಮಹತ್ವದ ವಿಚಾರ. ಏಕೆಂದರೆ, ಈ ಸಮಸ್ಯೆಯ ಸಂಬಂಧದಲ್ಲಿ ಸುದೀರ್ಘ ಹೋರಾಟದ ಇತಿಹಾಸವಿದ್ದರೂ ಆ ಕಾಲಕ್ಕೆ ಯುರೋಪಿನ ಅನೇಕ ರಾಷ್ಟ್ರಗಳ ಮಹಿಳೆಯರಿಗೆ ಇನ್ನೂ ಮತದಾನದ ಹಕ್ಕು ಪ್ರಾಪ್ತವಾಗಿರಲಿಲ್ಲ.

ಇಷ್ಟಾದರೂ, ಸ್ವಾತಂತ್ರ್ಯ ಪ್ರಾಪ್ತಿಯ ಕಾಲ ಹತ್ತಿರಾದಂತೆ ಗಾಂಧೀಯವರು ಒಂದು ಮಾತನ್ನು ಮತ್ತೆ ಮತ್ತೆ ಆವೇಶದಿಂದ ಒತ್ತಿ ಹೇಳುತ್ತಿದ್ದರು. "ಮಹಿಳೆಯರಿಗೆ ಮತದಾನದ ಹಕ್ಕುಗಳಿರಬೇಕು. ಅವರಿಗೆ ಕಾನೂನುಬದ್ಧವಾದ ಸಮಾಜಿಕ ಸ್ಥಾನಮಾನಗಳಿರಬೇಕು. ಆದರೆ ಸಮಸ್ಯೆ ಅಲ್ಲಿಗೇ ಕೊನೆಗೊಳ್ಳುವುದಿಲ್ಲ. ರಾಷ್ಟ್ರದ ರಾಜಕೀಯ ವ್ಯವಹಾರಗಳ ಮೇಲೆ ಮಹಿಳೆಯರು ಪ್ರಭಾವ ಬೀರುವ ಹಂತದಿಂದಲೇ ಸಮಸ್ಯೆ ಆರಂಭಗೊಳ್ಳುತ್ತದೆ".

ಅಹಿಂಸೆ ಹಾಗೂ ಮಹಿಳಾ ನಾಯಕತ್ವ

ಆಂದೋಳನದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಮೇಲು ಮೇಲಿನ ಲಾಭವೆಂದು ತಿಳಿಯಬಾರದು. ಗಾಂಧೀಯವರು

ಹೋರಾಟದ ತಂತ್ರದ ಜೊತೆಗೆ ಅದರ ರೂಪವನ್ನು ಬಲು ಎಚ್ಚರಿಕೆಯಿಂದ ಪ್ರಜ್ಞಾಪೂರ್ವಕವಾಗಿ ಆಯ್ದುಕೊಂಡರು. "ಸಮಾಜದಲ್ಲಿ ಮಹಿಳೆಯರ ಪಾತ್ರ ಕುರಿತಾದ ಈ ದೊಡ್ಡ ಸಮಸ್ಯೆಗೆ ನನ್ನ ಕೊಡುಗೆಯು ಜೀವನದ ಎಲ್ಲ ಹೆಜ್ಜೆಗಳಲ್ಲಿ ಸತ್ಯ ಹಾಗೂ ಅಹಿಂಸೆಯ ತತ್ವಗಳಿಗೆ ತನ್ನನ್ನು ತಾನು ಒಪ್ಪಿಸಿಕೊಳ್ಳುವುದರಲ್ಲಿದೆ, ಈ ವಿಷಯದಲ್ಲಿ ಮಹಿಳೆಯು ಪ್ರಶ್ನಾತೀತ ನಾಯಕಿ. ಮಾನವನ ವಿಕಾಸದಲ್ಲಿ ತನ್ನ ಸ್ಥಾನವನ್ನು ಕಂಡುಕೊಂಡಿರುವ ಆಕೆಯು ತನ್ನ ಕೀಳರಿಮೆಯನ್ನು ನೀಗಿಕೊಳ್ಳುವಳೆಂಬ ಭರವಸೆಯನ್ನು ಹೊಂದಿದ್ದೇನೆ".

ಇದು ನಿಜಕ್ಕೂ ಅತ್ಯಂತ ಗಮನಾರ್ಹವಾದ ಒಳನೋಟ. ಏಕೆಂದರೆ ಹಿಂಸೆ ಹಾಗೂ ಪಾಶವೀಶಕ್ತಿ ವಿಜೃಂಭಿಸುವ ಸಾಮಾಜಿಕ ಸನ್ನಿವೇಶದಲ್ಲಿ ಅಥವಾ ಆಯುಧಗಳ ನೆರವಿನಿಂದಲೇ ಸಾಮಾಜಿಕ ಸಂಘರ್ಷವನ್ನು ಬಗೆಹರಿಸುವ ಸಂದರ್ಭದಲ್ಲಿ ಮಹಿಳೆಯನ್ನು ಮೂಲೆಗುಂಪು ಮಾಡಲಾಗುತ್ತದೆ, ಅಷ್ಟು ಮಾತ್ರವಲ್ಲದೆ ಅವರ ಇತ್ಯಾತ್ಮಕ ಗುಣಗಳನ್ನು ತಿರಸ್ಕಾರದಿಂದ ನೋಡಲಾಗುತ್ತದೆ. ಹೀಗೆ ತಮ್ಮ ಸಾಮರ್ಥ್ಯವನ್ನು ತಾವೇ ಅನ್ವೇಷಿಸುವ ಬದಲು, ಪುರುಷರಿಗೆ ಸಮಾನವಾಗಿ ತಮ್ಮ ಬಲ ಪ್ರದರ್ಶನವನ್ನು ಮಹಿಳೆಯರು ಮಾಡಬೇಕಾಗುತ್ತದೆ. ಇದನ್ನು ಕೆಲವೇ ಕೆಲವು ಮಹಿಳೆಯರು ಮಾತ್ರ ಮಾಡಬಲ್ಲರು. ಆದರೆ ಮಹಿಳೆಯರು ಹಿಂಸೆಗೆ ಗುರಿಯಾಗುವ ಪ್ರಕರಣಗಳು ಸರ್ವ ಸಾಮಾನ್ಯ.

ಗಾಂಧೀಯವರು ಮತ್ತೆ ಮತ್ತೆ ಒತ್ತಿ ಹೇಳಿದ ಅಹಿಂಸೆಯನ್ನು ಕ್ರಾಂತಿಯ ಅಸ್ತ್ರವನ್ನಾಗಿ ಬಳಸಬೇಕೆಂಬ ಮಾತು ಜನಸಾಮಾನ್ಯರು ಅದರಲ್ಲೂ ಮುಖ್ಯವಾಗಿ ಮಹಿಳೆಯರು ಆಂದೋಳನದಲ್ಲಿ ಪಾಲ್ಗೊಳ್ಳುವುದಕ್ಕೆ ಅನುಕೂಲಕರವಾದ ವಾತಾವರಣವನ್ನು ನಿರ್ಮಾಣ ಮಾಡಿತು. ಆಂದೋಳನಗಳು ಹಿಂಸೆಯನ್ನು ಪ್ರಚೋದಿಸಿದರೆ ಜನ ಭಯದಿಂದ ಮನೆಯೊಳಗೇ ಉಳಿಯುತ್ತಾರೆ. ಆದರೆ

ಗಾಂಧೀಜಿಯವರ ಈ ಆಂದೋಳನ ಹಾಗಾಗಲಿಲ್ಲ. ಹೆಚ್ಚು ಹೆಚ್ಚು ಜನ ಭಯಭೀತಿ ತೊರೆದು ತಮ್ಮ ಮನೆಗಳಿಂದ ಹೊರಬರಲು ಬೇಕಾದ ಪ್ರೇರಣೆ ದೊರೆಯಿತು. ಹಿಂಸೆಯ ವಾತಾವರಣ ನಿರ್ಮಾಣ ಮಾಡುವ ಪುರುಷ ಶಕ್ತಿಯೇ ಸಾಮಾನ್ಯವಾಗಿ ಹೋರಾಟದ ಫಲಿತಾಂಶವನ್ನು ನಿರ್ಣಯಿಸುತ್ತದೆ. ಆದರೆ ಅಹಿಂಸಾತ್ಮಕ ಸತ್ಯಾಗ್ರಹದ ಅಂಗವಾಗಿ ಕೈಗೆತ್ತಿಕೊಂಡ ಚಟುವಟಿಕೆಗಳು ಮಹಿಳೆಯರಲ್ಲಿ ಈ ಬಗೆಯ ಭಾವನೆಯನ್ನು ಬಿತ್ತುವಂಥವಾಗಿರಲಿಲ್ಲ. ವ್ಯವಸ್ಥಿತ ಹಿಂಸೆಯನ್ನು ಸಂಘಟಿಸುವಲ್ಲಿ ಮಹಿಳೆಯರ ಅಸಾಮರ್ಥ್ಯವನ್ನು ಕಡೆಗಣಿಸದೆ, ಅವರನ್ನು ಉನ್ನತ ಧೈರ್ಯದ ಮಾದರಿಗಳೆಂದು ಎತ್ತಿ ಹಿಡಿಯಲಾಯಿತು. ಈ ಬಗೆಯ ಅಹಿಂಸೆಯನ್ನು ಸಾಮೂಹಿಕವಾಗಿ, ಪ್ರಜ್ಞಾಪೂರ್ವಕವಾಗಿ ಬಳಸಿದ್ದೇ ಆದರೆ ಅದು ಎಲ್ಲ ದೊಡ್ಡ ಆಯುಧಗಳನ್ನು ನಾಚಿಸಬಹುದು.

ಮಹಿಳೆಯರು ಈ ಅಂದೋಳನಕ್ಕೆ ಧುಮುಕಿದ್ದನ್ನು ಜೀವ ಉಳಿಸುವ ಹಾಗೂ ಮಾನವೀಯಗೊಳಿಸುವ ಶಕ್ತಿ ಎಂದು ಭಾವಿಸಲಾಯಿತು. ಏಕೆಂದರೆ ಅರ್ಥಹೀನವಾದ, ಆತ್ಮಘಾತಕವಾದ ವಿನಾಶಕಾರಿ ಹಿಂಸೆಯಿಂದಾಗಿ ಅಂದೋಳನವು ಮೂರಾಬಟ್ಟೆಯಾಗುವುದನ್ನು ಮಹಿಳೆಯರು ತಡೆಯಬಲ್ಲರು. ಗಾಂಧೀಯವರ ದೃಷ್ಟಿಯಲ್ಲಿ ಅಂದೋಳನದ ಉದ್ದೇಶ ಕೇವಲ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸುವುದಲ್ಲ; ಬದಲಿಗೆ ಹಿಂಸೆ ಹಾಗೂ ಒತ್ತಡಕ್ಕೆ ಎಡೆಯಿಲ್ಲದಂತೆ ಸಮಾಜ ವ್ಯವಸ್ಥೆಯನ್ನು ಪುನಃ ರೂಪಿಸುವುದು. "ಮಹಾಸಂಗ್ರಾಮದ ವಿರುದ್ಧ ನಡೆವ ಹೋರಾಟದಲ್ಲಿ ವಿಶ್ವದ ಮಹಿಳೆಯರೇ ನೇತೃತ್ವ ವಹಿಸಬೇಕು, ಅದು ಅವರ ವಿಶೇಷ ಹಕ್ಕು ಮತ್ತು ಉದ್ಯೋಗ ಕೂಡ".

ಮಹಿಳೆಯರಿಂದ ಅದರಲ್ಲೂ ಮುಖ್ಯವಾಗಿ ತನ್ನ ತಾಯಿ ಹಾಗೂ ಹೆಂಡತಿಯಿಂದ ಅಹಿಂಸಾತ್ಮಕವಾದ, ನಿಷ್ಕ್ರಿಯ ವಿರೋಧ

ವನ್ನು ವ್ಯಕ್ತಪಡಿಸಲು ತಾನು ಕಲಿತೆನೆಂದು ಸ್ವತಃ ಗಾಂಧೀಯುವರೇ ಒಪ್ಪಿಕೊಂಡಿರುವುದು ಬಹು ಮುಖ್ಯವಾದ ಸಂಗತಿ. ಗಾಂಧೀಯುವರು ಕಸ್ತೂರಬಾರನ್ನು ಹೆದರಿಸಿ, ಪೀಡಿಸಿ ತನ್ನಿಚ್ಛೆಯಂತೆ ವರ್ತಿಸುತ್ತಿದ್ದರು. ಆದರೆ ಕಸ್ತೂರಬಾರವರು ಗಾಂಧೀಯುವರ ಅತಾರ್ಕಿಕ ಕ್ರಿಯೆ ಹಾಗೂ ಪ್ರವೃತ್ತಿಯ ವಿರುದ್ಧ ನಿಷ್ಕ್ರೀಯ ಪ್ರತಿರೋಧವನ್ನು ಸೂಚಿಸುತ್ತಿದ್ದರು. ಇದರಿಂದಾಗಿ ದರ್ಪದ ಗಂಡನಂತೆ ವರ್ತಿಸುತ್ತಿದ್ದ ನಾನು "ಸಮಾನತೆ ಹಾಗೂ ಪರಸ್ಪರ ಗೌರವದ ತತ್ವಕ್ಕೆ ತಕ್ಕಂತೆ ವರ್ತಿಸುವ ವ್ಯಕ್ತಿಯಾಗಿ ಪೂರ್ಪಟ್ಟೆನೆಂದು" ಗಾಂಧೀಯುವರು ಹೇಳಿಕೊಂಡಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ, ಮತ್ತೆ ಮತ್ತೆ ಗಾಂಧೀಯುವರು ಸತ್ಯಾಗ್ರಹದ ಯಶಸ್ಸಿನ ಪ್ರತೀಕವೆಂದು ಮೀರಾಬಾಯಿಯ ಉದಾಹರಣೆ ಕೊಡುತ್ತಿದ್ದರು. ೧೯೧೭ ರಲ್ಲಿ ಎಸ್ತರ್ ಫೆಯಿರಿಂಗ್ ಅವರಿಗೆ ಬರೆದ ಪತ್ರದಲ್ಲಿ ಗಾಂಧೀಯುವರು ಹೀಗೆ ಹೇಳುತ್ತಾರೆ. "ನನಗೆ ಸತ್ಯ ಮತ್ತು ಪ್ರೇಮ ಒಂದರ ಬದಲಿಗೆ ಇನ್ನೊಂದನ್ನು ಬಳಸಬಹುದಾದ ಪದಗಳು. ಗುಜರಾತಿಯಲ್ಲಿ ನಿಷ್ಕ್ರೀಯ ವಿರೋಧವೆಂದರೆ 'ಸತ್ಯಾಗ್ರಹ'ವೆಂಬುದು ನಿಮಗೆ ತಿಳಿದಿರಲಿಕ್ಕಿಲ್ಲ. ನಾನು ಅದನ್ನು ಸತ್ಯಾಗ್ರಹ, ಪ್ರೇಮದ ಶಕ್ತಿ, ಆತ್ಮಶಕ್ತಿ ಎಂದೆಲ್ಲ ನಾನಾ ತೆರನಾಗಿ ಬಣ್ಣಿಸಿದ್ದೇನೆ. ನಾವು ನಮ್ಮ ಸುತ್ತ ಕಾಣುತ್ತಿರುವ ವಿದ್ವೇಷದ ವಾತಾವರಣದಲ್ಲಿ ಪ್ರೇಮಪೂರ್ಣ ಜೀವನ ನಡೆಸಬೇಕು. ಇನ್ನೂರು ಮುನ್ನೂರು ವರ್ಷಗಳ ಕೆಳಗೆ ಮೀರಾಬಾಯಿ ಎಂಬ ಹೆಸರಿನ ಮಹಾರಾಣಿಯೊಬ್ಬಳಿದ್ದಳು. ಆಕೆ ತನ್ನ ಪತಿ ಹಾಗೂ ತನ್ನ ಸಂಪತ್ತೆಲ್ಲವನ್ನೂ ತ್ಯಾಗಮಾಡಿ ಪ್ರೇಮಮಯ ಜೀವನ ನಡೆಸಿದಳು. ಕೊನೆಗೆ ಸ್ವತಃ ಅವಳ ಗಂಡನೇ ಅವಳ ಅನುಯಾಯಿಯಾದ. ಆಕೆ ರಚಿಸುವ ಅನೇಕ ಅತ್ಯುತ್ತಮವಾದ ಪದ್ಯಗಳನ್ನು ನಾವು ನಮ್ಮ ಆಶ್ರಮದಲ್ಲಿ ಆಗಾಗ್ಗೆ ಹಾಡುತ್ತಿರುತ್ತೇವೆ".

ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರು : ಕೆಲವು ವೈರುಧ್ಯಗಳು

"ಜಗತ್ತಿನ ವಿವಿಧ ಕಡೆಗಳಲ್ಲಿ ಇದುವರೆಗೆ ನಡೆದ ಹೋರಾಟದಲ್ಲಿ ಮಹಿಳೆಯರು ತಮ್ಮ ತಂದೆ, ಗಂಡ, ಮಕ್ಕಳು, ಸೋದರರು ಮುಂತಾದವರ ಮರಣಕ್ಕಾಗಿ ದುಃಖಿಸಿದ್ದುಂಟು. ಆದರೆ ಈ ಪ್ರಾಚೀನ ದೇಶದ ಜನರ ನೆರವಿನೊಂದಿಗೆ ಮಹಾತ್ಮಾ ಗಾಂಧೀಯವರು ಇಂದು ಇಡೀ ಮನುಕುಲದ ಉದ್ಧಾರಕ್ಕಾಗಿ ಹೊಸ ಮೌಲ್ಯಗಳನ್ನು ಸೃಷ್ಟಿಸುತ್ತಿದ್ದಾರೆ. ಪುರುಷರಿಗೆ ಸಮಾನವಾದ ನೆಲೆಯನ್ನು ಸ್ತ್ರೀ ಸಮುದಾಯಕ್ಕೆ ದೊರಕಿಸಿಕೊಟ್ಟು ಮನುಕುಲದ ಸೇವೆಗಾಗಿ ಅವರನ್ನು ಬಂಧ ವಿಮುಕ್ತಗೊಳಿಸಿದ, ಆಕಾಶದೆತ್ತರಕ್ಕೆ ಏರಬಲ್ಲ ಉದಾತ್ತ ಮನಸ್ಸೊಂದರ ಕಾರ್ಯವೈಖರಿಯನ್ನು ಎಲ್ಲ ದೇಶಗಳ ಮಹಿಳೆಯರು, ಅದರಲ್ಲೂ ಮುಖ್ಯವಾಗಿ ಭಾರತದಲ್ಲಿರುವ ನಮ್ಮ ಸೋದರಿಯರು, ಗಮನಿಸಲಿ".

ರಾಷ್ಟ್ರೀಯ ಸ್ತ್ರೀ ಸಭಾದ ಸದಸ್ಯೆಯರು ಗಾಂಧೀಯವರಿಗೆ ಗೌರವ ಸಲ್ಲಿಸಲು ಆಯ್ದುಕೊಂಡ ಮಾತುಗಳಿವು. ಈ ಬಗೆಯ ಉತ್ಪ್ರೇಕ್ಷಿತ ಪ್ರಶಂಸೆಯು ಸತ್ಯವನ್ನು ಹೇಳಿದಷ್ಟೇ ಪ್ರಮಾಣದಲ್ಲಿ ಅದನ್ನು ಮರೆಮಾಚಲೂ ಹವಣಿಸುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆಯು ಗುಣ ಮತ್ತು ಪರಿಮಾಣದ ದೃಷ್ಟಿಯಿಂದ ಸೀಮಿತವಾದದ್ದು. ನಗರಗಳ ಮಧ್ಯಮ ವರ್ಗದ ಮಹಿಳೆಯರ ಗುಂಪು ಮಾತ್ರ ಸಕ್ರಿಯವಾಗಿ, ನಿಯಮಿತವಾಗಿ ಹೋರಾಟದಲ್ಲಿ ಭಾಗವಹಿಸಿತ್ತು. ಗ್ರಾಮೀಣ ಮಹಿಳೆಯರು ಕೆಲವು ಘಟ್ಟಗಳಲ್ಲಿ ಮಾತ್ರ ಪ್ರತಿಭಟನಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಇವರ ಪಾಲ್ಗೊಳ್ಳುವಿಕೆಯಿಂದ ಆಂದೋಳನಕ್ಕೆ ಒಂದು ಹೊಸ ಚೈತನ್ಯ ಹಾಗೂ ತೀವ್ರತೆ ಲಭಿಸಿತು. ರಾಜಾರಾವ್ ಅವರು ೧೯೩೦ ರಲ್ಲಿ ಬರೆದ 'ಕಾಂತಾಪುರ' ಎಂಬ ಕಾದಂಬರಿಯು ಆ ಕಾಲದ

ಮಹಿಳಾ ಸಂಘಟನೆಯ ಸ್ಥಿತಿಗತಿ, ಇತಿಮಿತಿಗಳನ್ನು ವಿವರವಾಗಿ ಚಿತ್ರಿಸುತ್ತದೆ.

ಈ ಕಾದಂಬರಿಯಲ್ಲಿ ಕರ್ನಾಟಕದ ಕಾಂತಾಪುರ ಎಂಬ ಹಳ್ಳಿಯ ಮೂರ್ತಿ ಎಂಬ ತರುಣನನ್ನು ಆತನ ತಾಯಿ ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಕಳುಹಿಸುತ್ತಾಳೆ. ಅಲ್ಲಿ ಆತ ಆಗ ತಾನೆ ಪ್ರವರ್ಧಮಾನಕ್ಕೆ ಬರುತ್ತಿದ್ದ ಸ್ವಾತಂತ್ರ್ಯ ಆಂದೋಲನದ ಪ್ರಭಾವಕ್ಕೆ ಒಳಗಾಗುತ್ತಾನೆ. ಸಾರ್ವಜನಿಕ ಸಮಾರಂಭವೊಂದರಲ್ಲಿ ಗಾಂಧೀಯವರ ಭಾಷಣ ಕೇಳಿ ಆಂದೋಳನಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಾನೆ. ಗಾಂಧೀಯವರ ಕರೆಗೆ ಓಗೊಟ್ಟು ವಿದೇಶಿ ವಸ್ತ್ರವನ್ನು ಬಹಿಷ್ಕರಿಸುತ್ತಾನೆ; ವಿಶ್ವವಿದ್ಯಾನಿಲಯದ ವ್ಯಾಸಂಗವನ್ನು ಅರ್ಧಕ್ಕೆ ಬಿಟ್ಟು ರಾಜಕೀಯ ಸಂಘಟನೆಗಾಗಿ ತನ್ನೆಲ್ಲ ವೇಳೆ ಹಾಗೂ ಶಕ್ತಿಯನ್ನು ವ್ಯಯಿಸಲು ಹಳ್ಳಿಗೆ ಹಿಂದಿರುಗುತ್ತಾನೆ.

ಕ್ರಮೇಣ ಹಳ್ಳಿಯ ಜನ ಅವನನ್ನು ತಮ್ಮ ಗಾಂಧೀ ಎಂದು ಭಾವಿಸತೊಡಗುತ್ತಾರೆ. ದಬ್ಬಾಳಿಕೆಗೆ ಒಳಗಾದ ಹರಿಜನರು ಹಾಗೂ ಸ್ತ್ರೀಯರು ಅವರಲ್ಲೂ ಮುಖ್ಯವಾಗಿ ವಿಧವೆಯರ ಸಂಘಟನೆಯ ಆಗತ್ಯವನ್ನು ಗಾಂಧೀಯವರು ಒತ್ತಿಹೇಳಿದ್ದರಿಂದ ಆತ ಈ ಎರಡೂ ವರ್ಗದ ಜನರ ಸಂಘಟನೆಗಾಗಿ ವಿಶೇಷ ಶ್ರಮ ವಹಿಸುತ್ತಾನೆ. ಹೀಗೆ, ಹಳ್ಳಿಯ ಹೆಂಗಸರ ಸಂಘಟನೆಯನ್ನು ಓರ್ವ ಪುರುಷ ಆರಂಭಿಸುತ್ತಾನೆ. ಮುಂದೆ ಅನತಿ ಕಾಲದಲ್ಲೇ ಕುಟುಂಬದ ಸದಸ್ಯರ ತೀವ್ರ ವಿರೋಧದ ನಡುವೆಯೂ ಸ್ತ್ರೀಯರು ಹೆಚ್ಚು ಸಕ್ರಿಯವಾಗಿ ಭಾಗವಹಿಸುತ್ತಾರೆ. ಅವರು ಮಹಿಳಾ ಸ್ವಯಂಸೇವಾ ಸಂಘವನ್ನು ರೂಪಿಸಿಕೊಂಡು ನಿಯತವಾಗಿ ಚರಖದಿಂದ ನೂಲುತ್ತಾರೆ; ಸಾಮೂಹಿಕವಾಗಿ ಶಾರೀರಕ ಕಸರತ್ತು ನಡೆಸುತ್ತಾರೆ. ಸಾರಾಯಿ, ಅಬ್ಕಾರಿ ಮಾಲಿಕರ ವಿರುದ್ಧ ಮುತ ಪ್ರದರ್ಶನ ನಡೆಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸುತ್ತಾರೆ. ಪೋಲೀಸರ ಲಾಠಿ ಏಟು, ದೌರ್ಜನ್ಯ ಹಾಗೂ ಇನ್ನಿತರ ಕಷ್ಟನಷ್ಟ

ಗಳಿಗೆ ಒಳಗಾಗುತ್ತಾರೆ.

ಆದರೂ ವಿಪರೀತ ಮನೆಗೆಲಸ, ಹೊಲದ ಕೆಲಸ, ಜೊತೆಗೆ ಮನೆಯಿಂದ ಹೊರಗೆ ಹೆಚ್ಚು ಅಲೆದಾಡಬಾರದೆಂಬ ನಿರ್ಬಂಧ ಗಳಿಂದಾಗಿ ಹೆಚ್ಚಿನ ಮಹಿಳೆಯರಿಗೆ ನಾಯಕತ್ವ ವಹಿಸಲು ಹೇಗೆ ಅಸಾಧ್ಯವಾಗುತ್ತದೆಂಬುದನ್ನು ರಾಜಾರಾವ್ ಚಿತ್ರಿಸುತ್ತಾರೆ. ಇವರಲ್ಲಿ ಹೆಚ್ಚಿನ ಮಹಿಳೆಯರು ಅನಕ್ಷರಸ್ಥರು; ಹೊರ ಜಗತ್ತಿನೊಂದಿಗೆ ಬಹಳ ಕಡಮೆ ಸಂಪರ್ಕ ಹೊಂದಿದವರು. ಆದ್ದರಿಂದಲೆ ಹೊರ ಜಗತ್ತಿನೊಂದಿಗೆ ಸ್ವತಂತ್ರವಾದ ರಾಜಕೀಯ ಸಂಪರ್ಕ ಬೆಳೆಸಿಕೊಳ್ಳು ವುದು ಅವರಿಗೆ ದುಸ್ಸಾಧ್ಯವಾಗುತ್ತದೆ. ಹೀಗಾಗಿ, ವ್ಯಾಪಕವಾದ ಅಂದೋಳನದೊಂದಿಗೆ ಸಂಪರ್ಕ ಇಟ್ಟುಕೊಳ್ಳುವ ದೃಷ್ಟಿಯಿಂದ ಅವರು ಗಂಡಸರನ್ನು ಆಶ್ರಯಿಸಬೇಕಾಗುತ್ತದೆ. ಅಂದೋಳನದಲ್ಲಿ ಪಾಲ್ಗೊಂಡರೆ ಮನೆ ಕೆಲಸಗಳೆಲ್ಲವನ್ನು ಕಡೆಗಣಿಸುತ್ತಾರೆಂಬ ಕಾರಣ ಕ್ಕಾಗಿ ಗಂಡಸರಿಂದ ಈ ಹೆಂಗಸರು ತೀವ್ರ ವಿರೋಧ ಹಾಗೂ ಹಿಂಸೆ ಯನ್ನು ಎದುರಿಸಬೇಕಾಗುತ್ತದೆ. ಈ ನಡುವೆ ನೇತಾರರು ಮಧ್ಯ ಪ್ರವೇಶ ಮಾಡಿ ಹೀಗಾಗುವುದಿಲ್ಲವೆಂದು ಗಂಡಸರಿಗೆ ಭರವಸೆ ಕೊಡು ತ್ತಾರೆ; ಮನೆಗೆಲಸಗಳನ್ನು ಕಡೆಗಣಿಸಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಬಾರದೆಂದು ಸ್ತ್ರೀಯರನ್ನು ಎಚ್ಚರಿಸುತ್ತಾರೆ. ಜೊತೆಗೆ, ಮಹಿಳೆಯರ ಅನುಭವದ ಕೊರತೆ, ವಿಶ್ವಾಸದ ಕೊರತೆ ಹಾಗೂ ಯಾವುದೇ ಬಗೆಯ ಸಾರ್ವಜನಿಕ ಚಟುವಟಿಕೆಗಳ ಪರಿಚಯ ಇಲ್ಲ ದಿರುವುದು ಇವರಿಗೆ ಬಾಧಕವಾಗಿ ಪರಿಣಮಿಸುತ್ತದೆ. ರಂಗಮ್ಮ ಮತ್ತು ರತ್ನ ಎಂಬ ಮಕ್ಕಳಿಲ್ಲದ ಇಬ್ಬರು ವಿಧವೆಯರಿಗೆ ಉಳಿದ ಮಹಿಳೆಯರಷ್ಟು ಗೃಹಕೃತ್ಯದ ಜವಾಬ್ದಾರಿಗಳಿರಲಿಲ್ಲ. ಇವರಿಬ್ಬರೂ ಉಳಿದವರಿಗಿಂತ ಹೆಚ್ಚು ಕ್ರಿಯಾಶೀಲರೂ ವಿದ್ಯಾವಂತರೂ ಆಗಿದ್ದರು. ಆದಕಾರಣ, ಮುಂಚೂಣಿಯ ನಾಯಕರ ಬಂಧನವಾದಾಗ ಇವರು ಹಳ್ಳಿಗರ ಮುಂದಾಳುಗಳಾಗುತ್ತಾರೆ. ಆದರೆ ಇದಕ್ಕೆ ಮುಂಚೆ, ಈ

ಹೆಂಗಸರ ಅಧೈರ್ಯ, ಪುರುಷರ ಬಗೆಗಿನ ರೂಢಿಗತ ಗೌರವ ಇವೇ ಮುಂತಾದ ಗುಣಗಳು ಇವರನ್ನು ಹಿಂದೆ ಜಗ್ಗುತ್ತವೆ. ಮುಂಚೂಣಿಗೆ ನುಗ್ಗದಂತೆ ತಡೆಯುತ್ತವೆ.

ಪುರುಷ ನಾಯಕರ ಬಂಧನವಾದಾಗ ಈ ಇಬ್ಬರು ವಿಧವೆಯರು ಕ್ರಿಯಾಶೀಲರಾಗಿ ನಾಯಕತ್ವ ವಹಿಸಿಕೊಳ್ಳುತ್ತಾರೆ. ಈ ವಿಧವೆಯರು ಅಂದೋಳನದಲ್ಲಿ ಪಾಲ್ಗೊಂಡದ್ದರಿಂದಾಗಿ ಮುಖ್ಯವಾಗಿ ಇವರ ಸ್ಥಾನಮಾನ ಹಾಗೂ ಒಟ್ಟಾರೆಯಾಗಿ ಮಹಿಳೆಯರ ಸ್ಥಾನ ಮಾನದ ಬಗೆಗಿನ ಗ್ರಹಿಕೆ ವಿಶಾಲವಾಗುತ್ತದೆ. ಇವರನ್ನು ನೋಡುವ ದೃಷ್ಟಿ ಸುಧಾರಿಸುತ್ತದೆ. ಕಾದಂಬರಿಯ ಕೊನೆಯಲ್ಲಿ ಹಳ್ಳಿಗರು ಭೂಕಂದಾಯ ಕೊಡಲು ನಿರಾಕರಿಸುತ್ತಾರೆ. ಸರಕಾರದ ದಬ್ಬಾಳಿಕೆಯಿಂದಾಗಿ ಅವರೆಲ್ಲ ತಮ್ಮ ಹಳ್ಳಿಗಳನ್ನು ಬಿಟ್ಟು ದೂರ ಚದುರುತ್ತಾರೆ. ಇದುವರೆಗೆ ಗಾಂಧೀಯುವರಿಗೆ ನಿಷ್ಠನಾಗಿದ್ದ ಮೂರ್ತಿ ಈಗ ನೆಹರೂ ನೇತೃತ್ವದ ಸಮಾಜವಾದಿ ಬಣದತ್ತ ಆಕರ್ಷಿತನಾಗುತ್ತಾನೆ. ಈ ಬದಲಾವಣೆಯಿಂದಾಗಿ ಅವನು ಹಳ್ಳಿಗಳಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸುತ್ತಾನೆ. ಸ್ಥಳೀಯ ಮಹಿಳಾ ಮುಖಂಡರು ಗಾಂಧೀಯುವರಲ್ಲಿ ತಮಗೆ ನಿಷ್ಠೆಯಿದೆ ಎಂದು ಸಾರಿದರೂ ಅವರು ಹಾಗೂ ಇತರ ಹಳ್ಳಿಗರನ್ನು ಒಂದು ಥರದ ಶೂನ್ಯ ಆವರಿಸುತ್ತದೆ. ಅವರಿಗೀಗ ನೆಚ್ಚಿಕೊಳ್ಳಲು ಇರುವುದು ನಿಷ್ಠೆ ಹಾಗೂ ನೆನಪುಗಳು ಮಾತ್ರ. ಓದುಗ ಕಾಂತಾಪುರದ ಹೆಸರನ್ನು ಕೇಳಿರಲಾರ. ಆದರೆ ಇಂಥ ಹಳ್ಳಿಯೊಂದರ ಹೆಂಗಸರ ಶೌರ್ಯ, ಸಾಹಸ ಹಾಗೂ ತ್ಯಾಗಗಳನ್ನು ಇತಿಹಾಸ ದಾಖಲಿಸುವುದಿಲ್ಲವೆಂದು ಕಾದಂಬರಿಯಲ್ಲಿ ಬರುವ ನಿರೂಪಕಿ ಖಿನ್ನಳಾಗಿ ನುಡಿಯುತ್ತಾಳೆ.

ಸ್ವಾತಂತ್ರ್ಯ ಅಂದೋಳನವು ಸಾಮಾನ್ಯ ಹಳ್ಳಿಯ ಹೆಂಗಸರಿಗೆ ಹೇಗೆ ಕಂಡಿತು ಮತ್ತು ಅವರು ಅದನ್ನು ಹೇಗೆ ಅರ್ಥಮಾಡಿಕೊಂಡರೆಂಬ ಒಂದು ಚಿತ್ರವನ್ನು 'ಕಾಂತಾಪುರ'ದಂಥ ಕೈಬೆರಳೆಣಿಕೆಯ

ಕೃತಿಗಳು ನಮಗೆ ನೀಡುತ್ತವೆ. ಸಮಕಾಲೀನ ಲೇಖಕನೊಬ್ಬನ ಅತ್ಯಂತ ಸೂಕ್ಷ್ಮ ಸಂವೇದಿಯಾದ ಒಳನೋಟಗಳನ್ನು ಹೊಂದಿರುವ ಈ ಕಾದಂಬರಿಯು ಗ್ರಾಮೀಣ ಮಹಿಳೆಯರು ಅಂದೋಳನಕ್ಕೆ ಖಚಿತ ದಿಕ್ಕು ಒದಗಿಸುವಷ್ಟು ಪ್ರಭಾವಶಾಲಿಯಾದ ನೇತೃತ್ವವನ್ನು ಏಕೆ ವಹಿಸಲಾಗಲಿಲ್ಲ ಎಂಬುದನ್ನು ಧ್ವನಿಸುತ್ತದೆ.

ಸ್ವರಾಜ್ಯವು ಕೇವಲ ಅಧಿಕಾರದ ಹಸ್ತಾಂತರ ಎಂದಾಗದೆ ನಿಜಕ್ಕೂ ಅರ್ಥಪೂರ್ಣವಾಗಬೇಕಾದರೆ ಕಾಂಗ್ರೆಸ್ ಸದಸ್ಯರು ಹಳ್ಳಿಗಳಿಗೆ ಹೋಗಿ ಅಲ್ಲಿನ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಗಾಗಿ ಶ್ರಮಿಸಬೇಕು ಎಂದು ಗಾಂಧೀಯವರು ಪದೇ ಪದೇ ಒತ್ತಿ ಹೇಳಿದರು. ಗ್ರಾಮೀಣ ಸೋದರಿಯರ ಜೊತೆಗೂಡಿ ಕೆಲಸ ಮಾಡುವುದು ನಗರದ ಸುಶಿಕ್ಷಿತ ಮಹಿಳೆಯರ ಕರ್ತವ್ಯವೆಂದು ಗಾಂಧೀಯವರು ಒತ್ತಿ ಹೇಳಿದರು. ಸ್ವತಃ ಅವರೇ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕ ಪ್ರವಾಸ ಮಾಡಿ ಜನರೊಂದಿಗೆ ನೇರ ಸಂಪರ್ಕ ಬೆಳೆಸಿಕೊಂಡರು. ಆದರೆ ಕಾಂಗ್ರೆಸ್ಸಿಗರಲ್ಲಿ ಬಹುಮಂದಿ ಗಾಂಧೀಯವರ ಈ ಆದರ್ಶವನ್ನು ಪಾಲಿಸಲಿಲ್ಲ. ಕೆಲವೇ ಕೆಲವರು ಮಾತ್ರ ಹಳ್ಳಿಗಳ ಉದ್ಧಾರಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡರು. ಈ ಕೆಲವೇ ಕೆಲವರಲ್ಲಿ ಕೈಬೆರಳೆಣಿಕೆಯಷ್ಟು ಮಹಿಳೆಯರೂ ಇದ್ದರು.

ನಗರದ ಅನೇಕ ಮಹಿಳಾ ಕಾರ್ಯಕರ್ತರು ಹಾಗೂ ಧುರೀಣರು ತಮ್ಮ ಪುರುಷ ಸಂಬಂಧಿಕರ ಪಾಲ್ಗೊಳ್ಳುವಿಕೆಯಿಂದಾಗಿ ಅಂದೋಳನದಲ್ಲಿ ತಾವೂ ಪಾಲ್ಗೊಂಡರು. ಒಂದು ಮನೆಯ ಸದಸ್ಯರನ್ನು ಪ್ರಚೋದಿಸಿದಾಗ, ಆ ಮನೆಯ ಗಂಡಸರು ಮಹಿಳೆಯರ ಪಾಲ್ಗೊಳ್ಳುವಿಕೆಯ ಬಗ್ಗೆಯೂ ನಿರ್ಧರಿಸುತ್ತಾರೆ. ಮಡದಿಯರು, ತಾಯಂದಿರು ಹಾಗೂ ಹೆಣ್ಣುಮಕ್ಕಳು ಮನೆಮಾರು ತೊರೆದು ಹಳ್ಳಿಗಳಿಗೆ ಹೋಗಿ ಕೆಲಸ ಮಾಡಬೇಕೆಂದು ಹೇಳುವಷ್ಟು ಉತ್ಸಾಹವನ್ನು

ನಮ್ಮ ಪ್ರಮುಖ ರಾಷ್ಟ್ರೀಯವಾದಿ ನಾಯಕರು ತೋರಲಿಲ್ಲ. ಗಾಂಧೀಯವರ ಕರೆಗೆ ಓಗೊಡುವುದೆಂದರೆ ತಮ್ಮ ಕುಟುಂಬದೊಂದಿಗೆ ಸಂಪರ್ಕ ಕಡಿದುಕೊಳ್ಳುವುದೆಂದರ್ಥ. ಕೇವಲ ಕೆಲವು ಮಹಿಳೆಯರು ಮಾತ್ರ ಈ ಸಾಹಸಕ್ಕೆ ಕೈಹಾಕಿದರು. ಆದರೆ ಮಧ್ಯಮ ವರ್ಗದ ಮಹಿಳೆಯರಲ್ಲಿ ಬಹುಪಾಲು ಮಂದಿ ತಮ್ಮ ಕುಟುಂಬಗಳ ಇಚ್ಛೆಗೆ ವಿರೋಧವಾಗಿ ಮುಂದಡಿಯಿಡುವಂತಿರಲಿಲ್ಲ. ಈ ಅಸಾಮರ್ಥ್ಯಕ್ಕೆ ಮುಖ್ಯ ಕಾರಣವೆಂದರೆ ಸ್ತ್ರೀಯರಿಗೆ ಉದ್ಯೋಗ ಅಥವಾ ಆಸ್ತಿಯಂಥ ಸ್ವತಂತ್ರ ಜೀವನೋಪಾಯವಿರಲಿಲ್ಲ. ಹಳ್ಳಿಗಳಿಗೆ ಹೋಗಿ ವಾಸಿಸಲು ಪ್ರಯತ್ನಿಸಿದ ಕಮಲಾದೇವಿಯಂಥ ಕೆಲವೇ ಕೆಲವರು ಸರ್ವಸಾಮಾನ್ಯ ನಿಯಮಕ್ಕೆ ಅಪವಾದ. ಹೀಗಾಗಿ ಅವರ ಪ್ರಯತ್ನಗಳು ಸೀಮಿತ ಪರಿಣಾಮ ನೀಡಿದವು. ಗ್ರಾಮೀಣ ಪ್ರದೇಶಗಳಿಗೆ ಹೋಗಿ ಕೆಲಸ ಮಾಡುವ ಅಪೇಕ್ಷೆಯುಳ್ಳ ನಗರದ ಮಹಿಳಾ ಕಾರ್ಯಕರ್ತರ ಕೊರತೆ ಇದ್ದಂತೆಯೇ ಗ್ರಾಮೀಣ ಮಹಿಳೆಯರಲ್ಲಿ ಕೂಡ ಪೂರ್ಣಕಾಲಿಕ ಕಾರ್ಯಕರ್ತರಾಗುವವರ ಕೊರತೆ ಇತ್ತು.

ಸಮೀಪದ ನಗರಗಳಿಗೆ ವ್ಯಾಸಂಗಕ್ಕೆ ಹೋದ ಅನೇಕ ಗ್ರಾಮೀಣ ಯುವಕರು ಸ್ವಾತಂತ್ರ್ಯ ಚಳವಳದ ಪ್ರಭಾವಕ್ಕೆ ಒಳಗಾಗಿ ವ್ಯಾಸಂಗ ತೊರೆದು ಹಳ್ಳಿಗಳಿಗೆ ಹಿಂದಿರುಗಿ ಸ್ವಾತಂತ್ರ್ಯದ ಸಂದೇಶವನ್ನು ಹರಡಿದರು. ಗ್ರಾಮೀಣ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳು ಬಲು ವಿರಳ. ಅವರು ನಗರಗಳಿಗೆ ಹೋಗುವುದಾಗಲಿ, ಅಲ್ಲಿನ ಜನರೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದಾಗಲಿ ಬಲು ಕಡಮೆ. ಹೀಗೆ ಸ್ತ್ರೀಯರು ಹಾಗೂ ಪುರುಷರ ಮುಂದಿರುವ ಸಾಮಾಜಿಕ ಸಾಧ್ಯತೆಗಳಲ್ಲಿ ಅಂತರವಿರುವುದರ 'ಸರಣಿ ಪ್ರತಿಕ್ರಿಯೆ'ಯಾಗಿ ಕೆಲವೇ ಕೆಲವು ಮಹಿಳಾ ಕಾರ್ಯಕರ್ತರು ರೂಪುಗೊಂಡರು. ಇದರ ಪರಿಣಾಮವೆಂಬಂತೆ ಅಲ್ಪ ಪ್ರಮಾಣದಲ್ಲಾದರೂ ಮಹಿಳಾ ಸಂಘಟನೆಯ ಕಾರ್ಯ ನೆರವೇರಿತು.

ನಗರಗಳ ಮಧ್ಯಮ ವರ್ಗದ ಬಹಳಷ್ಟು ಮಹಿಳೆಯರಿಗೆ ಆಂದೋಳನದಲ್ಲಿ ಭಾಗವಹಿಸುವುದೆಂಬುದು ಪಿಕೆಟಿಂಗ್, ರಾಷ್ಟ್ರೀಯ ವಾದಿ ಕರಪತ್ರಗಳ ವಿತರಣೆ, ಸಭೆ ಸಮಾರಂಭಗಳಿಗೆ ಹಾಜರಾಗುವುದು ಹಾಗೂ ಆಗೊಮ್ಮೆ ಈಗೊಮ್ಮೆ ಮತ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದಾಗಿತ್ತು. ಈ ರೀತಿಯ ಭಾಗವಹಿಸುವಿಕೆ ಅತ್ಯಂತ ಪ್ರಾಥಮಿಕ ಮಟ್ಟದಾಗಿತ್ತು. ಒಟ್ಟು ಆಂದೋಳನದ ಸಂದರ್ಭದಲ್ಲಿ ಮಹಿಳಾ ಚಟುವಟಿಕೆಗಳು ಎಂದೋ ಒಮ್ಮೆ ಮನಬಂದಾಗ ನಡೆಯುತ್ತಿದ್ದವು. ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವ ಅವಕಾಶವು ಸರೋಜಿನಿ ನಾಯ್ಡು, ಕಮಲಾದೇವಿ ಹಾಗೂ ಹಂಸಾ ಮೆಹ್ತಾ ಮುಂತಾದ ಕೆಲವೇ ಆಢ್ಯ ಸ್ತ್ರೀಯರಿಗೆ ಸೀಮಿತಗೊಂಡಿತ್ತು.

ರಾಷ್ಟ್ರೀಯ ಕಾಂಗ್ರೆಸ್ಸಿನ ಒಳವಲಯದಲ್ಲಿ ನಡೆದ ಚರ್ಚೆಗಳಾಗಲಿ, ಪಕ್ಷದ ವಿವಿಧ ಘಟಕಗಳು ಹೊಂದಿದ್ದ ವಿಭಿನ್ನ ದೃಷ್ಟಿಕೋನಗಳಾಗಲಿ ಮಹಿಳಾ ಸಂಘಟನೆಗಳ ಚರ್ಚೆಯಲ್ಲಿ ಪ್ರತಿಫಲನಗೊಂಡಂತಿಲ್ಲ. ೧೯೩೦ ರ ದಶಕದಲ್ಲಿ ಅಖಿಲ ಭಾರತ ಮಹಿಳಾ ಸಮಾವೇಶ ಕಾರ್ಯಕ್ರಮವು ಒಂದು ನಿರ್ದಿಷ್ಟ ಮಟ್ಟದ ರಾಜಕೀಯ ಅತೀತ (apolitical) ನಿಲುವನ್ನು ತಳೆಯಬೇಕೆಂದು ಸೂಚಿಸಿತು. "ಅಖಿಲ ಭಾರತ ಮಹಿಳಾ ಸಂಘಟನೆಯು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸೇರಿದ್ದಲ್ಲ. ಅದು ಯಾವುದೇ ಪಕ್ಷ ರಾಜಕಾರಣದಲ್ಲಿ ಸಕ್ರೀಯವಾಗಿ ಭಾಗವಹಿಸುವುದಿಲ್ಲ. ಆದರೆ ಅದು ಭಾರತದ ಪ್ರಜೆಗಳ ಕಲ್ಯಾಣ ಅದರಲ್ಲೂ ಮುಖ್ಯವಾಗಿ ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲ ಸವಾಲುಗಳ ಕುರಿತು ಮುಕ್ತವಾಗಿ ಚರ್ಚಿಸುತ್ತದೆ."[೮]

ಮಹಿಳೆಯರ ಚಟುವಟಿಕೆಗಳು ಹಾಗೂ ಆ ಕುರಿತಾದ ಚರ್ಚೆ ಎಲ್ಲವೂ ನೂಲುವಿಕೆ, ಖಾದಿ ಪ್ರಚಾರ, ನಿಧಿ ಸಂಗ್ರಹಣೆ, ಹೊಸ

ಸದಸ್ಯರ ನೋಂದಾವಣೆ–ಮತ ಪ್ರದರ್ಶನ, ಅಸ್ಪೃಶ್ಯತಾ ನಿವಾರಣೆ ಮತ್ತು ಹಿಂದೂ ಮುಸ್ಲಿಂ ಏಕತೆ ಇವೇ ಮುಂತಾದ ವಿಚಾರಗಳ ಸುತ್ತ ಕೇಂದ್ರೀಕೃತವಾಗಿತ್ತು. ಹೀಗೆ ರಾಷ್ಟ್ರೀಯ ಆಂದೋಳನದಲ್ಲಿ ಮಹಿಳೆಯರು ಪೂರಕವಾದ ಪಾತ್ರ ನಿರ್ವಹಿಸಿದರು. ದಕ್ಷಿಣ ಆಫ್ರಿಕೆಯ ಮಹಿಳೆಯರಂತೆ ಇವರು ನೇರ ಕಾರ್ಯಾಚರಣೆಗೆ ಧುಮುಕ ಲಿಲ್ಲ. ಸತ್ಯಾಗ್ರಹವು ಆಂದೋಳನದ ಹೊಸ ಅಸ್ತ್ರವೆಂದು ಗಾಂಧೀ ಯವರು ಭಾವಿಸಿದ್ದರೂ ಅದು ಮಹಿಳೆಯರ ಅಹಿಂಸಾತ್ಮಕ ಮನೋ ಭಾವಕ್ಕೆ ಹೊಂದುವಂತಿತ್ತು. ಇತರ ಎಲ್ಲ ಆಂದೋಳನಗಳಲ್ಲಿ ಮಹಿಳೆಯರು ಭಾಗವಹಿಸಿದಂತೆಯೇ ಈ ಆಂದೋಳನದಲ್ಲೂ ಅದೇ ಬಗೆಯಲ್ಲಿ ಭಾಗವಹಿಸಿದರು. ಮಹಿಳೆಯರ ತ್ಯಾಗ ಕುರಿತು ಗಾಂಧೀ ಯವರು ಆಡಿದ ಶ್ಲಾಘನೆಯ ಮಾತುಗಳಿಂದ ಇದು ಸ್ಪಷ್ಟವಾಗುತ್ತದೆ. ಯುವ ಕಾಂಗ್ರೆಸ್ಸಿಗನೋರ್ವನ ಪತ್ರದ ಕೆಲವು ಸಾಲುಗಳನ್ನು ಗಾಂಧೀ ಯವರು ಉಲ್ಲೇಖಿಸುತ್ತಾರೆ. ಈತ ಕೆಲವು ಕಾಲ ಓರ್ವ ಮಹಿಳೆಯ ಮನೆಯಲ್ಲಿ ವಾಸವಾಗಿದ್ದ. ಈಕೆಯ ಮಗನೂ ಕಾಂಗ್ರೆಸ್ ಕಾರ್ಯ ಕರ್ತನಾಗಿದ್ದ; ಆತ ಆಗ ತಾನೆ ಬಂಧಿಸಲ್ಪಟ್ಟದ್ದ. "ಹೋದ ವರ್ಷ ಮಹಿಳೆಯರಲ್ಲಿ ಭಾರಿ ಜಾಗೃತಿ ಮೂಡಿತಲ್ಲ. ಆದರೆ ಇವರಲ್ಲಿ ಅನೇಕ ಸಾಹಸಿ ಮಹಿಳೆಯರ ಮೌನ ದುಡಿಮೆಯನ್ನು ದೇಶ ಎಂದೂ ಅರಿಯಲಾರದು. ಆಗೊಮ್ಮೆ ಈಗೊಮ್ಮೆ ನಮ್ಮ ಹಳ್ಳಿಗಳಲ್ಲಿ ನಡೆ ಯುವ ಕೆಲಸಗಳ ವಿವರ ದೊರೆಯುತ್ತದೆ. ಇಲ್ಲಿ ಅಂಥ ಒಂದು ನಿದರ್ಶನವಿದೆ – ನಮ್ಮ ಕಾಂಗ್ರೆಸ್ ಶಿಬಿರವನ್ನು ಕಾನೂನು ವಿರೋಧಿ ಎಂದು ಘೋಷಿಸಿ ಪೋಲೀಸರು ಅದಕ್ಕೆ ಬೀಗಮುದ್ರೆ ಹಾಕಿದಾಗ ನಾವು ಓರ್ವ ಬಡ ಮಹಿಷ್ಯ ಮಹಿಳೆಯ ಗುಡಿಸಲಿಗೆ ಹೋದೆವು. ನಾವು ಗಾರ್ಕಿಯ 'ತಾಯಿ'ಯ ಬಗ್ಗೆ ಓದಿದ್ದೇವೆ. ನಾವು ಹಾಬು ವಿನ ತಾಯಿಯಲ್ಲಿ ಆ ತಾಯಿಯ ಸಾಕಾರ ರೂಪವನ್ನು ಕಂಡೆವು." ಹಗಲೂ ರಾತ್ರಿ ಆಕೆ ಅವರಿಗಾಗಿ ಅಡುಗೆ ಮಾಡುತ್ತಿದ್ದಳು. ಕಾಯಿಲೆ

ಬಿದ್ದವರ ಆರೈಕೆ ಮಾಡುತ್ತಿದ್ದಳು. ಇಷ್ಟು ಮಾತ್ರವಲ್ಲದೆ, ತನ್ನ ಅಲ್ಪ ಆದಾಯದಲ್ಲಿ ಅವರೆಲ್ಲರ ಯೋಗಕ್ಷೇಮ ನೋಡಿಕೊಳ್ಳು ತ್ತಿದ್ದಳು. ಇದು ಮಾತೃಭೂಮಿಯ ಸೇವೆಯಲ್ಲಿ ನಿರತಳಾದ ಆದರ್ಶ 'ಮಾತೆ'ಯೊಬ್ಬಳ ಚಿತ್ರಣ. ಆದರೆ ಗಾರ್ಕಿಯ ತಾಯಿಯು ಪ್ರಮುಖ ರಾಜಕೀಯ ನೇತಾರಳಂತೆ ನಮ್ಮ ಮಹಿಳೆಯರು ಮುಖಂಡರಾಗಿ ರೂಪುಗೊಳ್ಳಲಿಲ್ಲ, ಅಂದೋಳನದಲ್ಲಿ ಭಾಗವಹಿಸಿದ ಪುರುಷರ ಸಹಾಯಕರಾಗಿ, ಪೋಷಕರಾಗಿ ಉಳಿದರು.

ಭಾರತೀಯ ಸಮಾಜದಲ್ಲಿ ಮಹಿಳೆಯರು ಹಾಗೂ ಹರಿಜನರು ಅತಿ ಹೆಚ್ಚು ದಮನಕ್ಕೆ ಒಳಗಾದ ಎರಡು ಗುಂಪುಗಳೆಂಬುದನ್ನು ಗಾಂಧೀಯವರು ಸರಿಯಾಗಿಯೇ ಗುರುತಿಸಿದ್ದರು. ಏಕೆಂದರೆ ಮಹಿಳೆಯರು ಹಾಗೂ ಹರಿಜನರ ವೈಕಲ್ಯಗಳು ನಿರ್ದಿಷ್ಟವಾಗಿದ್ದು ಅವುಗಳ ನಿವಾರಣೆಗಾಗಿ ವಿಶೇಷ ಗಮನ ಅಗತ್ಯವಿದೆ. ಆದರೂ ಮಹಿಳೆಯರಾಗಲಿ, ಹರಿಜನರಾಗಲಿ ಒಟ್ಟಾರೆಯಾಗಿ ತಮ್ಮ ವೈಕಲ್ಯ ಗಳನ್ನು ನೀಗಿಕೊಳ್ಳಲಾಗಲಿಲ್ಲ. ಇವುಗಳಲ್ಲಿ ಯಾವ ಒಂದು ಗುಂಪೂ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಸಮಾನ ಸ್ಥಾನಮಾನ ಗಳಿಸಲು ಸಾಧ್ಯವಾಗಿಲ್ಲ. ಈ ಎರಡೂ ಗುಂಪುಗಳ ಹಿತರಕ್ಷಣೆಗಾಗಿ ಗಾಂಧೀಯವರು ಹೋರಾಡಿದ ಕ್ರಮದಿಂದ ದ್ವಿಮುಖ ಸಾಧನೆ ಸಾಧ್ಯವಾಯಿತು. ಸಾಂಪ್ರದಾಯಕವಾದ ನಂಬಿಕೆಗಳ ಬಿಗಿತ ವನ್ನು ಸಡಿಲಿಸಲು ಅವರು ಮಾಡಿದ ಪ್ರಯತ್ನಗಳಿಂದಾಗಿ ಈ ಗುಂಪು ಗಳ ಹಿತರಕ್ಷಣೆಗಾಗಿ ಗಾಂಧೀಯವರು ಹೋರಾಡಿದ ಕ್ರಮದಿಂದ ದ್ವಿಮುಖ ಸಾಧನೆ ಸಾಧ್ಯವಾಯಿತು. ಸಾಂಪ್ರದಾಯಿಕವಾದ ನಂಬಿಕೆ ಗಳ ಬಿಗಿತವನ್ನು ಸಡಿಲಿಸಲು ಅವರು ಮಾಡಿದ ಪ್ರಯತ್ನಗಳಿಂದಾಗಿ ಈ ಗುಂಪುಗಳ ಕೆಲವು ಅಪೂರ್ವ ವ್ಯಕ್ತಿಗಳು ಆ ಸಮಾಜದ ಮಟ್ಟಕ್ಕೆ ಬಂದರಲ್ಲದೆ ಅತ್ಯುನ್ನತವಾದ ಸ್ಥಾನವನ್ನೂ ಆಕ್ರಮಿಸಿದರು. ೧೯೨೫ ರಲ್ಲಿ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕಾಗಿ ಗಾಂಧೀಯವರು ಆಯ್ಕೆ

ಮಾಡಿದ ಸರೋಜಿನಿ ನಾಯ್ಡು ಇಂಥ ಒಂದು ನಿದರ್ಶನ. ೧೯೩೧ ರಲ್ಲಿ ನೆಹರೂರವರು ಗಾಂಧೀಯವರೊಂದಿಗೆ ಸಮಾಲೋಚಿಸಿ ಮೂಲಭೂತ ಹಕ್ಕುಗಳು ಹಾಗೂ ಆರ್ಥಿಕ ನೀತಿಯ ಕುರಿತಾದ ಠರಾವುಗಳನ್ನು ರೂಪಿಸಿದರು. ಈ ಠರಾವುಗಳನ್ನು ಅನುಮೋದಿಸಿದ ಬಳಿಕ ಗಾಂಧೀಯವರು ನುಡಿದರು, "ಸಾರ್ವಜನಿಕ ಉದ್ಯೋಗಗಳು, ಉನ್ನತ ಹಾಗೂ ಗೌರವಾನ್ವಿತ ಹುದ್ದೆಗಳಿಗೆ ಸಂಬಂಧಿಸಿದಂತೆ ಮಹಿಳೆಯರನ್ನು ಅನರ್ಹಗೊಳಿಸುವ ವೈಕಲ್ಯಗಳನ್ನು ನಿವಾರಿಸಬೇಕು. ಈ ಕೆಲಸವಾಯಿತೆಂದರೆ, ಆ ಗಳಿಗೆಯಿಂದಲೆ ಮಹಿಳೆಯರನ್ನು ಅನರ್ಹಗೊಳಿಸುವ ಅನೇಕ ಪದ್ಧತಿಗಳು ಮಾಯವಾಗುವುವು. ಕಾಂಗ್ರೆಸ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಾವು ಅಂಥ ಯಾವ ಅನರ್ಹತೆಯನ್ನೂ ಮಾನ್ಯ ಮಾಡಿಲ್ಲ. ಶ್ರೀಮತಿ ಆ್ಯನಿಬೆಸೆಂಟ್ ಹಾಗೂ ಸರೋಜಿನಿ ನಾಯ್ಡು ಅವರು ನಮ್ಮ ಅಧ್ಯಕ್ಷರಾಗಿದ್ದರು. ಭಾವೀ ಸ್ವತಂತ್ರ ಭಾರತದಲ್ಲಿ ಮಹಿಳಾ ಅಧ್ಯಕ್ಷರನ್ನು ಹೊಂದುವ ಅವಕಾಶ ವಂತೂ ಇದ್ದೇ ಇದೆ." ಆದರೂ ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಳ್ಳಬಲ್ಲ ಅಪರೂಪದ ಮಹಿಳೆಯರಿಗೆ ಮಾತ್ರ ಈ ಬಗೆಯ ಹೊಸ ಶಾಸನದಿಂದ ಪ್ರಯೋಜನವಾದೀತೆಂಬ ಎಚ್ಚರ ಗಾಂಧೀಯವರಲ್ಲಿ ಇತ್ತು.

ಎರಡನೆಯದಾಗಿ, ಸ್ತ್ರೀಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳ ಸುಧಾರಣೆಗಾಗಿ ಒಂದು ರಚನಾತ್ಮಕ ಕಾರ್ಯಕ್ರಮ ರೂಪಿಸುವಲ್ಲಿ ಗಾಂಧೀಯವರು ವಿಫಲರಾದರೂ ಅವರ ಶೋಷಿತ ಸ್ಥಿತಿಯನ್ನು ನಮ್ಮ ಸಮಾಜ ನೈತಿಕ ಪ್ರಶ್ನೆಯಾಗಿ ಪರಿಗಣಿಸಬೇಕೆಂದು ಸೂಚಿಸುವಲ್ಲಿ ಯಶಸ್ವಿಯಾದರು. ಮಹಿಳೆಯರ ಸ್ಥಿತಿಗತಿಗಳ ಬಗೆಗೆ ಸಹಾನುಭೂತಿಪರ ಜಾಗೃತಿ ಮೂಡಿಸುವಲ್ಲಿ ಅವರ ಕೊಡುಗೆ ಗಮನಾರ್ಹವಾದುದು. ಮಹಿಳೆಯರು ನಿರ್ವಹಿಸುವ ಕೆಲವೊಂದು ಜವಾಬ್ದಾರಿಗಳನ್ನು ಆದರ್ಶೀಕರಿಸಿ ನೋಡುವ ಕೆಲವು ಒಲವುಗಳು

ಅವರಲ್ಲಿದ್ದವು; ಆದರೂ ಸ್ತ್ರೀ ಪುರುಷರಿಬ್ಬರಿಗೂ ಸಮಾನ ಸ್ವಾತಂತ್ರ್ಯ ವಿರಬೇಕೆಂಬ ಅವರ ಮಾತಿನಿಂದ ಹೊರಹೊಮ್ಮುವ ತಾರ್ಕಿಕ ಪರಿಣಾಮವನ್ನು ಎದುರಿಸಲು ಅವರು ಹಿಂಜರಿಯಲಿಲ್ಲ. ಉದಾಹರಣೆಗೆ, ಮಹಿಳೆಯರಿಗೆ ಸಮಾನ ಆಸ್ತಿ ಹಕ್ಕು ನೀಡಿದರೆ ಅದು ಅನೈತಿಕತೆಗೆ ದಾರಿ ಮಾಡಿಕೊಡಬಹುದೆಂದು ಯಾರೋ ಹೇಳಿದಾಗ ಗಾಂಧೀಯವರು ಮಹಿಳೆಯರ ಪರ ವಹಿಸಿ ಖಡಾಖಂಡಿತ ವಾದ ಉತ್ತರ ನೀಡಿದರು, "ಗಂಡಸರಿಗಿರುವ ಸ್ವಾತಂತ್ರ್ಯ ಹಾಗೂ ಆಸ್ತಿ ಹಕ್ಕಿನಿಂದ ಅವರಲ್ಲೂ ಅನೈತಿಕತೆ ವ್ಯಾಪಕವಾಗಿಲ್ಲವೇನು? ನಿಮ್ಮ ಉತ್ತರ ಹೌದು ಎಂದಾದರೆ ಮಹಿಳೆಯರಿಗೂ ಅದೇ ರೀತಿ ಇರಲಿ ಬಿಡಿ. ಪುರುಷರಿಗಿರುವಂತೆಯೇ ಮಹಿಳೆಯರಿಗೂ ಒಡೆತನದ ಹಕ್ಕು ಹಾಗೂ ಇನ್ನಿತರ ಹಕ್ಕುಗಳು ದೊರೆತಾಗ ಈ ಹಕ್ಕುಗಳನ್ನು ಉಪಭೋಗಿಸುವುದೇ ಅವರ ಗುಣದೋಷಗಳಿಗೆ ಕಾರಣವಾಗಲಾರ ದೆಂಬುದನ್ನು ಗಮನಿಸಬೇಕು. ಸ್ತ್ರೀ ಪುರುಷರ ಅಸಹಾಯಕತೆ ಯನ್ನು ಅವಲಂಬಿಸಿದ ನೈತಿಕತೆಗೆ ಶಿಫಾರಸು ಮಾಡುವಂಥದೇನಿಲ್ಲ".

ಇಷ್ಟಾದರೂ, ಅವರು ಆರ್ಥಿಕ ಸಂಪನ್ಮೂಲಗಳ ಮೇಲೆ ಸ್ವತಂತ್ರವಾದ ನಿಯಂತ್ರಣ ಸಾಧಿಸುವ ಅಗತ್ಯವನ್ನು ಮಹಿಳೆಯರ ಹಕ್ಕುಗಳಿಗಾಗಿ ನಡೆಸಿದ ಹೋರಾಟದೊಂದಿಗೆ ಬೆಸೆಯಲಿಲ್ಲ. ಗಾಂಧೀ ಯವರು ನೂಲುವಿಕೆಯನ್ನು ಮಹಿಳೆಯರ ಜೀವನೋಪಾಯವೆಂದೂ, ಕುಂಠಿತಗೊಳ್ಳುತ್ತಿದ್ದ ಮಹಿಳಾ ಉದ್ಯೋಗಾವಕಾಶಗಳ ವಿರುದ್ಧದ ಸಮರವೆಂದೂ ಪ್ರತಿಪಾದಿಸಿದರು. ಆ ಹಂತದಲ್ಲಿ ಚರಕದಿಂದ ನೂಲು ತೆಗೆಯುವುದು ಬಹಳಷ್ಟು ಹೆಂಗಸರ ಜೀವನೋಪಾಯ ವಾಗಿತ್ತು. ಜನಸಮೂಹದ ದೃಷ್ಟಿಯಿಂದ ಮಿಲ್ಲಿನ ಬಟ್ಟೆಗೆ ಖಾದಿಯು ಬದಲಿಯಾಗಲಾರದು. ಏಕೆಂದರೆ ಮಿಲ್ಲಿನ ಬಟ್ಟೆಗಿಂತ ಖಾದಿ ಹೆಚ್ಚು ದುಬಾರಿ; ಅದರ ಬಾಳಿಕೆ ಕಡಿಮೆ. ಭಾರತೀಯ ಮಾರುಕಟ್ಟೆಯಿಂದ ಬ್ರಿಟನ್ನಿನ ವಸ್ತ್ರಗಳು ಮಾಯವಾದ ಮಾತ್ರಕ್ಕೆ

ಅದು ಖಾದಿಯ ವಿಜಯವೆಂದು ತಿಳಿಯಬಾರದು; ಬದಲಿಗೆ ಅದು ಭಾರತೀಯ ಬಟ್ಟೆ ಗಿರಣಿಗಳ ವಿಜಯ.

ಹೀಗೆ ಮಹಿಳೆಯರ ಬಲಹೀನತೆಯ ಮುಖ್ಯ ಕಾರಣಗಳಲ್ಲಿ ಒಂದಾದ ಅವರ ಸಂಪೂರ್ಣ ಆರ್ಥಿಕ ಪರಾವಲಂಬನೆ ಹಾಗೂ ಕೌಟುಂಬಿಕ ಆದಾಯದ ಮೇಲೆ ನಿಯಂತ್ರಣ ಇಲ್ಲದಿರುವಿಕೆ – ಈ ಸಮಸ್ಯೆಯನ್ನು ಪರಿಹರಿಸಲು ಗಾಂಧೀಯವರು ರಚನಾತ್ಮಕವಾದ ಕಾರ್ಯಕ್ರಮ ರೂಪಿಸಿದರೆಂದು ಹೇಳಲು ಸಾಧ್ಯವಿಲ್ಲ. ಮಹಿಳೆಯರ ಆರ್ಥಿಕ ಶಕ್ತಿ ಅಥವಾ ಅವರ ಭೌತಿಕ ಸನ್ನಿವೇಶದ ಸುಧಾರಣೆಗೆ ಸಂಬಂಧಪಟ್ಟ ಕಾರ್ಯಕ್ರಮಗಳಿಲ್ಲದಿರುವಾಗ ಅವರ ಬಗೆಗಿನ ನೈತಿಕ ಕಾಳಜಿಯು ಗಾಂಧೀ ನಂತರದ ಯುಗದಲ್ಲಿ ಪಕ್ಷದ ಪ್ರಣಾಳಿಕೆ ಹಾಗೂ ಸಾರ್ವಜನಿಕ ವೇದಿಕೆಗಳಲ್ಲಿ ಕೇವಲ ತುಟಿಯಂಚಿನಲ್ಲಿ ಪ್ರದರ್ಶಿಸುವ ಸಹಾನುಭೂತಿಯ ಮಟ್ಟ ಮುಟ್ಟಿತು. ಆದರೆ ಬಹುತೇಕ ಮಹಿಳೆಯರ ಸ್ಥಿತಿಗತಿಗಳು ದಿನೇದಿನೇ ಶೋಚನೀಯವಾಗತೊಡಗಿದವು. ದೈನಂದಿನ ವ್ಯವಹಾರಗಳಲ್ಲಿ ಮಹಿಳೆಯರನ್ನು ಅಪಮಾನಕ್ಕೀಡು ಮಾಡುವ, ಅವರ ಪ್ರಗತಿಯನ್ನು ವಿರೋಧಿಸುವ ಅಂಥ ಶ್ರದ್ಧೆಯೇ ಮುಂದುವರಿಯಿತು.

ಗಾಂಧೀಯವರ ಚಿಂತನದ ಒಂದು ಮಿತಿ ಎಂದರೆ ಅವರು ಸ್ತ್ರೀಯರ ಭೌತಿಕ ಸನ್ನಿವೇಶದ ಬದಲಾವಣೆಗಿಂತ 'ನೈತಿಕ' ಸ್ಥಿತಿಗತಿಗಳ ಬದಲಾವಣೆಗೆ ಹೆಚ್ಚು ಮಹತ್ವ ನೀಡಿರುವುದು. ಅವರು ಹರಿಜನರಲ್ಲೂ ಇದೇ ಬಗೆಯ ಬದಲಾವಣೆಗಳಿಗಾಗಿ ಯತ್ನಿಸಿದರು. ಗಾಂಧೀಯವರು ವಿಮೋಚನೆಯ ತಮ್ಮ ಕಲ್ಪನೆಗೆ ಆರ್ಥಿಕತೆಯ ಅಂಶವನ್ನು ಬೆಸೆಯುವಲ್ಲಿ ವಿಫಲರಾದರು. ದಬ್ಬಾಳಿಕೆಯು ಒಂದು ಅಮೂರ್ತ ನೈತಿಕ ಸ್ಥಿತಿಯಲ್ಲ. ಅದು ಉತ್ಪಾದನಾ ಸಂಬಂಧಗಳೊಂದಿಗೆ ತಳುಕು ಹಾಕಿಕೊಂಡಿರುವ ಸಾಮಾಜಿಕ ಹಾಗೂ ಐತಿಹಾಸಿಕ ಅನುಭವ ಎಂಬ ಅರಿವು ಗಾಂಧೀಯವರಿಗಿತ್ತು. ಆದರೂ

ಅವರು ಉತ್ಪಾದನೆಯ ಬಾಹ್ಯ ಪ್ರಪಂಚವನ್ನಾಗಲಿ, ಲೈಂಗಿಕತೆ, ಸಂತಾನೋತ್ಪತ್ತಿ ಮತ್ತು ಕುಟುಂಬದ ಆಂತರಿಕ ಪ್ರಪಂಚವನ್ನಾಗಲಿ ಪರಿವರ್ತಿಸಲು ಹೋಗದೆ ಮಹಿಳೆಯರ ಸ್ಥಾನಮಾನಗಳ ಬದಲಾವಣೆಗೆ ಯತ್ನಿಸಿದರು. ಗಾಂಧೀಯವರ ದೃಷ್ಟಿಯಲ್ಲಿ ಲಿಂಗ ಸಮಾನತೆ ಎಂಬುದು ವೃತ್ತಿ ಸಮಾನತೆಯಾಗಲಿ, ದುಡಿಮೆ ಹಾಗೂ ಬಲಾಬಲಗಳ ಕ್ಷೇತ್ರದಲ್ಲಿನ ಸಮಾನತೆಯಾಗಲಿ ಅಲ್ಲ. ಆ್ಯಡಮ್ ಕಾಲದಿಂದ ಈವರೆಗಿನ ಸ್ತ್ರೀ ಪುರುಷರ ನಡುವಿರುವ ಶ್ರಮ ವಿಭಜನೆಯಲ್ಲಿ 'ಸಾಮರಸ್ಯ' ಮೂಡಿಸುವ ಕಡೆಗೆ ಅವರ ಒಲವಿತ್ತು. "ಆ್ಯಡಮ್ ಹೆಣೆದರೆ ಈವ್ ನೂಲುತ್ತಿದ್ದಳು". ಮಹಿಳೆಯರು ಕೂಲಿಗಾಗಿ ಕೆಲಸ ಮಾಡುವುದು ಅಥವಾ ವ್ಯಾಪಾರದಲ್ಲಿ ತೊಡಗುವುದರ ಬಗ್ಗೆ ಅವರಿಗೆ ವಿಶ್ವಾಸವಿರಲಿಲ್ಲ. ಮಹಿಳೆಯರ ಸಾಂಪ್ರದಾಯಿಕ ಪಾತ್ರ ನಿರ್ವಹಣೆಯಲ್ಲಿ ಆಗಬೇಕಾದ ಯಾವುದೇ ಬದಲಾವಣೆಯ ಕುರಿತು ಗಾಂಧೀಯವರು ಚಿಂತಿಸಲಿಲ್ಲ. ಸ್ತ್ರೀ ಪುರುಷರಿಬ್ಬರನ್ನೂ ಮೂಲಭೂತವಾಗಿ ಸಮಾನರೆಂದು ಪರಿಗಣಿಸಿದರೂ ಕೂಡ ಒಂದು ಹಂತದಲ್ಲಿ ಅವರಿಬ್ಬರ ಮಧ್ಯೆ ಗಣನೀಯವಾದ ವ್ಯತ್ಯಾಸವನ್ನು ಅವರು ಕಲ್ಪಿಸುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಗಾಂಧೀಯವರು, ಸ್ತ್ರೀ ಪುರುಷರ ನಡುವೆ ಬಿಗಿಯಾದ ಶ್ರಮ ವಿಭಜನೆಯ ಕಲ್ಪನೆಯನ್ನು ವಿರೋಧಿಸಿದರೂ ಅವರಿಬ್ಬರ ವೃತ್ತಿಗಳು ಬೇರೆ ಬೇರೆಯಾಗಿರಬೇಕೆಂಬ ವಿಚಾರವನ್ನು ಹಿಂದು ಮುಂದು ನೋಡದೆ ದೃಢವಾಗಿ ಪ್ರತಿಪಾದಿಸುತ್ತಿದ್ದರು. ಉದಾಹರಣೆಗೆ, ದೃಢಕಾಯರಾದ ಗಂಡಸರಿಗೆ ಪುರುಷ ಯೋಗ್ಯವಾದ ಆಯುಧಗಳನ್ನು ಹಿಡಿದು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಅನುವು ಮಾಡಿಕೊಡುವುದನ್ನು ಬಿಟ್ಟು ಅವರನ್ನು "ಹೆಂಗಸರಂತೆ ನೂಲು ತೆಗೆಯಲು" ಹಚ್ಚಿ ರಾಷ್ಟ್ರದ ಶಕ್ತಿಯನ್ನು ಪೋಲುಮಾಡುತ್ತಿದ್ದಾರೆಂದು ಓರ್ವ ಪ್ರೊಫೆಸರರು ಆಪಾದಿಸಿದರು. ಇದಕ್ಕೆ ಉತ್ತರ

ವಾಗಿ ಗಾಂಧೀಯವರು ತಮ್ಮ ನೂಲುವಿಕೆಯ ಕಾರ್ಯಕ್ರಮವನ್ನು ಹೀಗೆ ಸಮರ್ಥಿಸಿಕೊಂಡರು: "ಯಾವುದೇ ವೃತ್ತಿಯು ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತ ಎಂದೆನ್ನುವುದು ಅನುಭವಕ್ಕೆ ವಿರುದ್ಧ ವಾದುದು. ಮಹಿಳೆಯರು **ಸ್ವಾಭಾವಿಕವಾಗಿ** (ಒತ್ತು ಲೇಖಕಿಯದ್ದು) ಮನೆಮಂದಿಗೆಲ್ಲ ಅಡುಗೆ ಮಾಡಿ ಹಾಕಿದರೆ, ಪ್ರಪಂಚದಾದ್ಯಂತ ಗಂಡಸರು ದೊಡ್ಡ ಪ್ರಮಾಣದಲ್ಲಿ ಅದೇ ಕೆಲಸ ಮಾಡುತ್ತಾರೆ. ಹೋರಾಟ ಮುಖ್ಯವಾಗಿ ಪುರುಷರ ವೃತ್ತಿ. ಆದರೆ ಅರಬ್ ಮಹಿಳೆಯರು ಇಸ್ಲಾಂನ ಆರಂಭಿಕ ಸಂಘರ್ಷಗಳಲ್ಲಿ ತಮ್ಮ ಗಂಡಂದಿರ ಜೊತೆಗೂಡಿ ಸರಿಸಮನಾಗಿ ಹೋರಾಡಿದರು. ಇಂದು ಮಹಿಳೆಯರು ಯುರೋಪ್‌ನಲ್ಲಿ ವಕೀಲರು, ವೈದ್ಯರು ಹಾಗೂ ಆಡಳಿತಗಾರರಾಗಿ ಹೆಸರು ಮಾಡಿರುವುದನ್ನು ನಾವು ಕಾಣಬಹುದು".

ಗ್ರಾಮೀಣ ಭಾರತದಲ್ಲಿ ಕೃಷಿ ಕಾರ್ಮಿಕರು ಹಾಗೂ ಸಣ್ಣ ರೈತರ ವರ್ಗಕ್ಕೆ ಸೇರಿದ ಮಹಿಳೆಯರು ಉತ್ಪಾದನಾ ಚಟುವಟಿಕೆಗಳಲ್ಲಿ ಪುರುಷರಿಗೆ ಸರಿಸಾಟಿಯಾಗಿ ಪಾಲ್ಗೊಳ್ಳುತ್ತಾರೆಂಬ ಸಂಗತಿ ಕೂಡ "ಇದು ಕುಟುಂಬದ ಅಲ್ಪ ಆದಾಯವನ್ನು ಕೊಂಚ ಹೆಚ್ಚಿಸಲು ಪೂರಕವಾಗಬಹುದು. ಆದರೆ ಸಂಪಾದನೆಯ ಪ್ರಧಾನ ಹೊಣೆ ಪುರುಷನದ್ದೇ ಆಗಿದೆ" ಎಂಬ ಗಾಂಧೀಯವರ ನಂಬಿಕೆಯನ್ನು ಅಲುಗಾಡಿಸಲು ಶಕ್ಯವಾಗಲಿಲ್ಲ. ಇದು ಅತ್ಯಂತ ಸ್ವಾಭಾವಿಕವಾದ ಶ್ರಮ ವಿಭಜನೆ ಎಂದು ಅವರು ಭಾವಿಸಿದ್ದರು. ಮಾತೃತ್ವದ ಹೊಣೆಯನ್ನು ಪ್ರತಿಯೊಬ್ಬ ಮಹಿಳೆಯೂ ನಿಭಾಯಿಸಬೇಕೆಂದು ನಿರೀಕ್ಷಿಸಲಾಗುತ್ತಿತ್ತಾದರೂ ಪುರುಷರು ಈ ಗುಣವನ್ನು ಹೊಂದಿರಬೇಕಾಗಿರಲಿಲ್ಲ. "ಆಕೆ ನಿಷ್ಕ್ರಿಯಳು. ಆತ ಸಕ್ರಿಯ. ಆಕೆ ಪ್ರಧಾನವಾಗಿ ಮನೆಯೊಡತಿ. ಆತ ದುಡಿದು ಸಂಪಾದಿಸುವವನು. ಆತನೇ ಆಹಾರದ ಪಾಲಕ ಹಾಗೂ ವಿತರಕ". ಗಾಂಧೀಯವರ ದೃಷ್ಟಿಯಲ್ಲಿ "ಒಲೆಯ ಮುಂದಿನ ಕೆಲಸವನ್ನು ಬದಿಗೊತ್ತಿ ಅದೇ

ಒಲೆಯ ರಕ್ಷಣೆಗಾಗಿ ಬಂದೂಕು ಹಿಡಿಯಲು ಮಹಿಳೆಗೆ ಕರೆನೀಡುವುದು ಸ್ತ್ರೀ ಪುರುಷರಿಬ್ಬರಿಗೂ ಅಪಮಾನಕರ. ಇದು ಮತ್ತೆ ಬರ್ಬರತೆಯತ್ತ ಹೊರಳುವ ಕ್ರಮ".

ಹೀಗೆ ಅವರು ಸ್ತ್ರೀ ಪುರುಷರನ್ನು 'ನಿಷ್ಕ್ರಿಯ' ಮತ್ತು 'ಸಕ್ರಿಯ' ಎಂಬ ದೃಷ್ಟಿಯಿಂದ ನೋಡಿದರು. ಈ ದೃಷ್ಟಿಯೇ ಮಹಿಳೆಯರಿಗೆ ಕುಟುಂಬದಲ್ಲಾಗಲಿ, ಸಮಾಜದಲ್ಲಾಗಲಿ ಯಾವುದೇ ಅಧಿಕಾರ ಹಾಗೂ ನಿರ್ಧಾರ ಕೈಗೊಳ್ಳುವ ಶಕ್ತಿಯನ್ನು ನಿರಾಕರಿಸುವ ಮುಖ್ಯ ಸೈದ್ಧಾಂತಿಕ ತಂತ್ರವಾಗಿದೆ.

ಸ್ತ್ರೀಯರ ಮೇಲಿನ ಪುರುಷರ ಆಧಿಪತ್ಯವನ್ನು ಗಾಂಧೀಯವರು ವಿರೋಧಿಸಿದರು. ಮಹಿಳೆಯು ಪುರುಷನಿಗೆ ಪೂರಕವಾದ ಪಾತ್ರವನ್ನು ನಿರ್ವಹಿಸಬೇಕೆಂದು ಅವರು ಸೂಚಿಸಿದರು. ಆದರೆ ಈ ಪಾತ್ರ ನಿರ್ವಹಣೆಯಲ್ಲೇ ಅವರು ವಿರೋಧ ವ್ಯಕ್ತಪಡಿಸಿದ ಅಂಶವೂ ಅಂತರ್ಗತವಾಗಿದೆ. ಬಾಹ್ಯ ಪ್ರಪಂಚದಲ್ಲಿ ಪುರುಷರೇ ಪರಮಾಧಿಕಾರ ಉಳ್ಳವರು. ಅವರಿಗೆ ಅತಿ ಹೆಚ್ಚು ಪ್ರಾಪಂಚಿಕ ಜ್ಞಾನ ಇರಬೇಕಾದ್ದು ಅಗತ್ಯ ಕೂಡ. ಆದರೆ ಇನ್ನೊಂದೆಡೆ, ಮನೆಯೊಳಗಿನ ಬದುಕು ಸಂಪೂರ್ಣ ಹೆಂಗಸರಿಗೆ ಸೇರಿದ್ದು; ಆದ್ದರಿಂದಲೇ ಗೃಹಕೃತ್ಯಗಳಲ್ಲಿ ಹೆಂಗಸರಿಗೆ ಹೆಚ್ಚಿನ ಹತೋಟಿ ಇರಬೇಕೆಂದು ಗಾಂಧೀಯವರು ಭಾವಿಸಿದರು. "ಬದುಕಿನಲ್ಲಿ ಅವರಿಬ್ಬರೂ ಸಮಾನವರೆಂಬುದು ನಿಜ; ಆದರೆ ಅವರ ಕೆಲಸಕಾರ್ಯಗಳಲ್ಲಿ ಭಿನ್ನತೆ ಇದೆ".

"ಪ್ರಕೃತಿಯು ಸ್ತ್ರೀ ಪುರುಷರನ್ನು ಪ್ರತ್ಯೇಕವಾಗಿ ಸೃಷ್ಟಿಸಿರುವುದರಿಂದ ಇವರಿಬ್ಬರ ಶಿಕ್ಷಣದಲ್ಲೂ ವ್ಯತ್ಯಾಸವನ್ನು ಪಾಲಿಸಬೇಕು", ಆದ್ದರಿಂದ ಈ ವಿಷಯದಲ್ಲಿ ಗಾಂಧೀಯವರ ಅಂತಿಮ ತೀರ್ಮಾನ ಇದು : "ಮನೆಯನ್ನು ನೋಡಿಕೊಳ್ಳುವುದು ಹೆಂಗಸಿನ ಕರ್ತವ್ಯ. ಗಂಡಸು ಮನೆಯ ಹೊರಗೆ ಯಜಮಾನ". ಅವರ ದೃಷ್ಟಿಯಲ್ಲಿ

ತನ್ನ ಕರ್ತವ್ಯವನ್ನು ತಿಳಿದು ಅದನ್ನು ಪರಿಪಾಲಿಸುವ ಮಹಿಳೆಯು ತನ್ನ ಗೌರವಾನ್ವಿತ ಸ್ಥಾನವನ್ನು ಮನಗಾಣುತ್ತಾಳೆ. ತನ್ನ ಗೃಹಕೃತ್ಯಗಳಲ್ಲಿ ಆಕೆ ರಾಣಿಯೇ ಹೊರತು ದಾಸಿಯಲ್ಲ".

"ಪತ್ನಿಯು ಗಂಡನಿಗಿಂತ ಭಿನ್ನವಾದ ಸ್ವತಂತ್ರವಾದ ಜೀವನೋಪಾಯ ಕಂಡುಕೊಳ್ಳುವ" ಸಾಧ್ಯತೆಯನ್ನು ಗಾಂಧೀಯವರು ಮನಗಾಣಲಿಲ್ಲ. "ಮಕ್ಕಳ ಲಾಲನೆ–ಪಾಲನೆ ಹಾಗೂ ಮನೆಯ ಒಪ್ಪ ಓರಣದ ಕೆಲಸಗಳೇ ಆಕೆಯ ಪೂರ್ಣ ಶಕ್ತಿಯನ್ನು ಬಯಸುತ್ತವೆ. ಸುವ್ಯವಸ್ಥಿತವಾದ ಸಮಾಜವೊಂದರಲ್ಲಿ ಕುಟುಂಬ ನಿರ್ವಹಣೆಯ ಹೆಚ್ಚುವರಿ ಹೊರೆಯು ಆಕೆಯ ಮೇಲೆ ಬೀಳಕೂಡದು. ಗಂಡಸು ಕುಟುಂಬದ ಯೋಗಕ್ಷೇಮ ನೋಡಿಕೊಳ್ಳಬೇಕು; ಹೆಂಗಸು ಗೃಹಕೃತ್ಯವನ್ನು ನೋಡಿಕೊಳ್ಳಬೇಕು. ಹೀಗೆ ಇಬ್ಬರೂ ಒಬ್ಬರಿಗೊಬ್ಬರು ಬೆಂಬಲವಾಗಿ ನಿಂತು ಪರಸ್ಪರ ಹೊಂದಿಕೊಂಡು ಬದುಕಬೇಕು" ಎಂದು ಗಾಂಧೀಯವರು ಭಾವಿಸಿದ್ದರು. "ಗಂಡಸು ಸವಾರಿ ಕುದುರೆಯನ್ನೇರುವನೆಂದು ಅವನಂತೆ ತಾನೂ ಏರಲು ಯತ್ನಿಸುವ ಹೆಂಗಸು ತಾನೂ ಬೀಳುತ್ತಾಳೆ; ಗಂಡಸನ್ನೂ ಬೀಳಿಸುತ್ತಾಳೆ". ಗಾಂಧೀಯವರ ಹೊಸ ವ್ಯವಸ್ಥೆಯಲ್ಲಿ "ಎಲ್ಲರೂ ಯಥಾಶಕ್ತಿ ದುಡಿದು ದುಡಿಮೆಗೆ ತಕ್ಕ ಪ್ರತಿಫಲ ಪಡೆಯುವರು". ಆದರೆ ಮಹಿಳೆಯರ ಸಾಮರ್ಥ್ಯಕ್ಕೆ ಸಂಬಂಧಪಟ್ಟಂತೆ, ಗಾಂಧೀಯವರು ಒಂದು ಯಾದೃಚ್ಛಿಕ ಮಿತಿಯನ್ನು ಹೇಳಿದ್ದಾರೆ: "ಹೊಸ ವ್ಯವಸ್ಥೆಯಲ್ಲಿ ಮಹಿಳೆಯರು ಅರೆಕಾಲಿಕ ಕೆಲಸಗಾರರು; ಮನೆಯನ್ನು ನೋಡಿಕೊಳ್ಳುವುದೇ ಅವರ ಮುಖ್ಯ ಉದ್ಯೋಗ".

ಗಾಂಧೀಯವರೇ ಹೇಳಿರುವಂತೆ ಜವಹರಲಾಲ ನೆಹರೂರವರ ಕೈಯಲ್ಲಿ ನೂಲುವ ಚಕ್ರವು ಕ್ರಾಂತಿಕಾರಿ ಅಸ್ತ್ರವಾದಂತೆ ಮಹಿಳೆಯರ ಕೈಯಲ್ಲಿ ಹೀಗಾಗಲು ಸಾಧ್ಯವೇ ಎಂದು ಯಾರೋ ಕೇಳಿದರು. ಅದಕ್ಕೆ ಅವರೆಂದರು, "ಓರ್ವ ಅಜ್ಞಾನಿ ಹೆಂಗಸಿನ ಕೈಯಲ್ಲಿ ಹೀಗಾ

ಗಲು ಹೇಗೆ ಸಾಧ್ಯ? ಆದರೆ ಭಾರತದ ಪ್ರತಿಯೋರ್ವ ಮಹಿಳೆಯೂ ನೂಲು ತೆಗೆದರೆ ಖಂಡಿತಕ್ಕೂ ಆಗ ಮೌನ ಕ್ರಾಂತಿಯಾಗುತ್ತದೆ. ಜವಹರಲಾಲರು ಇದರ ಪೂರ್ಣ ಪ್ರಯೋಜನ ಪಡೆಯಬಹುದು".

ಮಹಿಳೆಯರು ಗಂಡಸರಿಗೆ ಅಧೀನವಾಗಿ ವರ್ತಿಸುವುದನ್ನು ಗಾಂಧೀಯವರು ವಿರೋಧಿಸಲಿಲ್ಲ. ಅದಕ್ಕೆ ಬದಲಾಗಿ "ಹೆಂಡತಿಯು ಗಂಡನಿಗೆ ತಗ್ಗಿಬಗ್ಗಿ ನಡೆಯುವುದನ್ನು" ವಿರೋಧಿಸಿದರು. ಉದಾಹರಣೆಗೆ, ಕುಟುಂಬ ವ್ಯವಸ್ಥೆಯನ್ನು ಕುರಿತು ಯಾರೇ ಆಗಲಿ ನೇರವಾದ ದೋಷಾರೋಪಣೆಯನ್ನು ಮಾಡಿದರೆ ಗಾಂಧೀಯವರು ಅದನ್ನು 'ಉದ್ರೇಕಿತ ಉತ್ಪ್ರೇಕ್ಷೆ' ಎಂದು ಅಲ್ಲಗಳೆಯುತ್ತಿದ್ದರು. ಇಂಥ ಒಂದು ನಿದರ್ಶನವನ್ನು ಇಲ್ಲಿ ಉಲ್ಲೇಖಿಸುವೆ. ಯುವಕನೊಬ್ಬ ಒಮ್ಮೆ ಕೋಪೋದ್ರಿಕ್ತನಾಗಿ ಗಾಂಧೀಯವರಿಗೆ ಪತ್ರ ಬರೆದ. ವಿಕೃತ ಕಾಮಿಯೂ ವ್ಯಭಿಚಾರಿಯೂ ಆದ ಪತಿಯ ದೆಸೆಯಿಂದ ತನ್ನ ತಂಗಿಗೆ ಒದಗಿದ ಕರುಣಾಜನಕ ದುಸ್ಥಿತಿಯ ಬಗ್ಗೆ ಬರೆಯುತ್ತಾ ಆಕೆಯ ಅಸಹಾಯಕತೆಯನ್ನು "ಪುರುಷನ ಕರುಣೆಯಲ್ಲಿ ಮಹಿಳೆ ಬದುಕಬೇಕಾಗಿ ಬಂದಿರುವ ಹಿಂದೂಧರ್ಮದ ಅತ್ಯಂತ ಅಪಮಾನಕರ ಅಂಶ" ಎಂದು ಬಣ್ಣಿಸುತ್ತಾನೆ. ಗಾಂಧೀಯವರು ಈ ಬಗೆಯ ವಿವೇಕರಹಿತ ದೂಷಣೆ "ಯಾವುದೋ ಒಂದು ಪ್ರತ್ಯೇಕವಾದ ಘಟನೆಯನ್ನು ಆಧರಿಸಿ ಮಾಡಿರುವ ಉದ್ರೇಕಿತವಾದ ಸರಳ ತೀರ್ಮಾನ" ಎಂದು ವಾದಿಸುತ್ತಾರೆ. ಏಕೆಂದರೆ "ಮಿಲಿಯಗಟ್ಟಲೆ ಹಿಂದೂ ಪತ್ನಿಯರು ಪ್ರಶಾಂತ ಜೀವನ ನಡೆಸುತ್ತಿದ್ದು ಅವರು ತಮ್ಮ ಮನೆಗಳಲ್ಲಿ ರಾಣಿಯರಂತೆ ಮೆರೆಯುತ್ತಿದ್ದಾರೆ. ಯಾವುದೇ ಹೆಂಗಸು ಅಸೂಯೆ ಪಡುವಷ್ಟರ ಮಟ್ಟಿಗೆ ಅವರು ತಮ್ಮ ಗಂಡಂದಿರ ಮೇಲೆ ನಿಯಂತ್ರಣ ಹೊಂದಿದ್ದಾರೆ."

ಮಹಿಳೆಯರು ಸಾಮಾಜಿಕವಾಗಿ ಪುರುಷರಿಗೆ ಅಧೀನರಾಗಿದ್ದರೂ 'ಮುಕ್ತ' ರಾಗಬಹುದೆಂದು ಗಾಂಧೀಯವರು ಭಾವಿಸಿದ್ದರು.

ಈ ವೈರುಧ್ಯವು ಒಟ್ಟಾರೆಯಾಗಿ ಗಾಂಧೀವಾದಿ ಲೋಕದೃಷ್ಟಿ ಹಾಗೂ ಅವರ "ಧರ್ಮದರ್ಶಿತ್ವ" ಕಲ್ಪನೆಗೆ ಸಂಬಂಧಿಸಿದ್ದಾಗಿದೆ. (ಇದು ಏಕಕಾಲಕ್ಕೆ ಅಧಿಕಾರವನ್ನು ಮೌನವಾಗಿ ಅನುಮೋದಿಸುವ ಮತ್ತು ಬಂಡೇಳುವ ಅವರ ದ್ವಂದ್ವ ಪ್ರವೃತ್ತಿಗೆ ದ್ಯೋತಕವಾಗಿದೆ.) ಕುಟುಂಬದ ಹಿರಿಯನಂತೆ ಅವರು ಅಧಿಕಾರವನ್ನು ಸಮರ್ಥಿಸುತ್ತಾ ಅದನ್ನು 'ನ್ಯಾಯಪರ' ಹಾಗೂ 'ಮಾನವೀಯ'ಗೊಳಿಸಿದರು. ಅಧಿಕಾರ ಹಾಗೂ ಅನ್ಯಾಯದ ನಡುವಣ ಒಳಸಂಬಂಧಗಳು, ಮಹಿಳೆಯ ದಾಸ್ಯ, ಗೃಹಕೃತ್ಯಗಳೇ ಮಹಿಳೆಯ ಮುಖ್ಯ ಕ್ಷೇತ್ರ ವೆಂದು ಹೇಳುತ್ತಾ ಅವಳ ಆರ್ಥಿಕ ಸ್ವಾವಲಂಬನವನ್ನು ನಿರಾಕರಿಸು ವುದು – ಇವುಗಳ ನಡುವಣ ಒಳಸಂಬಂಧಗಳನ್ನು ಗಾಂಧೀಯವರು ಗುರುತಿಸುವುದಿಲ್ಲ. ಅವರು ಸಮಾಜದ 'ಶ್ರಮ ವಿಭಜನೆ' ಯಲ್ಲಿ 'ಸಾಮರಸ್ಯ'ವನ್ನು ಪ್ರತಿಪಾದಿಸಿದರೇ ಹೊರತು ದಬ್ಬಾಳಿಕೆಯನ್ನಲ್ಲ'[೯] ಈ ಬಗೆಯ ಚಿಂತನದ ಜೊತೆ ಜೊತೆಗೆ ಹಿರಿಯ ಅಧಿಕಾರಿಗಳ ಹಸ್ತ ಕ್ಷೇಪವಿಲ್ಲದೆ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವ ಜನತೆಯ ಸ್ವಾತಂತ್ರ್ಯ, ಸ್ಥಾನೀಯ ಸ್ವಯಂ ನಿರ್ಧಾರ ಇವೇ ಮುಂತಾದ ಅರಾಜಕ ತತ್ವಗಳನ್ನು ಆಧರಿಸಿದ ಸಂಕೀರ್ಣ ಸಮಾಜದ ದೃಷ್ಟಿಯೂ ಇದೆ. ನ್ಯಾಯಬಾಹಿರವಾದ ಕಾನೂನುಗಳನ್ನು ಪ್ರತಿಯೊಬ್ಬರೂ ಮುರಿಯಬೇಕೆಂಬುದೇ ಗಾಂಧೀಯವರ ಪ್ರಕಾರ ಸ್ವರಾಜ್ಯದ ಸಾರ. ದಬ್ಬಾಳಿಕೆಯನ್ನು ಸಹಿಸಿಕೊಳ್ಳಲು ನಿರಾಕರಿಸುವುದೆಂದರೆ ದಬ್ಬಾಳಿಯು ಅಲ್ಲಿಗೇ ಕೊನೆಗೊಳ್ಳುವುದೆಂದರ್ಥ.

ಅಧಿಕಾರಕ್ಕೆ ವಿಧೇಯನಾಗಿರುವುದು ಹಾಗೂ ಅದರ ವಿರುದ್ಧ ಬಂಡೇಳುವುದು – ಈ ದ್ವಂದ್ವ ಮನೋಭಾವ ಗಾಂಧೀಯವರು ಕೈಗೊಂಡ ಪ್ರತಿಯೊಂದು ಆಂದೋಳನದಲ್ಲಿ ಹಾಗೂ ಅವರ ಅಹಿಂಸಾ ತ್ಮಕ ಸತ್ಯಾಗ್ರಹದ ತತ್ವದಲ್ಲಿ ಸುವ್ಯಕ್ತ. ಸತ್ಯಾಗ್ರಹಿಯು ಶೋಷ ಕನ ಮನಸ್ಸನ್ನು ಗೆಲ್ಲಬೇಕು; ಅವನು ಹೆಚ್ಚು 'ನ್ಯಾಯಪರ' ನಾಗಿ

ಬದುಕಲು ಸಹಾಯ ಮಾಡಬೇಕು. ಕಾನೂನುಗಳಲ್ಲಿರುವ ಅನ್ಯಾಯ, ಅಕ್ರಮವನ್ನು ವಿರೋಧಿಸುವುದರ ಜೊತೆಗೇನೇ ಅಧಿಕಾರದ ಸಾಮಾನ್ಯ ವ್ಯಾಪ್ತಿ ಹಾಗೂ ನಿಯಮಗಳನ್ನೂ ಒಪ್ಪಿಕೊಳ್ಳಬೇಕು.

ಪ್ರತಿಸಲವೂ ಹೋರಾಟದ ಮಾರ್ಗವನ್ನು ಯಾದೃಚ್ಛಿಕವಾಗಿ ಸೂಚಿಸುತ್ತಿದ್ದವರು ಗಾಂಧೀಯವರೇ. ಆದ್ದರಿಂದಲೆ ಅವರು ಮಹಿಳಾ ಅಂದೋಳನವನ್ನು ಹೆಚ್ಚು ತೀವ್ರಗೊಳಿಸದೆ ಅದಕ್ಕೆ ಪೂರಕ ಸ್ಥಾನ ಒದಗಿಸಿ ರಾಷ್ಟ್ರೀಯ ಅಂದೋಳನದ ಮಡಿಲಿಗೆ ಸೇರಿಸಿ ಕೊಂಡರು. ಅವರು ಬಡ ರೈತರು, ಭೂಹೀನ ಕೃಷಿ ಕಾರ್ಮಿಕರು, ಕಾರ್ಖಾನೆಗಳ ಕೆಲಸಗಾರರು ಹಾಗೂ ಹರಿಜನರು ಮುಂತಾದ ಶೋಷಿತ ಗುಂಪುಗಳ ವಿಚಾರದಲ್ಲೂ ಇದೇ ರೀತಿ ನಡೆದುಕೊಂಡರು. ಇದು ಒಂದು ಬಗೆಯಲ್ಲಿ ಅವರ ರಾಜಕೀಯ ದೂರದರ್ಶಿತ್ವವನ್ನು ಸೂಚಿಸುತ್ತದೆ. ಏಕೆಂದರೆ ರಾಷ್ಟ್ರೀಯ ಅಂದೋಳನಕ್ಕೆ ವಿರುದ್ಧ ವಾಗಿ ಅಥವಾ ಸಮಾನಾಂತರವಾಗಿ ಈ ಗುಂಪುಗಳು ಅಂದೋಳನ ನಡೆಸಬಹುದಾಗಿತ್ತು, ಇನ್ನೊಂದು ಬಗೆಯಿಂದ ನೋಡಿದರೆ ಹೆಂಡತಿಯ ಮೇಲೆ ಗಂಡನ ಅಧಿಕಾರ ಅಥವಾ ಕಾರ್ಮಿಕನ ಮೇಲೆ ಮಾಲಿಕನ ಅಧಿಕಾರ – ಯಾವುದೇ ಇರಲಿ – ಅಧಿಕಾರವನ್ನು ಉದಾರ ಪೂರ್ವಕವಾದ 'ವಿಶ್ವಾಸ'ದ ತಳಹದಿಯಲ್ಲಿ ರೂಢಿಸಬಹುದೆಂಬ ಅವರ ಆಳವಾದ ಆದರೆ ಇದು ವರೆಗೆ ಯಶಸ್ವಿಯಾಗಿ ಆಚರಣೆಗಾಗಿ ಬಂದಿರದ ಗ್ರಹಿಕೆಯೂ ಇದಕ್ಕೆ ಕಾರಣವಾಗಿರಬಹುದು. ಪುರುಷರು ಸ್ವಹಿತಾಸಕ್ತಿಗಳ ರಕ್ಷಣೆಗಾಗಿ ಮಾಡಿದ ಬೋಧನೆ ಹಾಗೂ ರೂಢಿಗತ ವಾದ 'ಸ್ತ್ರೀ ಪಾರತಂತ್ರ್ಯ'ದ ಪರಿಣಾಮವಾಗಿ ಮಹಿಳೆಯರಲ್ಲಿ ಕೀಳರಿಮೆಯ ಭಾವನೆ ಉಂಟಾಯಿತೆಂಬುದನ್ನು ಗಾಂಧೀಯವರು ಮನಗಂಡಿದ್ದರು. ಆದರೆ "ಶ್ರಮ ವಿಭಜನೆ"ಯ ತಮ್ಮ ಕಲ್ಪನೆ ಯನ್ನು ಪುನಃ ಪರಿಷ್ಕರಿಸುವಲ್ಲಿ ಅವರು ವಿಫಲರಾಗುತ್ತಾರೆ. ಆದೇ ರೀತಿ ಈ ವಿಭಜನೆಯು ಮಹಿಳೆಯ ಮೇಲಿನ ನಿರ್ಬಂಧಗಳಿಗೆ ಹಾಗೂ

ಅಧೀನತೆಗೆ ಕಾರಣವಾದ "ಪುರುಷ ಹಿತಾಸಕ್ತಿಗಳ ರಕ್ಷಣೆಯ ಬೋಧನೆ"ಯು ಒಂದು ಭಾಗವೆಂದು ಗುರುತಿಸುವಲ್ಲಿ ಕೂಡ ವಿಫಲರಾಗುತ್ತಾರೆ. ತಾವು ದೊಡ್ಡ ಮನುಷ್ಯರ ಪತ್ನಿಯರೆಂಬ ಕಾರಣಕ್ಕಾಗಿ ಗಣ್ಯ ಸ್ತ್ರೀಯರೆಂದು ಬೀಗುವ, ತಮ್ಮ ಗಂಡಂದಿರ ಸ್ಥಾನಮಾನಗಳ ದೆಸೆಯಿಂದ ಒದಗಿಬರುವ ಸುಖ ಸಂಪತ್ತುಗಳಿಗೆ ಗಟ್ಟಿಯಾಗಿ ಅತು ಕೊಳ್ಳುವ ಸ್ತ್ರೀಯರನ್ನು ಗಾಂಧೀಯವರು ಟೀಕಿಸುತ್ತಾರೆ. ಆದರೆ ತಾವೇ ಎತ್ತಿಹಿಡಿಯುವ ಶ್ರಮ ವಿಭಜನೆಯ ಕಲ್ಪನೆಯು ಮಹಿಳೆಯರಿಗೆ ಈ ಬಗೆಯ ಪರೋಕ್ಷ ಅಸ್ತಿತ್ವವನ್ನು ಅನಿವಾರ್ಯಗೊಳಿಸಿತೆಂಬ ಅಂಶವನ್ನು ಅವರು ಗಮನಿಸುವುದಿಲ್ಲ.

ಈ ದ್ವಂದ್ವ ಇಲ್ಲಿಗೇ ಕೊನೆಗೊಳ್ಳುವುದಿಲ್ಲ. ಶಾಲೆ ಕಾಲೇಜುಗಳ ವ್ಯಾಸಂಗ ಮುಗಿದೊಡನೆಯೆ ವಿವಾಹವಾಗುವುದರಿಂದ ನಮ್ಮ ಬಹುತೇಕ "ಹುಡುಗಿಯರು ಸಾರ್ವಜನಿಕ ರಂಗದಿಂದ ಕಣ್ಮರೆಯಾಗುತ್ತಾರೆ" ಎಂದು ಗಾಂಧೀಯವರು ವಿಷಾದಿಸುತ್ತಾರೆ. ಆದ್ದರಿಂದ "ಹಿಂದೂ ಹುಡುಗಿಯರು ಪಾರ್ವತಿ ಮತ್ತು ಸೀತೆಯ ವೈಭವೀಕೃತ ಆವೃತ್ತಿಯನ್ನು ಪುನರ್ ಸೃಷ್ಟಿಸಲು ಇದು ಸಕಾಲ." ಬೇರೆ ಮಾತುಗಳಲ್ಲಿ ಹೇಳುವುದಾದರೆ ಪ್ರತಿಯೊಬ್ಬ ಹುಡುಗಿಯೂ "ಮದುವೆಯಾಗಲೆಂದೇ ಹುಟ್ಟಿದ್ದಲ್ಲ" ಎಂದು ಗಾಂಧೀಯವರು ಒತ್ತಿ ಹೇಳಿದರೂ ಸಾರ್ವಜನಿಕ ರಂಗಕ್ಕೆ ಸ್ತ್ರೀಯರನ್ನು ಆಕರ್ಷಿಸಲು ಅವರು ಮುಂದೊಡ್ಡಿರುವ ಸಂಕೇತಗಳು ತಮ್ಮ ಜೀವನದುದ್ದಕ್ಕೂ ಗಂಡಂದಿರಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಆದರ್ಶ ಪತ್ನಿಯರು ತಮ್ಮ ಗಂಡಂದಿರನ್ನು ಕೊನೆತನಕ ಅನುಸರಿಸಿ 'ಅವರ' ಕರ್ತವ್ಯಗಳ ಈಡೇರಿಕೆಗೆ ನೆರವು ನೀಡಿದರು.

ಅನುಕೂಲಕರ ವಾತಾವರಣ ನಿರ್ಮಾಣ

ಮಹಿಳೆಯರು ಪುರುಷರೊಂದಿಗೆ ಸ್ಪರ್ಧಿಸದೆ ಸಾರ್ವಜನಿಕ ಜೀವನ ಪ್ರವೇಶಿಸಲು ಗಾಂಧೀಯವರು ನೆರವಾದರು. ಆರಂಭದ

ವರ್ಗಗಳಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆಯನ್ನು ಗಾಂಧೀಯವರು ಪ್ರೋತ್ಸಾಹಿಸಿದರು. ಇದು ರಾಜಕೀಯ ಜೀವನದಲ್ಲಿ ನಗರದ ಮಧ್ಯಮ ವರ್ಗಗಳ ಮಹಿಳೆಯರ ಭಾಗಿತ್ವಕ್ಕೆ ನೀಡಬೇಕಾದ ಉತ್ತೇಜನದ ಒಂದು ಮಾದರಿಯಾಯಿತು. ಪ್ರತಿ ಚುನಾವಣೆ ಯಲ್ಲೂ ಮಹಿಳೆಯರು ಒಂದು ಒತ್ತಡದ ಕೇಂದ್ರವಾಗಿ ಸಂಘಟಿತ ಗೊಂಡು ತಮಗೆ ಕೆಲವು ಸ್ಥಾನಗಳನ್ನು ಮೀಸಲಿಡಬೇಕೆಂದು ಒತ್ತಾಯಿಸುವುದಕ್ಕೆ ಮೊದಲೇ ರಾಜಕೀಯ ಪಕ್ಷಗಳು ಅವರಿಗಾಗಿ ಕೆಲವು ಸ್ಥಾನಗಳನ್ನು ಮೀಸಲಾಗಿಡುತ್ತವೆ. ಇದು ಸ್ವಲ್ಪಮಟ್ಟಿಗೆ ಗಾಂಧೀಯವರ ಬಳುವಳಿ ಎನ್ನಬೇಕು. ಹೀಗೆ ಕೆಳಗಿನ ಹಂತಗಳಲ್ಲಿ ಸಾಕಷ್ಟು ಒತ್ತಡ ಇಲ್ಲದಿದ್ದರೂ ಮಹಿಳೆಯರು ಸಾಮಾಜಿಕ ಹಾಗೂ ರಾಜಕೀಯ ರಂಗವನ್ನು ಪ್ರವೇಶಿಸಿದರು; ಮಾತ್ರವಲ್ಲದೆ ಜಗತ್ತಿನ ಇತರ ಕಡೆಗಳಲ್ಲಿ ಸ್ತ್ರೀ ಚಳವಳವು ಎದುರಿಸಬೇಕಾಗಿ ಬಂದ ಪುರುಷರ ತೀವ್ರ ವಿರೋಧವು ಇಲ್ಲಿ ಕಂಡುಬರದಿರುವುದು ಗಮನಾರ್ಹ. ಪ್ರಾಯಃ ಭಾರತದಲ್ಲಿ ಮಹಿಳಾ ಸಮಸ್ಯೆಗಳ ಕುರಿತಾದ ತೀವ್ರ ಕಾಳಜಿ ಮಹಿಳಾ ಆಂದೋಳನದಲ್ಲಿ ಕಂಡುಬರದಿರುವುದು ಮತ್ತು ಪುರುಷ ಪ್ರಧಾನವಾದ ವ್ಯವಸ್ಥೆಯೊಳಗೇ ತನ್ನ ಬೇಡಿಕೆಗಳನ್ನು ಮಂಡಿಸಲು ಯತ್ನಿಸಿದ್ದು ಇದಕ್ಕೆ ಕಾರಣವಿರಬಹುದು. ಇಂದಿನ ಮಹಿಳಾ ಆಂದೋಳನ ಹೆಚ್ಚುಕಡಿಮೆ ಇದೇ ಸ್ವರೂಪವನ್ನು ಉಳಿಸಿಕೊಂಡಂತಿದೆ.

ಕಾಂಗ್ರೆಸ್ಸಿಗರು ವಿಶೇಷ ಉಗ್ರತೆ ಪ್ರದರ್ಶಿಸದಿದ್ದರೂ ಈ ಸಮಸ್ಯೆಗಳನ್ನು ಬದಿಗೊತ್ತುವ ಸಾಧ್ಯತೆಗಳಿದ್ದುದರಿಂದ ಗಾಂಧೀ ಯವರು ಮತ್ತೆ ಮತ್ತೆ ಅವರಲ್ಲಿ ಹೀಗೆ ಮನವಿ ಮಾಡಿಕೊಂಡರು. "ಭಾರತದ ಮಹಿಳೆಯರಿಗೆ ಸಹಾಯಹಸ್ತ ಚಾಚುವ ಸೌಭಾಗ್ಯ ಕಾಂಗ್ರೆಸ್ಸಿಗರದಾಗಿದೆ". ಏಕೆಂದರೆ "ತಾನು ಸ್ವತಂತ್ರನಾಗಲು ಸಾಧ್ಯ ವೆಂದು ಎಂದೂ ಎಣಿಸಿರದ ಹಿಂದಿನ ಕಾಲದ ಗುಲಾಮರಂತೆ ಈಗ ಮಹಿಳೆಯರಿದ್ದಾರೆ. ಆದ್ದರಿಂದ ಮಹಿಳೆಯರು ತಮ್ಮ ಘನತೆ

ಗೌರವಗಳ ಪೂರ್ಣ ಸ್ವರೂಪವನ್ನು ಅರಿತು ಪುರುಷರಿಗೆ ಸಮನಾಗಿ ಕರ್ತವ್ಯ ನಿರ್ವಹಿಸಲು ನೆರವಾಗುವುದು ಕಾಂಗ್ರೆಸ್ಸಿಗರಿಗೆ ಸೇರಿದ ವಿಚಾರ".

ಈ ಮನೋಭಾವದಿಂದಾಗಿ ಉದಾರ ಪ್ರೋತ್ಸಾಹದ ಒಂದು ವಾತಾವರಣ ನಿರ್ಮಾಣವಾಯಿತು. ಭಾರತದ ರಾಜಕೀಯ ವಾತಾವರಣದ ಮೇಲೆ ಇದು ಅಚ್ಚಳಿಯದ ಪ್ರಭಾವ ಬೀರಿತು.

ಗಾಂಧೀಯವರು ಪ್ರೋತ್ಸಾಹವನ್ನು ವಿಶೇಷವಾಗಿ ನೆಚ್ಚಿ ಕೊಳ್ಳುವ ಪ್ರವೃತ್ತಿಯ ವಿರುದ್ಧ ಸ್ತ್ರೀಯರಿಗೆ ಎಚ್ಚರಿಕೆ ಕೊಡುತ್ತಲೇ ಇದ್ದರು. ಉದಾಹರಣೆಗೆ, ದಲಿತರು ಒತ್ತಾಯಿಸತೊಡಗಿದ್ದ ಮೀಸಲಾತಿಯ ಮಾದರಿಯಲ್ಲಿ ಸ್ತ್ರೀಯರಿಗೂ ಮೀಸಲು ಸ್ಥಾನಗಳು ಬೇಕೆಂಬ ವಿಚಾರವನ್ನು ಅವರು ಬೆಂಬಲಿಸಲಿಲ್ಲ. "ಪ್ರತಿಭೆಯೇ ಒರೆ ಗಲ್ಲು. ಲಿಂಗದ ಆಧಾರದ ಮೇಲೆ ಸದಸ್ಯತ್ವದ ಬೇಡಿಕೆಯನ್ನು ಮುಂದೂಡುವುದು ಅಪಾಯಕರ. ಮಹಿಳೆಯರು ಮಾತ್ರವಲ್ಲದೆ ಇನ್ನುಳಿದ ಗುಂಪಿನವರೂ ಈ ಬಗೆಯ ಉತ್ತೇಜನವನ್ನು ನಿರಾಕರಿಸ ಬೇಕು. ಅವರು ನ್ಯಾಯವನ್ನು ಅಪೇಕ್ಷಿಸಬೇಕಲ್ಲದೆ ಕೃಪೆಯನ್ನಲ್ಲ." ಗೃಹಕೃತ್ಯಗಳೇ ಮಹಿಳೆಯ ಆದ್ಯ ಕರ್ತವ್ಯವೆಂಬುದಾಗಿ ಗಾಂಧೀ ಯವರು ಭಾವಿಸಿದರೂ ಕೂಡ ಅವರಿಗೆ ವಿಶೇಷ ಮಹತ್ವ ನೀಡ ಬೇಕೆಂಬುದನ್ನು ತೀವ್ರವಾಗಿ ಪ್ರತಿಪಾದಿಸಿದರು. "ಸ್ತ್ರೀಯರನ್ನು ಕಡೆಗಣಿಸುವುದು ನಮ್ಮಲ್ಲಿ ಒಂದು ಪದ್ಧತಿಯೇ ಆಗಿಬಿಟ್ಟಿದೆ. ಇದಕ್ಕೆ ವಿರುದ್ಧವಾಗಿ ಪುರುಷರಷ್ಟೇ ಪ್ರತಿಭೆಯುಳ್ಳ ಸ್ತ್ರೀಯರಿಗೆ ಹೆಚ್ಚಿನ ಪ್ರಾಶಸ್ತ್ಯ ಸಲ್ಲಬೇಕು. ಇದರಿಂದ ಒಂದು ವೇಳೆ ಪುರುಷರು ಸಂಪೂರ್ಣ ಪದಚ್ಯುತರಾದರೂ ಚಿಂತೆಯಿಲ್ಲ." ಮಹಿಳೆಯರು ಸ್ವಾರ್ಥದ ಲವಲೇಶವಿಲ್ಲದೆ ಅರ್ಪಣಾ ಮನೋಭಾವದಿಂದ ಸಾಮಾಜಿಕ ಕಾರ್ಯ ಕರ್ತೆಯರಾಗಿ ಸಾರ್ವಜನಿಕ ಜೀವನವನ್ನು ಪ್ರವೇಶಿಸಬೇಕೆಂಬುದು ಗಾಂಧೀಯವರ ಕನಸಾಗಿತ್ತು. ದಿನ ಹೋದಂತೆ ಅಧಿಕಾರ ಲಾಲಸೆ

ಹಾಗೂ ಸ್ವಾರ್ಥಕ್ಕೆ ಬಲಿಬೀಳುತ್ತಿರುವ ಹಲವಾರು ಕಾಂಗ್ರೆಸ್ಸಿಗರನ್ನು ಕಂಡಾಗ ಸ್ವರಾಜ್ಯದ ಅಚ್ಚುಳಿಯದ ಸಂಕೇತವಾದ ಸಾಮಾಜಿಕ ನವ ನಿರ್ಮಾಣದ ಕಾರ್ಯವನ್ನು ನಿಸ್ವಾರ್ಥ ದೃಷ್ಟಿಯಿಂದ ಮಾಡುವ ಶಕ್ತಿ ಮಹಿಳೆಯರಲ್ಲಿದೆ ಎಂದು ಅವರು ಕಂಡುಕೊಂಡರು. "ಸಮಾಜದಲ್ಲಿ ತಮ್ಮ ಸ್ಥಾನವನ್ನು ಆಕ್ರಮಿಸಲು ಮಹಿಳೆಯರನ್ನು ಸಜ್ಜುಗೊಳಿಸು ವುದೇ ತಮ್ಮ ಮುಂದಿರುವ ಕರ್ತವ್ಯ"ವೆಂದು ಅವರು ಭಾವಿಸಿದರು.

ಚುನಾವಣೆಗಳಲ್ಲಿ ಕಾಂಗ್ರೆಸ್ ಸಾಕಷ್ಟು ಮಹಿಳೆಯರನ್ನು ಹುರಿ ಯಾಳುಗಳನ್ನಾಗಿ ನಿಲ್ಲಿಸಲಿಲ್ಲ; ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರನ್ನು ಆರಿಸಿಕೊಳ್ಳಲಿಲ್ಲ ಎಂದು ಆರೋಪಿಸಿ ೧೯೪೬ ರಲ್ಲಿ ಓರ್ವ ಮಹಿಳೆ ಗಾಂಧೀಯವರಿಗೆ ಪತ್ರ ಬರೆದಳು. ಅರ್ಹತೆಗಿಂತಲೂ ಜಾತಿ, ಕೋಮು ಹಾಗೂ ಪ್ರಾಂತ್ಯ ಮುಂತಾದ ಪರಿಗಣನೆಗಳೇ ಮುಖ್ಯವಾಗಿರುವ ಸಂದರ್ಭದಲ್ಲಿ ಮಹಿಳೆ ಯರ ಹಿತಾಸಕ್ತಿಗಳ ರಕ್ಷಣೆಯಾಗುವುದು ಹೇಗೆ ಎಂದು ಆಕೆ ಪ್ರಶ್ನಿಸಿ ದ್ದಳು. ಅದಕ್ಕೆ ಗಾಂಧೀಯವರ ಉತ್ತರ "ಎಲ್ಲಿಯವರೆಗೆ ಜಾತಿ ಹಾಗೂ ಕೋಮು ಪರಿಗಣನೆಗಳು ನಮ್ಮ ಭಾವನೆ ಹಾಗೂ ಆಯ್ಕೆ ಗಳನ್ನು ಆಳುತ್ತವೋ ಅಲ್ಲಿಯವರೆಗೆ ಮಹಿಳೆಯರು ದೂರವುಳಿದು ತಮ್ಮ ಘನತೆ ಗೌರವಗಳನ್ನು ಬೆಳೆಸಿಕೊಳ್ಳುವುದು ಸೂಕ್ತ. ಇದನ್ನು ಎಷ್ಟು ಸಮರ್ಪಕವಾಗಿ ಮಾಡಲು ಸಾಧ್ಯ ಎಂಬುದೇ ನಮ್ಮ ಮುಂದಿ ರುವ ಪ್ರಶ್ನೆ. ಈ ಹೊತ್ತು ಕೆಲವೇ ಕೆಲವು ಮಹಿಳೆಯರು ರಾಜ ಕೀಯದಲ್ಲಿದ್ದಾರೆ. ಇವರಲ್ಲಿ ಹೆಚ್ಚಿನವರು ಸ್ವತಂತ್ರವಾಗಿ ಆಲೋಚಿಸುವ ಪ್ರವೃತ್ತಿಯವರಲ್ಲ. ಇವರು ತಮ್ಮ ಹೆತ್ತವರ ಅಥವಾ ಗಂಡಂದಿರ ಆಜ್ಞೆಗಳನ್ನು ಪರಿಪಾಲಿಸುವುದರಲ್ಲೇ ಸಂತೃಪ್ತಿ ಕಾಣುತ್ತಾರೆ. ತಮ್ಮ ಪರಾವಲಂಬಿತ್ವವನ್ನು ಮನಗಂಡಿರುವ ಇವರು ಮಹಿಳಾ ಹಕ್ಕುಗಳಿಗಾಗಿ ಒತ್ತಾಯಿಸುತ್ತಾರೆ. ಮಹಿಳಾ ಕಾರ್ಯಕರ್ತರು ಮಹಿಳೆಯರನ್ನು ಮತದಾರರ ಪಟ್ಟಿಯಲ್ಲಿ ನೋಂದಣೆ ಮಾಡಿಸ

ಬೇಕು. ಅವರಿಗೆ ಪ್ರಾಯೋಗಿಕವಾದ ಶಿಕ್ಷಣ ನೀಡಬೇಕು. ಸ್ವತಂತ್ರವಾಗಿ ಆಲೋಚಿಸುವುದನ್ನು ಕಲಿಸಬೇಕು. ಜಾತಿಯ ಬಂಧನದಿಂದ ಬಿಡುಗಡೆಗೊಳಿಸಬೇಕು. ಆಗ ಅವರಲ್ಲಿ ಉಂಟಾಗುವ ಬದಲಾವಣೆಯಿಂದಾಗಿ ಪುರುಷರು ಮಹಿಳೆಯರ ತ್ಯಾಗ ಬಲಿದಾನಗಳ ಶಕ್ತಿಯನ್ನು ಮನಗಾಣುತ್ತಾರೆ, ಗೌರವದ ಸ್ಥಾನ ನೀಡುತ್ತಾರೆ. ಮಹಿಳಾ ಕಾರ್ಯಕರ್ತರು ಈ ಕೆಲಸ ಮಾಡಿದ್ದೇ ಆದರೆ ಸದ್ಯದ ಕಲುಷಿತ ವಾತಾವರಣವನ್ನು ಸ್ವಚ್ಛಗೊಳಿಸಿದಂತಾಗುತ್ತದೆ".

ಹಳ್ಳಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂದು ಮಹಿಳೆಯರಿಗೆ ಸೂಚಿಸಲಾಗಿತ್ತು. ದುಃಖಿತರಾದ ನಿಮ್ಮ ಸೋದರಿಯರ ಸೇವೆ ಗೈಯುವ ಮೂಲಕವೇ "ಭಾರತೀಯ ಪರಂಪರೆಗೆ ತಕ್ಕಂತೆ ನಿಮ್ಮನ್ನು ನೀವು ಸರಿಯಾಗಿ ಕಂಡುಕೊಳ್ಳಬಲ್ಲಿರಿ. ಹಳ್ಳಿಗಳಲ್ಲಲ್ಲದೆ ಬೇರೆ ಎಲ್ಲಿ ಇದು ಸಾಧ್ಯ?" ಮಹಿಳೆಯರು ಪ್ರಾಥಮಿಕ ಆರೋಗ್ಯ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲು ಯತ್ನಿಸುತ್ತಿದ್ದರು. ಶುಚಿತ್ವವನ್ನು ಕಾಪಾಡಲು ಹೆಣಗುತ್ತಿದ್ದರು. ೧೯೪೪ ರಲ್ಲಿ ಉರ್ಲಿಯಲ್ಲಿ ನಡೆದ ಕಸ್ತೂರ್ಬಾ ಸ್ಮಾರಕ ಟ್ರಸ್ಟ್‌ನ ಸಭೆಯೊಂದರಲ್ಲಿ ಮಹಿಳಾ ಕಾರ್ಯಕರ್ತರನ್ನುದ್ದೇಶಿಸಿ ಗಾಂಧೀಯವರು ಕನು ಗಾಂಧೀಯ ಉತ್ತಮ ನಿದರ್ಶನ ನೀಡಿದರು. ಕನು ಗಾಂಧೀಯವರ ಆಶ್ರಮದಲ್ಲಿ ನೆಲ ಉಳುವುದರ ಮೂಲಕ ಬರದ ವಿರುದ್ಧ ಹೋರಾಟ ನಡೆಸುವ ಕ್ರಮ, ಶುಚಿತ್ವ ಅಡುಗೆ ಹಾಗೂ ಖರ್ಚು ವೆಚ್ಚಗಳ ನಿಭಾವಣೆ ಇವೇ ಮುಂತಾದ ವಿಷಯಗಳನ್ನು ಹೇಳಿಕೊಡಲಾಗುತ್ತಿತ್ತು. ಏಕೆಂದರೆ ಆಶ್ರಮವಾಸಿಗಳು ಬೇರೆಯವರಿಗೆ ಹೊರೆಯಾಗಕೂಡದು. ಮಹಿಳೆಯರು ಈ ಆದರ್ಶ ಇಟ್ಟುಕೊಂಡೇ ಬರಪೀಡಿತ ಪ್ರದೇಶಗಳಲ್ಲಿ ಕೆಲಸ ಮಾಡಬೇಕು. ಗಾಂಧೀಯವರ ದೃಷ್ಟಿಯಲ್ಲಿ "ಮಹಿಳೆಯು ತ್ಯಾಗ ಮತ್ತು ಯಾತನೆಯ ಪ್ರತೀಕ". ಆದ್ದರಿಂದ "ಆಕೆ ಸಾರ್ವಜನಿಕ ರಂಗವನ್ನು

ಪ್ರವೇಶಿಸಿದರೆ ಅತಿಯಾಸೆ ಹಾಗೂ ಧನಸಂಗ್ರಹದ ವ್ಯಾಮೋಹ ದೂರವಾಗಿ ಸಾಮಾಜಿಕ ಜೀವನ ಪರಿಶುದ್ಧವಾಗಬಹುದೆಂದು" ಭಾವಿಸಿದರು. "ಶಾಂತಿಯ ಮಧುವಿಗಾಗಿ ತಹತಹಿಸುತ್ತ ಪರಸ್ಪರ ಕಚ್ಚಾಡುತ್ತಿರುವ ಜಗತ್ತಿಗೆ ಶಾಂತಿಯ ಪಾಠವನ್ನು" ಮಹಿಳೆಯರು ಕಲಿಸಿ ಕೊಡಬೇಕು. ಆದರೆ ರಾಜಕೀಯ ಹಾಗೂ ಉದ್ಯೋಗ ಕ್ಷೇತ್ರ ಮುಖ್ಯವಾಗಿ ಪುರುಷ ಪ್ರಧಾನವಾಗಿದ್ದವು. "ನೀವು ಸೋದರಿಯರು ಪಾರ್ಲಿಮೆಂಟಿಗೆ ಹೋಗಿ ಮಾಡುವುದೇನು? ಕಲೆಕ್ಟರ್, ಕಮಿಶನರ್ ಅಥವಾ ವೈಸ್‌ರಾಯ್‌ಗಳಾಗಬೇಕೆಂದು ಹಂಬಲಿಸುವಿರಾ? ನೀವು ಹೀಗಾಗಲು ಬಯಸುವುದಿಲ್ಲವೆಂದು ನನಗೆ ಗೊತ್ತು. ಏಕೆಂದರೆ ವೈಸ್‌ರಾಯ್ ಆದವನು ಶಿಕ್ಷಿಸಬೇಕಾಗುತ್ತದೆ. ಮರಣದಂಡನೆಗೆ ಆಜ್ಞೆ ಮಾಡಬೇಕಾಗುತ್ತದೆ. ಇದನ್ನು ನೀವು ಹೃತ್ಪೂರ್ವಕವಾಗಿ ದ್ವೇಷಿಸುವಿರಿ". ಗಾಂಧೀಯವರ ಕಲ್ಪನೆಯ ಶ್ರಮಸಹಿಷ್ಣು; ನಿಸ್ವಾರ್ಥಿ ಮಹಿಳೆಯು ಸಂಸ್ಕೃತಿಯೊಂದರ ಕೊಡುಗೆ. ಗಾಂಧೀಯವರು ಆದರ್ಶೀಕರಿಸುವ 'ಯಾತನೆಯನ್ನು ಮೂಕವಾಗಿ ಸಹಿಸುವ ಮಹಿಳೆಯ ಶಕ್ತಿಯು' ಆಕೆಯ ಪರಾಧೀನತೆಯ ಲಕ್ಷಣ. ಆದರೆ ಪರಾಧೀನತೆಯ ಈ ಕೆಲವು ಲಕ್ಷಣಗಳನ್ನೇ ಗಾಂಧೀಯವರು ಸ್ತ್ರೀತ್ವವೆಂದು ವೈಭವೀಕರಿಸಿದರು.

ಸಾರ್ವಜನಿಕ ಜೀವನದಲ್ಲಿ ಮಹಿಳೆಯರು ಹೇಗಿರಬೇಕೆಂದು ಗಾಂಧೀಯವರು ಕನಸು ಕಂಡಿದ್ದರೋ, ಆ ಕನಸುಗಳನ್ನು ನನಸು ಮಾಡುವ ಯತ್ನವನ್ನು ಕಸ್ತೂರಬಾ ಸ್ಮಾರಕ ಟ್ರಸ್ಟ್ ನಡೆಸಿತು. ೧೯೩೭ ರಲ್ಲಿ ನಡೆದ ಶೈಕ್ಷಣಿಕ ಸಮ್ಮೇಳನದಲ್ಲಿ ಗಾಂಧೀಯವರು ಮೂಲ ಶಿಕ್ಷಣದ ಬಗ್ಗೆ ಮಾಡಿದ ವ್ಯಾಖ್ಯಾನ ಈ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲುತ್ತದೆ. "ಸಾಕಷ್ಟು ವಿರಾಮ ಇರುವ ದೇಶಪ್ರೇಮಿ ಮಹಿಳೆಯರಿಗೆ ಉನ್ನತವಾದ ಉದ್ದೇಶಗಳಿಗಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಇಲ್ಲೊಂದು ಅವಕಾಶವಿದೆ. ಈ ಕೆಲಸ

ಮಾಡಲು ಅವರು ಪೂರ್ವಭಾವಿ ತರಬೇತಿ ಪಡೆಯಬೇಕಾಗುತ್ತದೆ. ಉದರಂಭರಣದ ಉದ್ದೇಶವುಳ್ಳ ಮಹಿಳೆಯರು ಆಂದೋಳನದಿಂದ ತಮ್ಮ ಹೊಟ್ಟೆ ತುಂಬಬಹುದೆಂದು ಭಾವಿಸಿ ಆಂದೋಳನಕ್ಕೆ ಸೇರಿ ಕೊಂಡರೆ ಅವರಿಂದ ಏನೂ ಪ್ರಯೋಜನವಿಲ್ಲ. ಈ ಯೋಜನೆಯಲ್ಲಿ ಅವರು ಸೇವಾ ಮನೋಭಾವದಿಂದ ಸೇರಿಕೊಂಡು ಅದನ್ನು ತಮ್ಮ ಜೀವನಧ್ಯೇಯವನ್ನಾಗಿ ಮಾಡಿಕೊಳ್ಳಬೇಕು. ಸ್ವಾರ್ಥೈಕ್ಯ ದೃಷ್ಟಿ ಯಿಂದ ಯೋಚಿಸಿದರೆ ಅವರು ಖಂಡಿತ ಸೋಲುತ್ತಾರೆ; ಹತಾಶ ರಾಗುತ್ತಾರೆ ಕೂಡ. ಭಾರತದ ಸುಸಂಸ್ಕೃತ ಮಹಿಳೆಯರು ಸಮಾನ ಉದ್ದೇಶ ಸಾಧನೆಗಾಗಿ ಹಳ್ಳಿಗರ ಅದರಲ್ಲೂ ಮುಖ್ಯವಾಗಿ ಅವರ ಮಕ್ಕಳ ಜೊತೆ ಸೇರಿ ದುಡಿದರೆ ನಿಜಕ್ಕೂ ಭಾರತದ ಗ್ರಾಮೀಣ ಜೀವನದಲ್ಲಿ ಅದ್ಭುತವಾದ ಮೌನ ಕ್ರಾಂತಿ ನಡೆದೀತು". ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಾರ್ವಜನಿಕ ಜೀವನದಲ್ಲಿ ಸುಶಿಕ್ಷಿತ ಮಧ್ಯಮ ವರ್ಗದ ಮಹಿಳೆಯರು ನಿರ್ವಹಿಸುವ ಪಾತ್ರವು ಅವರ ಗೃಹಜೀವನದಲ್ಲಿ ಕಂಡುಬರುವ ತ್ಯಾಗಮಯ ಗುಣಗಳ ವಿಸ್ತರಣೆ ಯಾಗಿದೆ. ಮಹಿಳೆಯರು 'ಸೋದರಿಯರು', 'ಮಾತೆಯರು' ಎಂಬ ಹುಸಿ ಆರಾಧನೆಯ ಮುಸುಕಿನಲ್ಲಿ ಸಾರ್ವಜನಿಕ ರಂಗವನ್ನು ಪ್ರವೇಶಿಸ ಬೇಕಾಗಿತ್ತು. ಮಹಿಳೆಯರ ಸಾರ್ವಜನಿಕ ಹಾಗೂ ಸಾಮಾಜಿಕ ಜೀವನವನ್ನು ನಿರ್ಬಂಧಿಸುವ ಪುರುಷರಿಂದ ಕುಟುಂಬ ಜೀವನದಲ್ಲಿ ನಡೆಯುವ ಶೋಷಣೆಗೆ ಈ ಹುಸಿ ಆರಾಧನೆ ಮುಸುಕು ಎಳೆದಿದ್ದೆ, ಗಾಂಧೀಯವರು ಮಹಿಳೆಯರನ್ನು 'ಕರುಣೆಯುಳ್ಳ ಸೋದರಿ'ಯ ರೆಂದೂ, 'ಅಖಿಲ ಮಾನವ್ಯದ ಮಾತೃ ಸ್ವರೂಪವೆಂದೂ ಅತಿಯಾಗಿ ಆದರ್ಶೀಕರಿಸುತ್ತಾರೆ. ಇದು ಉದಾರಿಗಳಾದ ಕುಟುಂಬದ ಹಿರಿಯ ರೊಬ್ಬರ ಪೂರ್ವಾಗ್ರಹವನ್ನು ಪ್ರತಿಬಿಂಬಿಸುತ್ತದೆ.

ಮಹಿಳೆಯರು ಸಾಮಾಜಿಕ ಕಾರ್ಯಕರ್ತರಾಗಿ ಸೇವೆ ಸಲ್ಲಿಸಬೇಕು; ನೀತಿ ನಿಯಮಗಳ ರಕ್ಷಕರಾಗಿರಬೇಕು. ಮಹಿಳೆಯರು ಪುರುಷರೊಂದಿಗೆ

ಸ್ಪರ್ಧಿಸಿದರೆ "ಬರ್ಬರತೆ ಮತ್ತೆ ತಲೆದೋರಬಹುದಾದ್ದರಿಂದ" ಅಧಿಕಾರ ಹಾಗೂ ರಾಜಕಾರಣದಲ್ಲಿ ಸ್ಪರ್ಧಿಸದೆ ಸಮಷ್ಟಿಯ ಹಿತಸಾಧನೆಗಾಗಿ ಯತ್ನಿಸಬೇಕು ಎಂದು ಗಾಂಧೀಯವರು ಆಶಿಸಿದರು. ಒಂದು ರೀತಿಯಲ್ಲಿ ಇದು ಅವರ ಎಂದಿನ ವರ್ತನೆಯನ್ನು ಧಿಕ್ಕರಿಸುವ ವಿಚಾರ. ಏಕೆಂದರೆ ಅವರು ಸರೋಜಿನಿ ನಾಯ್ಡು, ಸುಚೇತಾ ಕೃಪಲಾನಿ ಮುಂತಾದ ಪ್ರಮುಖ ಮಹಿಳಾ ರಾಜಕಾರಣಿಗಳು ಹಾಗೂ ವೃತ್ತಿಪರ ಮಹಿಳೆಯರ ಬೆನ್ನು ತಟ್ಟಿ ಉತ್ತೇಜಿಸಿದರು. ಸಿದ್ಧಾಂತಗಳು ಹಾಗೂ ಘೋಷಿತ ನಿಲುವುಗಳು ಸೂಚಿಸುವ ದಿಕ್ಕು ಒಂದು; ಆಚರಣೆಗಳು ಸೂಚಿಸುವ ದಿಕ್ಕು ಇನ್ನೊಂದು. ಈ ಬಗೆಯ ನಾಯಕರ ಸಾಲಿನಲ್ಲಿ ಗಾಂಧೀಯವರಿದ್ದಾರೆ. ತಮ್ಮ ಆರಂಭದ ವರ್ಷಗಳಲ್ಲಿ ತಾವು ಬ್ರಿಟಿಷ್ ಸಾಮ್ರಾಜ್ಯದ ನಿಷ್ಠಾವಂತ ಪ್ರಜೆ ಎಂದು ಪದೇಪದೇ ಹೇಳುತ್ತಿದ್ದರು. ಹೀಗೆ ಹೇಳುವಾಗಲೂ ಅಷ್ಟೇ ವಸ್ತುನಿಷ್ಠವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬುಡವನ್ನೂ ಕತ್ತರಿಸಿದರು. ಇದೇ ರೀತಿ ಮನೆಯೇ ಮಹಿಳೆಯ ನಿಜವಾದ ಕಾರ್ಯಕ್ಷೇತ್ರ ಎಂದು ಅವರು ಹೇಳುತ್ತಲೇ ಇದ್ದರೂ ಗೃಹಜೀವನದ ಸಂಕೋಲೆಗಳನ್ನು ಕಿತ್ತೊಗೆಯಲು ಅಗತ್ಯವಾದ ವಾತಾವರಣ ಸೃಷ್ಟಿಸಲು ಕ್ರಿಯಾಶೀಲವಾಗಿ ಹೆಣಗಿದರು.

೩

ಮಹಿಳೆಯರೊಂದಿಗೆ ಗಾಂಧೀಯವರ ವೈಯಕ್ತಿಕ ಸಂಬಂಧ

ಗಾಂಧೀಯವರು ಸರಳ ಸಾಮಾನ್ಯ ಹೆಂಗಸರನ್ನು ಸಮಾನ ಧ್ಯೇಯಕ್ಕಾಗಿ ಹೋರಾಡುವ ಸಹೋದ್ಯೋಗಿಗಳಗನ್ನಾಗಿ ಹೇಗೆ ರೂಪಿಸುತ್ತಾರೆಂಬುದಕ್ಕೆ ಗಂಗಾಬಹೆನ್ ಜೊತೆಗೆ ಅವರು ಹೊಂದಿದ್ದ ಸಂಬಂಧವೇ ಸಾಕ್ಷಿ. "ಸೀದಾಸಾದಾ ಅಜ್ಞಾನಿ ಗುಜರಾತಿ ಹೆಂಗಸರನ್ನು" ಅವರು ಹೊಸ ಕಾಲದ ಮುಂದಾಳಾಗಿ ರೂಪಿಸಿದರು. ಆಕೆಯ ಮೂಲಕ ಪುಟ್ಟ ಕರಕುಶಲ ಉದ್ದಿಮೆ ಹುಟ್ಟಿಕೊಂಡಿತು. "ಗಾಂಧೀಯವರು ಆಕೆಯನ್ನು ಯಾವುದೋ ಒಂದು ಸಭೆಯಲ್ಲಿ ಗುರುತಿಸಿದರು. ಆಕೆಯ ಚುರುಕುತನ, ದಿಟ್ಟತನ ಹಾಗೂ ಸ್ವಾವಲಂಬೀ ಮನೋಭಾವದಿಂದ ವಿಸ್ಮಿತರಾದರು. ಈ ಮಹಿಳೆ ಗಾಂಧೀಯವರಿಗಾಗಿ 'ನೂಲುವ ಚರಖ'ವನ್ನು 'ಕಂಡುಹಿಡಿದದ್ದು' ಮಾತ್ರವಲ್ಲದೆ ಭಾರತದ ಖಾದಿ ಆಂದೋಳನದ ಸಂಘಟಕರಲ್ಲಿ ಮೊದಲಿಗಳಾದಳು. ಕಮಲಾದೇವಿ, ಮೀರಾಬೆನ್, ವಿಜಯಲಕ್ಷ್ಮಿ ಪಂಡಿತ್, ಅನಸೂಯ ಬೆನ್ ಮುಂತಾದ ಮಹಿಳೆಯರಂತೆ ಈಕೆಗೂ ಗಾಂಧೀಯವರು ಸ್ವಯಂ ಆದರ್ಶಪಾಲಕರಂತೆ ಮತ್ತು ತಮ್ಮ ಆದರ್ಶಕ್ಕಾಗಿ ಇತರರು ದುಡಿಯಬೇಕೆಂದು ನಿರೀಕ್ಷಿಸುವವರಂತೆ ಕಂಡರು. "ಪ್ರತಿಯೊಬ್ಬರಿಂದಲೂ ಅವರು ಅತ್ಯಂತ ಗಾಢವಾದ ಅರ್ಪಣಾ ಮನೋಭಾವವನ್ನು ಪಡೆದುಕೊಂಡರು. ಈ ಅರ್ಪಣಾ ಮನೋಭಾವ ಕೇವಲ ಅವರ ಧ್ಯೇಯಗಳಿಗೆ ಮಾತ್ರವಲ್ಲ, ಅವರ ವ್ಯಕ್ತಿತ್ವಕ್ಕೂ ಸಲ್ಲುತ್ತದೆ".೧೧

ಗಾಂಧೀಯವರ ಪ್ರಭಾವದಿಂದಾಗಿ ಸರೋಜಿನಿ ನಾಯ್ಡು ಹಾಗೂ ಅವರಂಥ ಇನ್ನಿತರ ಮಹಿಳೆಯರು ಆತ್ಮ ಪ್ರತಿಷ್ಠೆಯನ್ನು ಬದಿಗೊತ್ತಿ ಈ ದೇಶದ ಸ್ತ್ರೀ ಸಮುದಾಯದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಸಾಧ್ಯವಾಯಿತು. ಆಲಿ ಸಹೋದರರಂಥ ಪ್ರಮುಖ ಮುಸ್ಲಿಂ ಧುರೀಣರು ಕೂಡ ಮುಸ್ಲಿಂ ಮಹಿಳೆಯರನ್ನು ಉದ್ದೇಶಿಸಿ ಮಾತನಾಡುವಾಗ ಕಣ್ಣುಮುಚ್ಚಿಕೊಂಡು ಅವರತ್ತ ನೇರ ವಾಗಿ ನೋಡದೆ ಮಾತನಾಡುತ್ತಿದ್ದರು. ಆದರೆ ಗಾಂಧೀಯವರಿಗೆ ಈ ಸಮಸ್ಯೆ ಇರಲಿಲ್ಲ. ಅವರು ಈ ಮಹಿಳೆಯರೊಂದಿಗೆ ನೇರ ಸಂಪರ್ಕ ಇಟ್ಟುಕೊಂಡಿದ್ದರು. "ಮುಸ್ಲಿಂ ಸೋದರಿಯರು" ಬುರ್ಖಾ ಸರಿಸಿ ಮಾತನಾಡಬೇಕೆಂದು ಗಾಂಧೀಯವರು ಒತ್ತಾಯಿಸುತ್ತಿದ್ದರು. ಈ ಪ್ರಯತ್ನದಲ್ಲಿ ಅವರಿಗೆ ಅಪಾರವಾದ ಯಶಸ್ಸೂ ಲಭಿಸಿತು. ಈ ಮಹಿಳೆಯರ ಪ್ರಕಾರ "ಗಾಂಧೀಯವರು ಎಲ್ಲಿಗೂ, ಯಾವ ಕಡೆಗೂ ಹೋಗಬಹುದು. ಏಕೆಂದರೆ ಅವರು ಪರಿಶುದ್ಧರು".

ಆಂದೋಳನದಲ್ಲಿ ತೊಡಗಿಸಿಕೊಂಡ ಸ್ತ್ರೀ ಪುರುಷ ಕಾರ್ಯಕರ್ತರ ನಡುವೆ ಸಮಾನತೆಯನ್ನುಂಟು ಮಾಡಲು ಗಾಂಧೀಯವರು ಪ್ರಯತ್ನಿಸಿದರು. ಅವರೊಂದಿಗೆ ನಿಕಟ ಸಂಪರ್ಕಹೊಂದಿದ್ದ ಮಹಿಳೆಯರು ಅವರ ಆರಾಧಕರಾಗಿ ಪರಿವರ್ತಿತರಾದರು. ಗಾಂಧೀಯವರು ಈ ಆರಾಧನಾ ಭಾವವನ್ನು ತನ್ನ ಧ್ಯೇಯಾದರ್ಶಗಳಿಗೆ ಬದ್ಧವಾದ ಗುಣ ವನ್ನಾಗಿ ಪರಿವರ್ತಿಸಲು ಹೆಣಗಿದರು. ಮೀರಾಗೆ ಬರೆದ ಹೃದಯ ಸ್ಪರ್ಶಿ ಪತ್ರವೊಂದರಲ್ಲಿ ಗಾಂಧೀಯವರು ಹೀಗೆ ಬರೆದಿದ್ದಾರೆ, "ನಿನ್ನ ಸ್ವಂತ ಕ್ಷೇತ್ರದಲ್ಲಿ ಘನವಾದ ಉದ್ದೇಶಕ್ಕಾಗಿ ನಿನ್ನನ್ನು ನೀನು ಸಂತೋಷದಿಂದ ಮುಡಿಪಾಗಿಟ್ಟುಕೊಂಡಿರುವುದರಿಂದ ನೀನು ನಿಜಕ್ಕೂ ನನ್ನ ಸೇವೆ ಮಾಡಿದಂತಾಗುತ್ತದೆ". ವೈಯಕ್ತಿಕವಾಗಿ ಆಕೆ ತನಗೆ 'ಅಂಟಿಕೊಳ್ಳಲು' ಗಾಂಧೀಯವರು ಅನುಮತಿ ನಿರಾಕರಿಸಿದರು. "ಉದ್ದಕ್ಕೂ ನೀನು ನಿನ್ನ ಪ್ರೇಮವನ್ನು ನನಗಾಗಿ ವ್ಯರ್ಥಗೊಳಿಸು

ತ್ತಿರುವೆ. ಈ ನಿನ್ನ ಪ್ರೇಮವನ್ನು ನಾನು ದುರುಪಯೋಗ ಪಡಿಸಿಕೊಳ್ಳುತ್ತಿದ್ದೇನೋ ಎಂಬ ಅಪರಾಧಿ ಭಾವ ನನ್ನನ್ನು ಕಾಡು ತ್ತಿದೆ. ಒಂದು ಸಣ್ಣ ನೆಪ ಸಿಕ್ಕರೂ ಸಾಕು ನಾನು ಸ್ಫೋಟಗೊಳ್ಳ ಬಹುದು". ಆಕೆ ತನ್ನನ್ನು ತಾನು ಧ್ಯೇಯಾದರ್ಶಗಳೊಂದಿಗೆ ಗುರುತಿಸಿಕೊಳ್ಳಬೇಕೆಂದು ಗಾಂಧೀ ಬಯಸಿದರು. ಅವರ ಕೃತ್ಯಗಳು ಮಾತ್ರ ಆಕೆಗೆ ಪ್ರಿಯವಾಗಿರಬೇಕು. ಗಾಂಧೀಯವರ ಬಗ್ಗೆ ಆಕೆಗೆ ಜ್ವಲಂತ ಅನುರಾಗವಿತ್ತು; ಆದ್ದರಿಂದಲೆ ಅವರು ಆಕೆಯನ್ನು ಕಠೋರ ಮನಸ್ಸಿನಿಂದ ದೂರವಿಟ್ಟರು. ಭಾವನಾತ್ಮಕವಾಗಿ ಆಕೆ ಗಾಂಧೀಯವರನ್ನು ಅವಲಂಬಿಸಿದಷ್ಟು ಹೊತ್ತು ಅವರಿಗೆ ಆಕೆಯನ್ನು ಆಶ್ರಮದಲ್ಲಿ ಕಂಡಾಗೆಲ್ಲ ಕಸಿವಿಸಿಯಾಗುತ್ತಿತ್ತು. ಹೀಗಾಗಿ ತನ್ನಿಂದ ದೂರ ಹಳ್ಳಿಗಳಿಗೆ ಹೋಗಿ ದುಡಿಯಬೇಕೆಂದು ಅವರು ಆಜ್ಞಾಪಿಸು ತ್ತಿದ್ದರು. ಮೀರಾಬೆನ್ ತೀರ ಅತಿಯಾದ ಒಂದು ಪ್ರಕರಣ ವಾಗಿದ್ದಿರಬಹುದು. ಆದ್ದರಿಂದಲೆ ಗಾಂಧೀಯವರಿಗೆ ಕಸಿವಿಸಿಯಾಗಿರ ಬಹುದು. ಆದರೂ ಗಾಂಧೀಯವರ ಸಂಪರ್ಕಕ್ಕೆ ಬಂದ ಬಹುತೇಕ ಮಹಿಳೆಯರು ಅವರ ಭಕ್ತರಾಗಿ-ಆರಾಧಕರಾಗಿ ಸೇವೆ ಸಲ್ಲಿಸಿದರು.

ಸರಳಾದೇವಿ ಚೌಧುರಾಣಿಯವರೊಂದಿಗೆ ಗಾಂಧೀಯವರಿಗಿದ್ದ ಸಂಬಂಧ ಕೊಂಚ ಅಸಾಮಾನ್ಯವಾದುದು. ಈಕೆಯು ಪಂಜಾಬಿನ ರಾಷ್ಟ್ರೀಯ ಮುಖಂಡರಲ್ಲಿ ಒಬ್ಬರಾದ ಪಂಡಿತ್ ರಾಯ್‌ಭೋಜ್ ದತ್ ಚೌಧುರಿ ಅವರ ಪತ್ನಿ. ೧೯೧೯ ರ ಸುಮಾರಿಗೆ ಗಾಂಧೀ ಯವರು ಮೊದಲ ಬಾರಿಗೆ ಈಕೆಯ ನಿಕಟ ಸಂಪರ್ಕಗಳಿಸಿದರು. ಈಕೆ ಅತ್ಯಂತ ಪ್ರತಿಭಾವಂತ ಮಹಿಳೆ. ಉತ್ತಮ ಗಾಯಕಿ ಹಾಗೂ ಸ್ವದೇಶಿ ಆಂದೋಳನದ ಕ್ರಿಯಾಶೀಲ ಕಾರ್ಯಕರ್ತೆ. ಗಾಂಧೀ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಇತರ ಸ್ತ್ರೀ ಪುರುಷರಂತೆ ಈಕೆ ಕೇವಲ ರಾಜಕೀಯ ಸಹ-ಕಾರ್ಯಕರ್ತೆಯಾಗಿರಲಿಲ್ಲ. ಗಾಂಧೀ ಯವರು ವೈಯಕ್ತಿಕವಾಗಿ ಈಕೆಯನ್ನು ಬಹಳ ಹಚ್ಚಿಕೊಂಡಿದ್ದರು.

ಆಶ್ರಮದಲ್ಲಿ ಈಕೆಯ ಮಗನ ವಿದ್ಯಾಭ್ಯಾಸಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದರು. ಈಕೆಗೆ ಬರೆದ ಒಂದು ಹೃದಯಸ್ಪರ್ಶಿ ಪತ್ರದಲ್ಲಿ ಈಕೆಯನ್ನು "ಆಧ್ಯಾತ್ಮಿಕ ಪತ್ನಿ" ಯಾಗಿ ಹೊಂದಲು ಆಶಿಸಿದ್ದೇನೆಂದು ತಿಳಿಸುತ್ತಾರೆ. "ಇದು ಎರಡು ಭಿನ್ನ ಲಿಂಗಗಳಿಗೆ ಸೇರಿದ ಇಬ್ಬರು ವ್ಯಕ್ತಿಗಳ ನಡುವಣ ಹೊಂದಾಣಿಕೆ. ಇಲ್ಲಿ ದೈಹಿಕ ಕಾಮನೆಗಳಿಲ್ಲ. ಇದು ಕಾಯಾ, ವಾಚಾ, ಮನಸಾ ಇಬ್ಬರು 'ಬ್ರಹ್ಮಚಾರಿ'ಗಳ ಮಧ್ಯೆ ಮಾತ್ರ ಸಾಧ್ಯ. ಇದು ಎರಡು ಜ್ವಲಂತ ಆತ್ಮಗಳ ಸಮ್ಮಿಲನ. ನೀನು ಈ ವಿವರಣೆಗೆ ಹೊಂದಿಕೊಳ್ಳುವ ನನ್ನ ಆಧ್ಯಾತ್ಮಿಕ ಪತ್ನಿಯೇ? ನಮ್ಮಲ್ಲಿ ಅಂಥ ಪರಿಶುದ್ಧತೆ, ಸಂಯೋಗ, ಸಮ್ಮಿಲನ, ಏಕರೂಪದ ಆದರ್ಶ, ನಿಸ್ವಾರ್ಥ ಮನೋಭಾವ ದೃಢವಾದ ಉದ್ದೇಶಬದ್ಧತೆ, ಸತ್ಯಪರತೆ ಇದೆಯೇ? ಇದೊಂದು ಮಹದಾಸೆ ಎಂದು ಮಾತ್ರ ನಾನು ಹೇಳಬಲ್ಲೆ".

ಈ ಬಗೆಯ ಭಾವನಾತ್ಮಕ ಸಂಬಂಧವನ್ನು ಕಂಡು ಗಾಂಧೀಯವರ ಕೆಲವು ಸಹವರ್ತಿಗಳು ಹುಬ್ಬೇರಿಸಿದರು. ಸರಳಾದೇವಿ ಇದನ್ನು ಪ್ರತಿಭಟಿಸಿದ್ದಿರಬೇಕು. ಈ ಎಲ್ಲ ವೈಯಕ್ತಿಕ ಸಂಬಂಧ ಪ್ರೀತಿಗಳ ಹೊರತಾಗಿಯೂ ಈ ಸಂಬಂಧವು ಇತರೆಲ್ಲ ಸಂಬಂಧಗಳಂತೆ ಆದರ್ಶ ಸ್ತ್ರೀ ಪುರುಷ ಸಂಬಂಧದ ಅಚ್ಚಿಗೆ ತಕ್ಕಂತಿರಬೇಕೆಂದು ಗಾಂಧೀಯವರು ಭಾವಿಸಿದರು. ಆದ್ದರಿಂದಲೇ ಅವರು ತನ್ನ ಸಹವರ್ತಿಗಳು ಎತ್ತುವ ಆಕ್ಷೇಪಗಳಿಗೆ ಕೆಲವೊಮ್ಮೆ ಅನಗತ್ಯವೆನ್ನಿಸಿದರೂ ಕಿವಿ ಕೊಡುತ್ತಿದ್ದರು. "ಅವರು ತಮ್ಮ ಆದರ್ಶಗಳ ಬಗ್ಗೆ ಹೊಟ್ಟೆ ಉರಿದುಕೊಳ್ಳುತ್ತಿದ್ದಾರೆ. ಅವೇ ನನ್ನ ಗುಣ ಸ್ವಭಾವ. ನಾನೂ ನೀನೂ ನಮ್ಮೆಲ್ಲವನ್ನು ಸಮರ್ಪಿಸಿಯಾದರೂ ಅವರು ತೋರುವ ಪ್ರೀತಿಗೆ ಪಾತ್ರರಾಗಲು ಅಥವಾ ಅದನ್ನು ಉಳಿಸಿಕೊಳ್ಳಲು ಹೆಣಗಬೇಕು. ನಾನು ಅವರಿಗೆ ಹೇಗೋ ಅವರು ನನಗೆ ಆಧಾರ".೧೨

ಹೀಗೆ ಗಾಂಧೀಯವರು ತಮ್ಮ ದೃಷ್ಟಿಯಲ್ಲಿ ಆದರ್ಶ ಸ್ತ್ರೀ ಪುರುಷ ಸಂಬಂಧಕ್ಕೆ ಮಾರಕವಾಗಬಹುದಾದುದೆಲ್ಲವನ್ನೂ ತ್ಯಜಿಸಲು ಸಿದ್ಧರಿದ್ದರೆಂಬುದನ್ನು ಗಮನಿಸಬೇಕು. ಅವರ ದೃಷ್ಟಿಯಲ್ಲಿ ಇದು, ಲೈಂಗಿಕ ಭಾವನೆಗಳಿಂದ ಕಲುಷಿತವಾಗದ ಸಹ–ಕಾರ್ಯಕರ್ತರ ನಡುವಣ ಸಂಬಂಧವಾಗಿತ್ತು. ತಾನು ಬೇರೆಯವರ ಮುಂದಿಡುವ ಆದರ್ಶಗಳನ್ನು ಸ್ವತಃ ತನ್ನ ಬದುಕಿನಲ್ಲೇ ನಡೆದು ತೋರಿಸಬೇಕೆಂದು ಅವರು ಭಾವಿಸಿದ್ದರು.

ಗಾಂಧೀಯವರು ಆರಂಭದಲ್ಲಿ ಕಸ್ತೂರಬಾರ ಜೊತೆಗಿನ ಸಂಬಂಧದಲ್ಲಿ ಯಜಮಾನಿಕೆಯ ಹಿಡಿತದಲ್ಲಿಟ್ಟುಕೊಳ್ಳುವ ಗುಣ ತೋರಿಸುತ್ತಿದ್ದರು; ಆಕೆಯನ್ನು ಅತ್ಯಂತ ಕಠೋರವಾಗಿ ನಿರ್ಬಂಧಿಸುತ್ತಿದ್ದರು. ಆದರೆ ಮುಂದೆ ಅವರು ಆಕೆಯ ಸ್ವಾಯತ್ತ ಸ್ಥಿತಿಯ ಬಗ್ಗೆ ಆರೋಗ್ಯಕರ ಗೌರವವನ್ನು ತಳೆಯುತ್ತಾರೆ. ಈ ಮನಃಪರಿವರ್ತನೆಯ ನಿಡಿದಾದ ಹಾದಿಯಲ್ಲಿ ಗಾಂಧೀಯವರು ಸಾಗಿದ ಬಗೆಯನ್ನು ಅವರ ಆತ್ಮಚರಿತ್ರೆ ಹಾಗೂ ಬದುಕಿನ ಇತರ ವಿವರಗಳು ಸ್ಪಷ್ಟಪಡಿಸುತ್ತವೆ. "ಸತ್ಯಾಗ್ರಹದ ಮೊದಲ ಪಾಠವನ್ನು ಮೌನವಾಗಿ ಆದರೆ ದೃಢವಾಗಿ ವಿರೋಧಿಸುವ ತನ್ನ ಪತ್ನಿಯಿಂದ ಕಲಿತೆನೆಂದು" ಅವರು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ.

ಗಾಂಧೀಯವರು ಕ್ರಮೇಣ ಪತಿಯ ಸಾಂಪ್ರದಾಯಿಕ ದಮನಿಸುವ ಮನೋಭಾವದಿಂದ ಬಿಡಿಸಿಕೊಂಡು ತನಗೆ ತನ್ನ ಪತ್ನಿಯ ಮೇಲೆ ಯಾವುದೇ "ವಿಧಾಯಕ ಹಕ್ಕು"ಗಳಿಲ್ಲ ಎಂಬ ವಿಚಾರವನ್ನು ಮನಗಾಣುತ್ತಾರೆ. ಇದು ಕಾಲಕ್ರಮೇಣ ಆದ ಬದಲಾವಣೆ. ಉದಾಹರಣೆಗೆ ತನ್ನ ಪತ್ನಿ ಖಾದಿ ಧರಿಸಲು ನಿರಾಕರಿಸಿದರೆ ಅಥವಾ ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ನಿರಾಕರಿಸಿದರೆ ಕಾಂಗ್ರೆಸ್ಸಿಗನು ಏನು ಮಾಡಬೇಕೆಂಬ ಪ್ರಶ್ನೆಗಳಿಗೆ ಉತ್ತರವಾಗಿ "ಒಂದು ಒಳ್ಳೆಯ ಉದ್ದೇಶಕ್ಕಾಗಿ ಕೂಡ ಓರ್ವ ಪತಿಗೆ ತನ್ನ ಹೆಂಡತಿಯನ್ನು ಒತ್ತಾಯಿ

ಸುವ ಹಕ್ಕಿಲ್ಲ" ಎಂದು ಗಾಂಧೀ ನುಡಿದರು. "ನೆನಪಿಡಿ, ನಿಮ್ಮ ಮಡದಿ ನಿಮ್ಮ ಆಸ್ತಿಯಲ್ಲ". "ಆದ್ದರಿಂದ ಒಂದು ಒಳ್ಳೆಯ ಕೆಲಸ" ಮಾಡಲು ಕೂಡ ಹೆಂಡತಿಯನ್ನು ಒತ್ತಾಯಿಸಕೂಡದು. ಒಂದು ವೇಳೆ ಹೆಂಡತಿಯು ಹರಿಜನರಿಗೆ ಮನೆಯೊಳಗೆ ಪ್ರವೇಶ ಕೊಡಲು ನಿರಾಕರಿಸಿದರೆ "ಆಕೆಗೆಂದೇ ಪ್ರತ್ಯೇಕ ಅಡುಗೆ ಮನೆ ಹಾಗೂ ಆಕೆ ಬಯಸಿದರೆ ಪ್ರತ್ಯೇಕ ಕೊಠಡಿಗಳನ್ನು" ಕೊಡಬಹುದು. ಆದರೆ ಕಸ್ತೂರಬಾ ಪಾಲಿಗೆ ಈ ಬಗೆಯ ಸ್ವಾತಂತ್ರ್ಯ ಎಂದಿಗೂ ಇರಲಿಲ್ಲ. ಗಂಡಸರು ತಮ್ಮ ಹೆಂಡಂದಿರಿಗೆ ಸ್ವಾತಂತ್ರ್ಯ ನೀಡಬೇಕೆಂದು ತಾನು ಹೇಳುತ್ತಾ ಬಂದಿರುವುದನ್ನು ತನ್ನ ಹೆಂಡತಿಯ ವಿಚಾರದಲ್ಲಿ ಪಾಲಿಸಲು ಅಸಾಧ್ಯವಾದರೂ ಜನನಾಯಕನಾಗಿ ಅಸ್ಪೃಶ್ಯತೆಯನ್ನು ತನ್ನ ಮನೆಯಲ್ಲಿ ಆಚರಿಸಕೂಡದೆಂದು ಗಾಂಧೀಯವರು ಭಾವಿಸಿದ್ದರು. ಕೆಲವೊಂದು ಮುಖ್ಯ ವಿಚಾರಗಳ ಕುರಿತು ಕಸ್ತೂರಬಾರವರ ಮನಸ್ಸಿನಲ್ಲಿ ತೀವ್ರವಾದ ಪ್ರತಿರೋಧವಿತ್ತು. ಆದರೂ ಆಕೆಯನ್ನು ಖಾಸಗಿ ಗೃಹ ಪ್ರಪಂಚದಲ್ಲಿ ಬಿಡದೆ ತನ್ನ ಸಹಾಯಕ ದುಡಿಮೆಗಾರರನ್ನಾಗಿ ನಿಧಾನವಾಗಿ ಪರಿವರ್ತಿಸಿದರು. ಆಕೆ ಗಾಂಧೀಯವರ ಹಲವಾರು ಪ್ರಯೋಗಗಳಿಗೆ ತೀವ್ರ ಪ್ರತಿರೋಧ ವ್ಯಕ್ತಪಡಿಸಿದರು. ಆದರೆ ಈ ಎಲ್ಲ ಪ್ರಯೋಗಗಳಲ್ಲಿ ಸೀತೆಯು ಪತಿಯ ಧರ್ಮ ಪರಿಪಾಲನೆಗಾಗಿ ಸಹಕರಿಸಿದಂತೆ ಆಕೆ ಗಾಂಧೀಯವರೊಂದಿಗೆ ಸಹಕರಿಸಿದಳು.

ಮಾತೃಹೃದಯಿ ಬಾಪು

ಗಾಂಧೀಯವರು ತಮ್ಮ ರಾಜಕಾರಣದಲ್ಲಿ 'ಪೌರುಷ' ಸೂಚಕ ಆಯುಧಗಳನ್ನು ಹಿಡಿದು ಹೋರಾಡಲು ಹೇಗೆ ನಿರಾಕರಿಸಿದರೋ ಹಾಗೆಯೇ ಅವರು ತಮ್ಮ ವೈಯಕ್ತಿಕ ಸಂಬಂಧಗಳಲ್ಲಿ 'ಹೆಂಗಸರ' ಗುಣಗಳೆಂದು ಗಂಡಸರು ತಿರಸ್ಕರಿಸುವ ಗುಣಗಳಿಗೆ ಮಹತ್ವ ನೀಡಿದರು. ಮಾತೃವಾತ್ಸಲ್ಯ ಹಾಗೂ ಕಾಳಜಿ ತೋರಿದರೆಂದು ಈ 'ರಾಷ್ಟ್ರಪಿತ'ನನ್ನು ಅನೇಕರು ಸ್ಮರಿಸಿ ಕೊಳ್ಳುತ್ತಾರೆ. ಕಾಕಾ

ಕಾಲೇಲ್ಕರ್ ಅವರು ನಿರೂಪಿಸಿರುವ ಒಂದು ಘಟನೆಯು ಗಾಂಧೀಯವರ ವ್ಯಕ್ತಿತ್ವದ ಈ ಮುಖದ ಮೇಲೆ ಬೆಳಕು ಚೆಲ್ಲುತ್ತದೆ. ಫೀನಿಕ್ಸ್ ಫಾರ್ಮಿನಲ್ಲಿ ಈ ಹಿಂದೆ ವಾಸಮಾಡಿಕೊಂಡಿದ್ದ ಕೆಲವರು ಗಾಂಧೀಯವರೊಂದಿಗೆ ಭಾರತಕ್ಕೆ ಬಂದು 'ಶಾಂತಿನಿಕೇತನ'ದಲ್ಲಿ ನೆಲೆನಿಂತರು. ಇವರಲ್ಲಿ ಕಾಕಾ ಕಾಲೇಲ್ಕರ್ ಒಬ್ಬರು. ಪ್ರತಿ ಮುಂಜಾನೆ ಈ ಗುಂಪು ಒಂದು ಗಂಟೆ ಕಾಲ ಮೈಮುರಿದು ದುಡಿಯುತ್ತಿತ್ತು. ಒಂದು ದಿನ "ಬಾಪು ಅಲ್ಲಿಗೆ ಬಂದಾಗ, ನಾವು ಅವರೊಂದಿಗೆ ರಾತ್ರಿ ಬಹಳ ಹೊತ್ತು ಮಾತನಾಡುತ್ತಾ ಕುಳಿತಿದ್ದೆವು, ಬೆಳಗ್ಗೆ ಪ್ರಾರ್ಥನೆಯ ಬಳಿಕ ನಾವು ಯಥಾಪ್ರಕಾರ ಕೆಲಸ ಮಾಡಿ ಬಂದೆವು. ಬಂದೊಡನೆ ನಾವು ಕಂಡದ್ದೇನು? ನಮ್ಮ ಬೆಳಗಿನ ತಿಂಡಿ, ಹಣ್ಣುಹಂಪಲು ಎಲ್ಲವನ್ನೂ ಸಿದ್ಧಪಡಿಸಿ ತಟ್ಟೆಗಳಲ್ಲಿ ಹಾಕಿಡಲಾಗಿತ್ತು. ನಾವೆಲ್ಲ ಕೆಲಸಕ್ಕೆ ಹೋಗಿದ್ದೆವು. ಈ ಮಾತೃಸದೃಶ ಪ್ರೇಮವನ್ನು ತೋರಿದವರು ಯಾರು?" ಈ ಕೆಲಸ ಮಾಡಿದವರು ಗಾಂಧೀಯವರೆಂದು ತಿಳಿದಾಗ ತನಗೆ ಬಹಳ ಸಂತೋಷವಾಯಿತೆಂದು ಕಾಲೇಲ್ಕರ್ ಹೇಳುತ್ತಾರೆ. ಆದರೆ ಗಾಂಧೀಯವರು ನಕ್ಕು "ಯಾರು ಇನ್ನೊಬ್ಬರ ಸೇವೆ ಮಾಡುತ್ತಾರೋ ಅವರಿಗೂ ಸೇವೆ ಸಲ್ಲಬೇಕು" ಎಂದು ನುಡಿದರಂತೆ.

ಗಾಂಧೀಯವರು ತಮ್ಮ ನಿಕಟ ಸಂಪರ್ಕಕ್ಕೆ ಬಂದ ಎಲ್ಲರ ರಾಜಕೀಯ ಶ್ರೇಯೋಭಿವೃದ್ಧಿಯಲ್ಲಿ ವೈಯಕ್ತಿಕ ಆಸಕ್ತಿ ತಳೆದಿದ್ದರು; ಅಲ್ಲದೆ ತಾಯಿಯಂತೆ ಅವರ ಖಾಸಗಿ ಜೀವನದ ಆಪ್ತ ವಿವರಗಳಲ್ಲೂ ಅಷ್ಟೇ ಆಸಕ್ತಿ ತೋರಿದರು. ನೂರಾರು ಜನರೊಂದಿಗೆ ಅವರು ನಡೆಸಿದ ಪತ್ರ ವ್ಯವಹಾರದಲ್ಲಿ ಈ ಬಗೆಯ ಕಾಳಜಿ ಎದ್ದುಕಾಣುತ್ತದೆ. ತಮ್ಮ ಸಂಪರ್ಕದಲ್ಲಿದ್ದ ಪ್ರತಿಯೊಬ್ಬರ ವೈಯಕ್ತಿಕ ಸ್ಥಿತಿಗತಿ ಹಾಗೂ ಸಮಸ್ಯೆಗಳ ಅರಿವು ಅವರಿಗಿತ್ತು; ಮಾತ್ರವಲ್ಲದೆ ಅವರ ಆರೋಗ್ಯದ ಬಗ್ಗೆ ವಿಶೇಷ ನಿಗಾ ವಹಿಸುತ್ತಿದ್ದರು. ಗಂಭೀರವಾದ ರಾಜಕೀಯ

ಬಿರುಗಾಳಿಯ ನಡುವೆಯೂ ಯಾರಾದರೊಬ್ಬರ ಅಸೌಖ್ಯದ ಸುದ್ದಿ ತಿಳಿದು ಬಂದರೆ ಅಂಥವರಿಗೆ ಪತ್ರ ಬರೆಯುವಾಗ ಆಹಾರದಲ್ಲಿ ಪಥ್ಯ, ನಡಿಗೆ ಮುಂತಾದ ಪ್ರಕೃತಿ ಚಿಕಿತ್ಸಾ ವಿಧಾನಗಳನ್ನು ಶಿಫಾರಸು ಮಾಡಲು ಅವರು ಮರೆಯುತ್ತಿರಲಿಲ್ಲ. ಆಶ್ರಮದಲ್ಲಿ ಮತ್ತು ತಾವು ಭೇಟಿಕೊಡುವ ಬೇರೆ ಬೇರೆ ಸ್ಥಳಗಳಲ್ಲಿ ಅವರು ನೂರಾರು ಜನರಿಗೆ ಪ್ರಕೃತಿ ಚಿಕಿತ್ಸೆ ನೀಡಿ ಆರೈಕೆ ಮಾಡುತ್ತಿದ್ದರು. ಹಿಂದೂ ಮುಸ್ಲಿಂ ಗಲಭೆಗಳು ಮತ್ತು ಇದರಿಂದ ಉಂಟಾದ ದೇಶ ವಿಭಜನೆ ಗಾಂಧೀಯವರ ಜೀವನದಲ್ಲಿ ಉದ್ಭವಿಸಿದ ಅತ್ಯಂತ ಗಂಭೀರವಾದ ರಾಜಕೀಯ ಬಿಕ್ಕಟ್ಟು. ಈ ಸಂದರ್ಭದಲ್ಲಿ ಅವರು ಮತೀಯ ಗಲಭೆಗಳಿಂದ ಸಂತ್ರಸ್ತವಾದ ಪೂರ್ವ ಬಂಗಾಳದ ನೌಖಾಲಿಯ ಹಳ್ಳಿಗಳನ್ನು ಹಾದುಹೋಗುತ್ತಿದ್ದಾಗ ಅಸೌಖ್ಯದಿಂದ ನರಳುತ್ತಿದ್ದ ಅನೇಕರ ಶುಶ್ರೂಷೆ ಮಾಡಲು ಅವರು ಹೇಗೋ ಸಮಯ ಹೊಂದಿಸಿ ಕೊಳ್ಳುತ್ತಿದ್ದರು.

'ಯಂಗ್ ಇಂಡಿಯ' ಮತ್ತು 'ಹರಿಜನ' ಪತ್ರಿಕೆಗಳಲ್ಲಿ ಅವರು ಆಹಾರ ಸೇವನೆಯ ವಿಷಯದಲ್ಲಿ ನಿಯತವಾಗಿ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಈ ಅಂಕಣಗಳಲ್ಲಿ ಅವರು ಆರೋಗ್ಯಕರವಾದ ಆಹಾರ ಸೇವನೆಯ ವಿಧಾನವನ್ನು ಜರೂರಾಗಿ ಅಳವಡಿಸಿಕೊಳ್ಳಬೇಕಾಗಿರುವ ವಿಷಯದ ಮಹತ್ವ ನೀಡಿದರು. ವಿಶೇಷ ಸಿದ್ಧತೆಯನ್ನು ಬಯಸದ, ಅಗ್ಗದ ಹಾಗೂ ಪೌಷ್ಟಿಕಾಂಶದಿಂದ ಕೂಡಿದ ಊಟ ಉಪಚಾರಗಳ ವಿಚಾರದಲ್ಲಿ ತಾವು ಕೈಗೊಂಡ ಪ್ರಯೋಗಗಳನ್ನು ಓದುಗರ ಪ್ರಯೋಜನಕ್ಕಾಗಿ ಪ್ರಸ್ತುತಪಡಿಸಿದರು.

ಊಟ ಉಪಚಾರಗಳಲ್ಲಿನ ಅವರ ವಿಶೇಷ ಆಸಕ್ತಿಯು ತಮ್ಮ ಸುತ್ತ ಇರುವ ಜನರ ಬಗೆಗಿನ ಕಾಳಜಿಯಿಂದ ಹುಟ್ಟಿಕೊಂಡದ್ದಾಗಿದೆ. ಜೊತೆಗೆ ಈ ದೇಶದ ಕಡು ಬಡವನಿಗೂ ಕೂಡ ಉತ್ತಮ ಆಹಾರವನ್ನು ಒದಗಿಸುವ ಬಗೆ ಹೇಗೆ ಎಂಬ ಬಗ್ಗೆ ಅವರು ಚಿಂತನ

ನಡೆಸಿದ್ದರ ಫಲ ಸ್ವರೂಪ ಎನ್ನಬಹುದು. ಗಾಂಧೀಯವರು ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಿದಂದಿನಿಂದ ಅವರ ಅನುಯಾಯಿಗಳು ಹಾಗೂ ಅವರ ಪರಿವಾರ ಗಾಂಧೀಯವರ ಜೊತೆಯಲ್ಲೆ ವಾಸವಾಗಿದ್ದರು. ಇವರೆಲ್ಲರ ಹಿತರಕ್ಷಣೆಯ ಜವಾಬ್ದಾರಿಯನ್ನು ಗಾಂಧೀಯವರು ವಹಿಸಿಕೊಂಡರಲ್ಲದೆ ಓರ್ವ ತಾಯಿಯಂತೆ ಎಲ್ಲರ ಬೇಕು-ಬೇಡಗಳ ಕಡೆಗೂ ಗಮನ ಹರಿಸಿದರು.

ಗಾಂಧೀಯವರು ಆಶ್ರಮದಲ್ಲಿ ಅಗ್ಗದ ಹಾಗೂ ಪೌಷ್ಠಿಕ ಆಹಾರದ ಬಗ್ಗೆ ನಿರಂತರವಾಗಿ ಪ್ರಯೋಗಗಳನ್ನು ನಡೆಸಿದರು. ಒಲೆಗಳು, ಪಾತ್ರೆಗಳು, ಉಪಯೋಗಿಸಬೇಕಾದ ನೀರಿನ ಪ್ರಮಾಣ, ಕುದಿಸುವುದು, ಬೇಯಿಸುವುದು, ಸಂಬಾರ ಪದಾರ್ಥಗಳ ಬಳಕೆ ಅಥವಾ ಅವುಗಳ ನಿಷೇಧ, ಬ್ರೆಡ್ ತಯಾರಿಯ ವಿವಿಧ ವಿಧಾನಗಳು, ಸೋಯಾಬೀನ್ ಮುಂತಾದ ಕಡೆಗಣಿಸಲ್ಪಟ್ಟ ಆಹಾರ ಪದಾರ್ಥಗಳಿಂದ ಪೌಷ್ಠಿಕ ತಿನಿಸುಗಳ ತಯಾರಿ, ಜಾಮ್ ತಯಾರಿ, ಎಸೆದು ಬಿಡುವ ಕಿತ್ತಳೆ ಹಾಗೂ ಇನ್ನಿತರ ಹಣ್ಣುಗಳ ಸಿಪ್ಪೆಯಿಂದ ತಯಾರಿಸಿ ಸಂರಕ್ಷಿಸಿ ಇಡಬಹುದಾದ ಆಹಾರ ಪದಾರ್ಥಗಳು – ಹೀಗೆ ಅವರು ಹಲವಾರು ಪ್ರಯೋಗಗಳನ್ನು ಮಾಡಿದರು. ಅಶಕ್ತರು ಹಾಗೂ ಶುಶ್ರೂಷೆ ಪಡೆಯುತ್ತಿರುವವರಿಗೆ ಕೊಡಬಹುದಾದ ಸೂಕ್ತ ಆಹಾರ ಪದಾರ್ಥಗಳ ಬಗ್ಗೆ, ಅವರಿಗೆ ನೀಡಬಹುದಾದ ಪ್ರಕೃತಿ ಚಿಕಿತ್ಸೆಯ ಬಗ್ಗೆ ಚಿಂತನ ನಡೆಸಿದರು. ಇದಕ್ಕಾಗಿ ತಮ್ಮ ಕಾಲ ಹಾಗೂ ಶಕ್ತಿಯನ್ನು ವ್ಯಯಿಸಿದರು. ಪ್ರತಿಯೋರ್ವ ಆಶ್ರಮವಾಸಿಯ ತೂಕವನ್ನು ನಿಯತವಾಗಿ ದಾಖಲಿಸಲಾಗುತ್ತಿತ್ತು. ಅವರ ಆಹಾರಾಭ್ಯಾಸಗಳಲ್ಲಾದ ಪರಿವರ್ತನೆಯಿಂದ ಆದ ಬದಲಾವಣೆಗಳನ್ನು ಗಾಂಧೀಯವರು ಬಲು ಎಚ್ಚರದಿಂದ ಗಮನಿಸುತ್ತಿದ್ದರು. ಹಳ್ಳಿಗಳಲ್ಲಿ ಕೆಲಸ ಮಾಡುವ ಕಾಂಗ್ರೆಸ್ ಕಾರ್ಯಕರ್ತರಿಗೆ ಹೊಂದುವ ಊಟ-ಉಪಾಹಾರ ಕುರಿತು ಅವರ ಸಮಯ ಹಾಗೂ ಶಕ್ತಿಯನ್ನು ವ್ಯಯಿಸಿದರು. ಈ

ಬಗೆಯ ಆಹಾರವು "ಪೌಷ್ಟಿಕವಾಗಿರಬೇಕು, ಪ್ರತಿಯೊಬ್ಬ ಹಳ್ಳಿಗನ ಶಕ್ತ್ಯಾನುಸಾರ ಇರಬೇಕು ಮತ್ತು ಎಂಟು ಗಂಟೆಗಳ ದುಡಿಮೆಯಿಂದ ಬರುವ ಉತ್ಪನ್ನದೊಳಗೇ ಪೂರೈಸುವಂಥದಿರಬೇಕು" ಎಂದು ಅವರು ಬಯಸಿದರು. ಹೀಗೆ ಅವರ ಪ್ರಯೋಗಗಳು ಬಡಜನರ ದುಸ್ಥಿತಿ ಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ ಹೊಂದುವ ಪರಿಪೂರ್ಣ ಆಹಾರ ಮತ್ತು ಅದರ ತಯಾರಿಯ ಸುಲಭ ವಿಧಾನವನ್ನು ಕಂಡು ಕೊಳ್ಳುವ ಯತ್ನಗಳಾಗಿದ್ದವು.

ಹೆಂಗಸರ ಶ್ರಮ ನಿವಾರಣೆಯ ಬಗ್ಗೆಯೂ ಅವರು ವಿಶೇಷ ಕಾಳಜಿ ವಹಿಸಿರುವುದೂ ಅಷ್ಟೇ ಹೃದಯಸ್ಪರ್ಶಿಯಾಗಿದೆ. ಉದಾಹರಣೆಗೆ, ಬೇಯಿಸದ ಹಸಿ ಆಹಾರ ಪದಾರ್ಥಗಳ ಸಂಬಂಧ ದಲ್ಲಿ ತಾವು ನಡೆಸಿದ ಪ್ರಯೋಗಗಳ ಬಗ್ಗೆ ಗಾಂಧೀಯವರು ಓದುಗರಲ್ಲಿ ಹೀಗೆ ಹೇಳಿಕೊಂಡಿದ್ದಾರೆ. "ಈ ಪ್ರಯೋಗಕ್ಕೆ ನಾನು ವಿಶೇಷ ಮಹತ್ವ ಕೊಟ್ಟಿರುವುದರಿಂದಲೆ ಅದರ ವಿವರಗಳನ್ನು ಪ್ರಕಟಿಸುತ್ತಿದ್ದೇನೆ. ಒಂದು ವೇಳೆ ಈ ಪ್ರಯೋಗ ಯಶಸ್ವಿಯಾದರೆ ಗಂಭೀರ ಆಸಕ್ತಿಯ ಸ್ತ್ರೀ ಪುರುಷರು ತಮ್ಮ ಜೀವನ ವಿಧಾನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡಿಕೊಳ್ಳಲು ಸಾಧ್ಯವಾದೀತು. ಸಂತಸದ ಬದಲು ನೋವು ಹಾಗೂ ರೋಗ ತರುವ 'ಕತ್ತೆಚಾಕರಿ' ಯಿಂದ ಮಹಿಳೆಯರನ್ನು ಮುಕ್ತಗೊಳಿಸೀತು". ಇದೇ ರೀತಿ ಅವರು ಕೊಟ್ಟಣದ ಅಕ್ಕಿಯ ಪರವಾಗಿ ವಾದಿಸಿದಾಗಲೂ ಕೇವಲ ಪೌಷ್ಟಿಕಾಂಶ ವನ್ನು ಮಾತ್ರ ಒತ್ತಿಹೇಳಲಿಲ್ಲ. ಭತ್ತ ಕುಟ್ಟುವ ಕೆಲಸವು ಹೆಂಗಸರಿಗೆ ಪರಂಪರೆಯಿಂದ ಬಂದಿರುವುದರಿಂದ "ಹಳ್ಳಿಗಳಲ್ಲಿ ಹಳೆಯ ಕ್ರಮದಂತೆ ಭತ್ತ ಕುಟ್ಟುವ ಕೆಲಸ ಮುಂದುವರಿದರೆ ಈ ಕೆಲಸ ಮಾಡುವ ಸೋದರಿಯರಿಗೆ ಒಂದಿಷ್ಟು ಕೂಲಿ ಸಿಗುತ್ತದೆ" ಎಂಬ ಅಂಶವನ್ನು ಒತ್ತಿ ಹೇಳಿದರು.

ಸ್ವಯಂ ತನ್ನ ಮೇಲೆ ತಾನೇ ಪ್ರಯೋಗಿಸಿಕೊಳ್ಳದ ಯಾವುದೇ

ಊಟ-ಉಪಾಹಾರದ ಪರಿಷ್ಕರಣವನ್ನು ಅವರು ಬೇರೆಯವರಿಗೆ ಶಿಫಾರಸು ಮಾಡುತ್ತಿರಲಿಲ್ಲ ಎಂಬುದು ಬಹಳ ಮುಖ್ಯವಾದ ಸಂಗತಿ. ಈ ವಿಭಾಗದಲ್ಲಿ ಗಾಂಧೀಯವರು ತಮ್ಮ ಅತ್ಯುನ್ನತವಾದ ವೈಜ್ಞಾನಿಕ ಹಾಗೂ ವೈಚಾರಿಕ ದೃಷ್ಟಿಕೋನವನ್ನು ಬಿಂಬಿಸಿದ್ದಾರೆ. ಇದು ಅವರ ಮಾನವೀಯ ಸ್ವಭಾವದ ಮೇಲೂ ಬೆಳಕು ಚೆಲ್ಲುತ್ತದೆ. ತಮ್ಮ ಈ ಸ್ವಭಾವದಿಂದಾಗಿಯೆ ಅವರು ಸ್ತ್ರೀಯರ ಆದರ್ಶವೆಂದು ಕರೆಯಲ್ಪಡುವ ಶುಶ್ರೂಷೆ, ಸಂತೈಕೆ ಹಾಗೂ ಜೀವದಾಯಿ ಗುಣವನ್ನು ಆತ್ಮಸಾತ್ ಮಾಡಿಕೊಂಡರು. ತಮ್ಮ ಬದುಕಿನ ಕೊನೆ ಕೊನೆಯ ದಿನಗಳಲ್ಲಿ ಮಾತೃ ಸದೃಶ ಪಾತ್ರವನ್ನು ಅವರು ಹೆಚ್ಚು ಪ್ರಜ್ಞಾಪೂರ್ವಕವಾಗಿ ಸ್ವೀಕರಿಸಿದಂತಿತ್ತು. ಗಾಂಧೀಯವರ ಸೋದರ ಸೊಸೆ ಮನು ಗಾಂಧೀ ಬರೆದ 'ಬಾಪೂ ನನ್ನ ತಾಯಿ' ಎಂಬ ಕೃತಿಯಲ್ಲಿ ಗಾಂಧೀಯವರು 'ರಾಷ್ಟ್ರಪಿತ'ನಾದರೂ ತನಗೆ ಮಾತ್ರ ತಾಯಿ ಎಂದು ಅವರು ಅನೇಕ ಬಾರಿ ಹೇಳುತ್ತಿದ್ದುದನ್ನು ಸ್ಮರಿಸಿಕೊಳ್ಳುತ್ತಾರೆ. ಒಮ್ಮೆ ಕಸ್ತೂರಬಾರ ಸ್ಮಾರಕ ಟ್ರಸ್ಟ್‌ನ ಕಾರ್ಯಕರ್ತರು ಇಡಿ ಕಾರ್ಯಕ್ರಮ ಮಹಿಳೆಯರಿಂದಲೇ ನಡೆಯಬೇಕೆಂಬ ಬೇಡಿಕೆ ಮಂಡಿಸಿದಾಗ ಗಾಂಧೀಯವರು ಅವರ ಅಭಿಪ್ರಾಯವನ್ನು ಪುರಸ್ಕರಿಸಿದರು. ಆದರೆ ತನ್ನನ್ನು ತಾನು ಮಹಿಳೆಯೆಂದು ಗುರುತಿಸಿಕೊಳ್ಳುವೆನೆಂದೂ ನುಡಿದರು. ಈ ಬಗೆಯ ಹೇಳಿಕೆಯನ್ನು ಇನ್ನೂ ಇಂಥ ಅನೇಕ ಸಂದರ್ಭಗಳಲ್ಲಿ ಅವರು ನೀಡಿದ್ದುಂಟು.

ಗಾಂಧೀಯವರ ದೃಷ್ಟಿಯಲ್ಲಿ ಕಾಮ

ಮಹಿಳೆಯರನ್ನು ಕುರಿತು ಗಾಂಧೀಯವರ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಕಾಮ ಹಾಗೂ ಗಂಡು ಹೆಣ್ಣಿನ ಸಂಬಂಧಗಳ ಬಗೆಗಿನ ಅವರ ದೃಷ್ಟಿಕೋನವನ್ನು ಗಮನಿಸಬೇಕಾದ್ದು ಬಲು ಮುಖ್ಯ. ಬಾಲ್ಯ ಹಾಗೂ ತಾರುಣ್ಯದಲ್ಲಿ ಗಳಿಸಿದ ಖಾಸಗಿ ಅನುಭವಗಳ ಫಲವಾಗಿ ಅವರಲ್ಲಿ ಈ ದೃಷ್ಟಿಕೋನ ಒಡಮೂಡಿದೆ.

ಅವರ ಆತ್ಮಚರಿತ್ರೆಯಲ್ಲಿ 'ವಿಷಯಾಸಕ್ತಿ'ಯ ಬಗೆಗಿನ ಗೀಳು ಪದೇ ಪದೇ ಉಲ್ಲೇಖಗೊಳ್ಳುತ್ತದೆ. ದಕ್ಷಿಣ ಆಫ್ರಿಕೆಯಲ್ಲಿ ಅವರು ಸ್ವೀಕರಿಸಿ ಕೊನೆಯ ತನಕವೂ ಪಾಲಿಸಿದ ಭೋಗವರ್ಜನದ ಪ್ರತಿಜ್ಞೆ, ಲೈಂಗಿಕ ಪ್ರಚೋದನೆಗಳಿಂದ ತಾನೆಷ್ಟು ಮುಕ್ತನೆಂದು ತಿಳಿಯಲು ಅವರು ಅನಂತರ ನಡೆಸಿದ ಪ್ರಯೋಗಗಳು ಇವೆಲ್ಲ ಅವರ ಚಿಂತನದಲ್ಲಿ ಕಾಮವು ಪ್ರಮುಖ ಸ್ಥಾನ ಪಡೆದಿರುವುದಲ್ಲದೆ ಮಹಿಳೆಯರ ಬಗೆಗಿನ ಅವರ ವಿಚಾರಗಳ ಮೇಲೆ ಪರಿಣಾಮ ಬೀರಿದೆ ಎಂಬುದನ್ನು ಸೂಚಿಸುತ್ತದೆ. ವಿವಾಹ ಜೀವನದ ಆರಂಭದ ವರ್ಷಗಳಲ್ಲಿ ಸಂಭವಿಸಿದ 'ಬಾಲಿಶ ಅಪಚಾರ'ಗಳು (ಹಾಗೆಂದು ಅವರೇ ಕರೆದುಕೊಂಡಿದ್ದಾರೆ) ಅವರ ಮನಸ್ಸಿನ ಮೇಲೆ ಶಾಶ್ವತವಾದ ಅಚ್ಚೊತ್ತಿವೆ.೧೩ ಹೆಂಡತಿಯೊಂದಿಗಿನ ಯಾವುದೇ ಬಗೆಯ ಲೈಂಗಿಕ ಸಂಪರ್ಕವು ತನ್ನ ಉನ್ನತವಾದ ಧ್ಯೇಯಾದರ್ಶಗಳಿಗೆ ಮಾರಕವೆಂದು ಅವರು ಭಾವಿಸುತ್ತಿದ್ದಿರಬೇಕು. ತಂದೆಯವರು ಮರಣಶಯ್ಯೆಯಲ್ಲಿದ್ದಾಗ ತಮ್ಮ ತುಂಬು ಗರ್ಭಿಣಿ ಪತ್ನಿಯೊಂದಿಗೆ ತಾವು ಚಕ್ಕಂದವಾಡುತ್ತಿದ್ದುದಕ್ಕಾಗಿ ಆಜೀವ ಪರ್ಯಂತ ಅವರು ತಮ್ಮನ್ನು ಕ್ಷಮಿಸಿಕೊಂಡಿರಲಿಲ್ಲ. ಆ ಮಗು ಹುಟ್ಟುವ ಮುನ್ನವೇ ತೀರಿಕೊಂಡಿತು. "ಪುರುಷನ ಲೈಂಗಿಕ ಸ್ವಭಾವದಲ್ಲೇ ಕಿಡಿಗೇಡಿತನ ಸುಪ್ತವಾಗಿದೆ"೧೪ ಎಂಬ ವಿಚಾರ ಇದರಿಂದಾಗಿ ಗಾಂಧೀಯವರಿಗೆ ಖಾತ್ರಿಯಾಯಿತು.

ಗಾಂಧೀಯವರು ಇಂಗ್ಲೆಂಡಿಗೆ ಹೋಗುವ ಮುನ್ನ ತಾನು ಅಲ್ಲಿ ಬ್ರಹ್ಮಚರ್ಯವನ್ನು ಪಾಲಿಸುವವನೆಂದು ತಾಯಿಗೆ ಮಾತು ಕೊಡಬೇಕಾಗಿ ಬಂದಿರುವುದಕ್ಕೂ ಕಾಮವು ಅಪಾಯಕಾರಿ ಎಂಬ ಅವರ ಆಲೋಚನೆಗಳಿಗೂ ಸಂಬಂಧವಿದೆ ಎನ್ನಿಸುತ್ತದೆ. ಗಾಂಧೀಯವರೇ ಒಪ್ಪಿಕೊಂಡಿರುವಂತೆ ದೇವರ 'ಅಭಯ ಹಸ್ತ'ವೇ ಅನೇಕ ಸಲ ಅವರನ್ನು 'ಅಪಾಯ'ದಿಂದ ಪಾರು ಮಾಡಿತಂತೆ. 'ವಚನ ಭಂಗ'ವಾಗುವ ಹಂತದಲ್ಲೂ ದೈವಾನುಗ್ರಹ ಹೇಗೆ ತನ್ನನ್ನು ಪಾರು ಮಾಡಿ

ತೆಂದು ಗಾಂಧೀಯವರು ಆತ್ಮಚರಿತ್ರೆಯಲ್ಲಿ ಬಣ್ಣಿಸುತ್ತಾರೆ. ಅವರ ಗೆಳೆಯ ಮೆಹ್ತಾಬ್ ಸೂಳೆಯೊಬ್ಬಳ ಮನೆಗೆ ಕರೆದೊಯ್ದುದ್ದು ಮೊದಲನೇ ಸಂದರ್ಭ. ಇನ್ನೊಂದು ಸಂದರ್ಭ – ಇದು ನಡೆದದ್ದು ಪೋರ್ಟ್ಸ್‌ಮೌತ್‌ನಲ್ಲಿ – ಇಸ್ಪೀಟಾಟದ ವೇಳೆ. ಕೆಲವು ಹೆಂಗಸರು ಗಾಂಧೀಯವರ ಸ್ನೇಹ ಸಂಪಾದನೆಗೆ ಯತ್ನಿಸಿದರು. ಗಾಂಧೀಯವರು ಹೆಚ್ಚು ಕಡಿಮೆ ಅವರ ಬಲೆಗೆ ಬೀಳುವುದರಲ್ಲಿದ್ದರು. ಅಷ್ಟರಲ್ಲೇ ಅವರು ತಾಯಿಗೆ ಕೊಟ್ಟ ಮಾತು ನೆನಪಾಗಿ ಆ ಸ್ಥಳದಿಂದ ಎದ್ದು ಹೋದರು. ಪ್ರಲೋಭನೆಗಳನ್ನು ಧಿಕ್ಕರಿಸುವಲ್ಲಿ ತನ್ನ ಮನಸ್ಸು ಎಷ್ಟು ದುರ್ಬಲವೆಂದು ತಿಳಿದಿದ್ದ ಗಾಂಧೀಯವರು ಈ ಪ್ರಕರಣದಲ್ಲಿ ದೇವರೇ ತನ್ನನ್ನು ರಕ್ಷಿಸಿದನೆಂದು ಭಾವಿಸುತ್ತಾರೆ. ಇದೇ ರೀತಿ ಜಂಜೀಬಾರ್‌ನಲ್ಲಿ ಹಡಗಿನ ಕಪ್ತಾನನು ಅವರನ್ನು ಸೂಳೆಯ ಮನೆಗೆ ಕರೆದೊಯ್ದನು. ಇಲ್ಲಿಯೂ ತನ್ನ ಆತ್ಮನಿಗ್ರಹ ಶಕ್ತಿ ಎಷ್ಟು ಅಲ್ಪ ವೆಂಬುದು ಗಾಂಧೀಯವರ ಅರಿವಿಗೆ ಬಂತು. ಈ ಪ್ರಕರಣದಲ್ಲೂ ದೇವರ 'ಅಭಯ ಹಸ್ತ'ವೇ ತನ್ನನ್ನು ರಕ್ಷಿಸಿತೆಂದು ಅವರು ಭಾವಿಸು ತ್ತಾರೆ. ಯುರೋಪ್‌ನಲ್ಲಿದ್ದಾಗಲೂ 'ಗಂಭೀರವಾದ ಪ್ರಲೋಭನೆ' ಗಳಿದ್ದರೂ ಅವರು ತಮ್ಮ ತಾಯಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳು ವಲ್ಲಿ ಯಶಸ್ವಿಯಾದರು. ಕಾಮದ ಬಗೆಗೆ ದಿನೇ ದಿನೇ ಅವರಲ್ಲಿ ಬೆಳೆಯುತ್ತಿದ್ದ ಅಪನಂಬಿಕೆಗಳನ್ನು ಅವರಿಗಾದ ಅನುಭವಗಳು ದೃಢೀ ಕರಿಸಿದವು.

ಉನ್ನತವಾದ ಜೀವನ ನಡೆಸಲು ಬ್ರಹ್ಮಚರ್ಯವು ಅವಶ್ಯವೆಂದು ಗಾಂಧೀಯವರು ಭಾವಿಸಿದರು. ಆದರೆ ಬ್ರಹ್ಮಚರ್ಯವು ಎಲ್ಲರಿಂದ ಅನುಸರಿಸಲು ಸಾಧ್ಯವಿಲ್ಲವೆಂಬುದನ್ನು ಮನಗಂಡಿದ್ದ ಗಾಂಧೀಯವರು ಕೇವಲ ಆದರ್ಶ ಜೀವನ ನಡೆಸುವವರಿಗೆ ಬ್ರಹ್ಮಚರ್ಯವನ್ನು ಶಿಫಾರಸ್ಸು ಮಾಡಿದರು. ಗಾಂಧೀಯವರ ಆಶ್ರಮದಲ್ಲಿ ಬ್ರಹ್ಮಚರ್ಯವು ಒಂದು ಅನುಸರಣೀಯ ನಿಬಂಧನೆಯಾಗಿತ್ತು. "ಕಾಮವನ್ನು ಗೆಲ್ಲು

ವುದು ಸ್ತ್ರೀ ಪುರುಷರ ಜೀವನದ ಬಲು ದೊಡ್ಡ ಸಾಧನೆ. ಕಾಮ ವನ್ನು ಗೆಲ್ಲದೆ ತನ್ನ ಆತ್ಮವನ್ನು ತಾನು ಆಳಲು ಸಾಧ್ಯವಿಲ್ಲ. ತನ್ನ ಆತ್ಮವನ್ನು ತಾನು ಆಳದೆ ಸ್ವರಾಜ್ಯ ಸಾಧ್ಯವಿಲ್ಲ.........ಕಾಮವನ್ನು ಗೆಲ್ಲದೆ ಯಾವ ಕಾರ್ಯಕರ್ತನೆ ಆಗಲಿ, ಹರಿಜನರು, ಕೋಮು ಸಾಮ ರಸ್ಯ, ಖಾದಿ, ಗೋರಕ್ಷಣೆ ಅಥವಾ ಗ್ರಾಮೀಣ ಪುನರುತ್ಥಾನದಂಥ ವಿಷಯಗಳಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಲು ಸಾಧ್ಯವಿಲ್ಲ. ಈ ಮಹೋನ್ನತ ಉದ್ದೇಶಗಳ ಈಡೇರಿಕೆಗೆ ಬೌದ್ಧಿಕ ಸಲಕರಣೆಗಳಷ್ಟೇ ಸಾಲದು; ಆಧ್ಯಾತ್ಮಿಕ ಪ್ರಯತ್ನ ಹಾಗೂ ಆತ್ಮಶಕ್ತಿಯು ದೈವದತ್ತ ವಾದುದು. ಕಾಮದ ಗುಲಾಮನಾದವನಿಗೆ ಅದು ಎಂದೂ ಸಿದ್ಧಿಸಲಾರದು".

ದಂಪತಿಗಳ ಮಧ್ಯೆ ಲೈಂಗಿಕ ನಿಯಂತ್ರಣ ಬಹಳ ಅವಶ್ಯವೆಂದು ಗಾಂಧೀಯವರು ಭಾವಿಸಿದ್ದರು. ಆದ್ದರಿಂದಲೇ ಅವರು ಬ್ರಹ್ಮಚರ್ಯ ವಲ್ಲದೆ ಬೇರೆಲ್ಲ ಬಗೆಯ ಜನನ ನಿಯಂತ್ರಣ ವಿಧಾನವನ್ನು ಖಡಾ ಖಂಡಿತವಾಗಿ ವಿರೋಧಿಸಿದರು. ಸ್ತ್ರೀಯರ ವಿಮೋಚನೆಯಲ್ಲಿ ಜನನ ನಿಯಂತ್ರಣವು ಪೂರ್ವಭಾವಿ ಅಗತ್ಯವೆಂದು ಮಾರ್ಗರೆಟ್ ಸ್ಯಾಂಜರ್ ಗಾಂಧೀಯವರಿಗೆ ಮನದಟ್ಟು ಮಾಡಲು ಬಹಳ ಹೆಣಗಿದರು. ವೈಜ್ಞಾನಿಕ ಜನನ ನಿಯಂತ್ರಣ ವಿಧಾನಗಳ ಕುರಿತಾದ ವ್ಯಾಪಕ ಪ್ರಚಾರವಿಲ್ಲದಿದ್ದುದರಿಂದ ಇಂಗ್ಲೆಂಡಿನ ಕಾರ್ಮಿಕ ವರ್ಗದ ಮಹಿಳೆ ಯರು ಅತ್ಯಂತ ಶೋಚನೀಯ ಸ್ಥಿತಿಯನ್ನು ಎದುರಿಸಬೇಕಾಯಿತು. ಇದರ ಅರಿವಿದ್ದ ಸ್ಯಾಂಜರ್ ಅವರ ನಿರ್ಭಾವುಕ ವಾದಸರಣಿಯಿಂದ ಗಾಂಧೀ ಎಳ್ಳಷ್ಟೂ ವಿಚಲಿತರಾಗಲಿಲ್ಲ. "ಆತ್ಮನಿಗ್ರಹ ಅಥವಾ ಬ್ರಹ್ಮಚರ್ಯ" ವೊಂದೇ ಅತ್ಯಂತ ಆರೋಗ್ಯಕರ ವಿಧಾನವೆಂದು ಅವರು ಒತ್ತಿ ಹೇಳಿದರು. "ಕೃತಕ ವಿಧಾನಗಳು ದುಶ್ಚಟಗಳಿಗೆ ಇಂಬು ನೀಡುತ್ತವೆ. ಅವು ಬುದ್ಧಿಮಾಂದ್ಯ ಹಾಗೂ ನರದೌರ್ಬಲ್ಯಕ್ಕೆ ಕಾರಣವಾಗುತ್ತವೆ", ಸ್ತ್ರೀ ಪುರುಷರಲ್ಲಿರುವ ಲೈಂಗಿಕ ತುಡಿತವು

'ಪಾಶವೀ ಕಾಮ' ವೆಂದು ಅವರು ಭಾವಿಸಿದ್ದರು.

ಕೃತಕ ವಿಧಾನಗಳ ಮೂಲಕ ಜನನ ನಿಯಂತ್ರಣ ಸಾಧಿಸುವುದು ಮಹಿಳೆಯರಿಗೆ ನಾವು ಬಗೆಯುವ ಅಪಚಾರ. ಈ ವಿಧಾನಗಳು "ಮಹಿಳೆಯರನ್ನು ಇನ್ನಷ್ಟು ಅಧಃಪತನಕ್ಕೆ ತಳ್ಳುತ್ತವೆ" ಎಂಬುದು ಗಾಂಧೀಯವರ ಅಭಿಪ್ರಾಯವಾಗಿತ್ತು. ಅವರ ದೃಷ್ಟಿಯಲ್ಲಿ "ಜನನ ನಿರೋಧಕಗಳನ್ನು ಬಳಸುವ ಮಹಿಳೆಯು ಹಾಗೂ ಸೂಳೆಯು ನಡು ವಿರುವ ವ್ಯತ್ಯಾಸವೇದರೆ ಒಬ್ಬಳು ತನ್ನ ದೇಹವನ್ನು ಕೇವಲ ಒಬ್ಬ ಗಂಡಸಿಗೆ ಮಾರಿಕೊಂಡರೆ ಮತ್ತೊಬ್ಬಳು ಹಲವು ಗಂಡಸರಿಗೆ ಮಾರಿ ಕೊಳ್ಳುತ್ತಾಳೆ," "ಗರ್ಭಧಾರಣೆಯ ಯಾವುದೇ ಸನ್ನಿವೇಶದಲ್ಲಿ ಜನನ ನಿರೋಧಕಗಳ ಬಳಕೆಯನ್ನು" ಗಾಂಧೀಯವರು ಕಟುವಾಗಿ ಟೀಕಿಸಿದರು. ಏಕೆಂದರೆ "ಸಂತಾನೋತ್ಪತ್ತಿಗಾಗಿ ಸಂಭೋಗ ನಡೆಸು ದನ್ನು ಬಿಟ್ಟು ಉಳಿದ ಸಂದರ್ಭಗಳಲ್ಲಿ ಕಾಮನೆಗಳನ್ನು ಈಡೇರಿಸಿ ಕೊಳ್ಳುವುದು ಸ್ತ್ರೀ ಪುರುಷರಿಗೆ ಅಗತ್ಯವೇನಲ್ಲ" ಎಂದು ಅವರು ನಂಬಿದ್ದರು. ಮಕ್ಕಳನ್ನು ಪಡೆಯಲೆಂದು ಸ್ತ್ರೀ ಪುರುಷರು ಸಂಭೋಗ ನಡೆಸುವುದು ಸೂಕ್ತ. ಆದರೆ ಇದನ್ನು ಬಿಟ್ಟು ಬೇರೆ ಉದ್ದೇಶಕ್ಕಾಗಿ ಸಂಭೋಗಿಸುವುದು ಪಾಪಕರ, ಅನೈತಿಕ ಹಾಗೂ ಅದು ಪಾಶವೀ ಕಾಮ. ಗಂಡಸು "ಪಶುಗಳ ಹಾಗೆ ತಮ್ಮ ಮಡದಿ ಯರ ಮೇಲೆ ಏರಿಬಂದಾಗ ಅವರು ನಿರಾಕರಿಸುವುದು ಸಾಧ್ಯವಾದರೆ" ಭಾರತದಲ್ಲಿ ಜನನ ನಿಯಂತ್ರಣದ ಸಮಸ್ಯೆಯೇ ಉದ್ಭವಿಸದೆಂದು ಗಾಂಧೀಯವರು ಪ್ರತಿಪಾದಿಸಿದರು.

ಮಾರ್ಗರೆಟ್ ಸ್ಯಾಂಜರ್ ಅವರು ಆತ್ಮನಿಗ್ರಹದ ಪರಿಣಾಮ ವಾಗಿ ಮಾನಸಿಕ ಹಾಗೂ ನರದೌರ್ಬಲ್ಯಗಳಿಗೆ ತುತ್ತಾದ ವ್ಯಕ್ತಿಗಳ ಉದಾಹರಣೆಯನ್ನು ನೀಡಿದಾಗ ಗಾಂಧೀಯವರು "ಈ ಉದಾಹರಣೆ ಗಳನ್ನು ಮಂದ ಬುದ್ಧಿಯವರನ್ನು ದೃಷ್ಟಿಯಲ್ಲಿಟ್ಟುಕೊಂಡು ನೀಡಿ ದ್ದಾಗಿದೆ" ಎಂದು ನಿರಾಕರಿಸಿದರು. ಅವರ ದೃಷ್ಟಿಯಲ್ಲಿ ಮಕ್ಕಳ

ಪ್ರೇಮವು "ನಾಯಿಗಳ ಪ್ರೀತಿಯಂತೆ." ಜನನ ನಿರೋಧಕಗಳು ಈ ಬಗೆಯ ಪ್ರೇಮಕ್ಕೆ ಕಾರಣವಾಗಬಹುದು. "ಮನುಷ್ಯರು ಪೊಲಗಳಂತೆ ಸಾಯಬೇಕಾಗಬಹುದು. ಚಾರಿತ್ರ್ಯ ಸಡಿಲವಾದರೆ ಪ್ರಕೃತಿ ನಮ್ಮನ್ನು ನಿಸ್ಸಂಶಯವಾಗಿಯೂ ಶಿಕ್ಷಿಸುತ್ತದೆ" ಎಂದೂ ಅವರು ಪ್ರತಿಪಾದಿಸಿದರು.

ಗಾಂಧೀಯವರ ಪ್ರಕಾರ ಸ್ತ್ರೀಯರು ತಮ್ಮ ಆತ್ಮಗೌರವ ಹಾಗೂ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಬೇಕಾದರೆ ತಮ್ಮ ಗಂಡಂದಿರಿಗೂ ಕೂಡ ಯಾವುದೇ ಬಗೆಯ ದೈಹಿಕ ಸಂಪರ್ಕಕ್ಕೆ ಎಡೆ ಕೊಡಕೂಡದು. ಇಬ್ಬರೂ ಸ್ವಇಚ್ಛೆಯಿಂದ ದೈಹಿಕ ಸಂಪರ್ಕವನ್ನು ಅಥವಾ ಕಾಮವನ್ನು ತ್ಯಜಿಸಿದ್ದೇ ಆದರೆ ನಿಜವಾದ ಪ್ರೇಮ ಸ್ತ್ರೀ ಪುರುಷರ ನಡುವೆ ಅರಳಬಹುದು. ಆಗ ಮಾತ್ರವೇ ಅವರು "ಮಕ್ಕಳನ್ನು ಪಡೆದು ಗೃಹಕೃತ್ಯ ನಡೆಸುವ ಸ್ವಾರ್ಥಪರ ಉದ್ದೇಶ"ವನ್ನು ಬಿಟ್ಟುಕೊಟ್ಟು ಮೇಲೇರಲು ಸಾಧ್ಯ. ಸ್ವಾರ್ಥರಹಿತ ಮಾನವತೆಗೆ ಕಂಟಕವಾಗುವ ಮದುವೆ ಹಾಗೂ ಕುಟುಂಬ ಜೀವನವನ್ನು ಈ ಹಂತದಿಂದಾಚೆಗೆ ಗಾಂಧೀಯವರು ಅಷ್ಟಾಗಿ ಖಂಡಿಸಲಿಲ್ಲ ಎಂಬುದು ಗಮನಾರ್ಹ. ಈ ಸಮಸ್ಯೆಗೆ ಅವರು ಕಂಡುಕೊಂಡ ಪರಿಹಾರವೆಂದರೆ ವಿವಾಹಿತರು "ತಾವು ಮದುವೆ ಆಗಿಲ್ಲವೇನೋ ಎಂಬಂತೆ ಬದುಕುವುದು ಮತ್ತು ದಂಪತಿಗಳು ತಮ್ಮ ಸಂಗಾತಿಯನ್ನು ಸಹೋದರ ಅಥವಾ ಸಹೋದರಿ ಎಂದು ಭಾವಿಸುವುದು. ಇದರಿಂದ ಅವರು ಈ ಜಗತ್ತಿನ ಸೇವೆ ಮಾಡಲು ವಿಮೋಚಿತರಾಗುತ್ತಾರೆ. ಇಂಥವರ ಪ್ರೇಮವು ಕಾಮವಾಸನೆಯಿಂದ ಮುಕ್ತವಾಗಿ ಪರಿಶುದ್ಧವಾಗಿರುತ್ತದೆ; ಗಟ್ಟಿಯಾಗಿ ಬೆಳೆಯುತ್ತದೆ". ನವವಿವಾಹಿತ ದಂಪತಿಗಳಿಗೆ ಅವರು "ನಿಮಗೆ ಮಕ್ಕಳಾಗದಿರಲಿ" ಎಂದು ಆಶೀರ್ವದಿಸುತ್ತಿದ್ದರು.[೧೫]

ಗಾಂಧೀಯವರ ದೃಷ್ಟಿಯಲ್ಲಿ ಆದರ್ಶ ಪತ್ನಿಯು ವಿವಾಹ

ವನ್ನು ಪಾಶವೀ ಕಾಮನೆಗಳನ್ನು ತೃಪ್ತಿಗೊಳಿಸುವ ಸಾಧನವೆಂದು ತಿಳಿಯದೆ "ಸ್ವಾರ್ಥರಹಿತ ಸೇವೆಯನ್ನು ಸಾಕಾರಗೊಳಿಸುವ ಸಾಧನ" ವೆಂದು ತಿಳಿಯಬೇಕು. ಇಲ್ಲಿ ಸ್ವಾರ್ಥರಹಿತತೆ ಎಂದರೆ ಕಾಮರಹಿತ ವಾಗಿರುವುದೆಂದರ್ಥ. ಸಮಾಜಸೇವೆ ಮಾಡಬಯಸುವವರು ಅಥವಾ ಧಾರ್ಮಿಕ ಜೀವನಾನುಭವ ಪಡೆಯಬಯಸುವವರು ವಿವಾಹಿತರಿರಲಿ, ಅವಿವಾಹಿತರಿರಲಿ ಬ್ರಹ್ಮಚರ್ಯ ಜೀವನ ನಡೆಸಬೇಕು. ಗಾಂಧೀಯವರ ಆಶ್ರಮದಲ್ಲಿ ದಂಪತಿಗಳು "ಬ್ರಹ್ಮಚರ್ಯ ಪಾಲನೆ ಮಾಡುವೆವು" ಎಂದು ಪ್ರತಿಜ್ಞೆ ಮಾಡಬೇಕಾಗಿದ್ದಿತು. ಸ್ತ್ರೀ ಪುರುಷರ ಪ್ರೇಮ ಹಾಗೂ ಸಾಹಚರ್ಯದಲ್ಲಿ ಕೂಡ ಲೈಂಗಿಕ ತೃಪ್ತಿಗೆ ಅವಕಾಶವಿರಲಿಲ್ಲ. ಈ ಬಗೆಯ ತೃಪ್ತಿಯು ನಿಜವಾದ ಗೆಳೆತನದ ನಿರಾಕರಣವೆಂದು ಭಾವಿಸಲಾಗಿತ್ತು. ತಾರುಣ್ಯದಲ್ಲೇ ಎಲ್ಲ ಬಗೆಯ ಲೈಂಗಿಕ ಸಂಬಂಧ ಗಳನ್ನು ತ್ಯಾಗಮಾಡಿದ್ದರಿಂದಾಗಿ ತಾನು ಹಾಗೂ ತನ್ನ ಪತ್ನಿ ನಿಜವಾದ ವೈವಾಹಿಕ ಜೀವನದ ಆನಂದವನ್ನು ಅನುಭವಿಸಲು ಸಾಧ್ಯ ವಾಯಿತೆಂದು ಗಾಂಧೀಯವರು ಹೇಳುತ್ತಾರೆ. ಈ ಬಗೆಯ ಆತ್ಮ ನಿರಾಕರಣವು ತಮ್ಮ ಅದಮ್ಯವಾದ ಸೇವಾ ಮನೋಭಾವದಿಂದ ಉತ್ಪನ್ನವಾದುದೆಂದು ಗಾಂಧೀಯವರು ಭಾವಿಸುತ್ತಾರೆ. ಆದರೆ ಲೈಂಗಿಕ ಸಂಬಂಧಗಳನ್ನು ತ್ಯಜಿಸುವ ನಿರ್ಧಾರವನ್ನು ಗಾಂಧೀಯವರು ಏಕಪಕ್ಷೀಯವಾಗಿ ತೆಗೆದುಕೊಂಡರೆಂಬುದು ನಮಗೆ ಅವರ ಆತ್ಮಕಥನ ದಿಂದ ತಿಳಿದುಬರುತ್ತದೆ. ಗಾಂಧೀಯವರ ಅನೇಕ ನಿರ್ಧಾರಗಳ ಬಗ್ಗೆ ಕಸ್ತೂರಬಾ ಅವರಿಗೆ ಭಿನ್ನಮತವಿದ್ದರೂ ಮೌನವಾಗಿ ಒಪ್ಪಿಗೆ ನೀಡಿದಂತೆ ಈ ವಿಷಯದಲ್ಲೂ ಅವರು ತಮ್ಮ ಸಮ್ಮತಿ ನೀಡಿರಬೇಕು.

ತಮ್ಮ ಆತ್ಮಸಾಕ್ಷಿಗೆ ಮಣಿಯುವ ಪ್ರತಿಯೊಬ್ಬ ವ್ಯಕ್ತಿಯ ಕುರಿತಾಗಿ ಆರೋಗ್ಯಕರ ಗೌರವ ಹಾಗೂ ಕಾಳಜಿ ಇಟ್ಟುಕೊಂಡೇ ಗಾಂಧೀಯವರು ಸ್ತ್ರೀ ಪುರುಷರ ನಡುವಣ ಅಧಿಕಾರ ಸಂಬಂಧಗಳ ವಿಚಾರದಲ್ಲಿ ಬದಲಾಗುತ್ತಿರುವ ಮುಖ್ಯ ಅಂಶಗಳ ಬಗ್ಗೆ ಪ್ರಯೋಗ ನಡೆಸಿದರು. ಆದರೆ ಈ ಪರಸ್ಪರ ಗೌರವ ಹಾಗೂ ಕಾಳಜಿಯು

ಒಂದು ಉದಾತ್ತವಾದ, ಗೌರವಾರ್ಹವಾದ ಚೌಕಟ್ಟಿಗೆ ಸೀಮಿತ ವಾಗಿತ್ತು. ಕುಟುಂಬದ ಹಿರಿಯನಂತಿದ್ದ ಗಾಂಧೀಯವರು ತಾನೆಂದೂ ಅಧಿಕಾರವನ್ನು ದುರುಪಯೋಗಿಸಲಾರೆ ಮತ್ತು ತನ್ನಲ್ಲಿ ಇರಿಸಿದ ನಂಬಿಕೆಗೆ ಧಕ್ಕೆ ತರಲಾರೆ ಎಂಬ ಭರವಸೆ ಹೊಂದಿದ್ದರು. ಆದರೆ ಅವರು ಪ್ರತಿಪಾದಿಸಿದ ಸಂಬಂಧಗಳು ಮಾತ್ರ ಮಹಿಳೆಯರಿಗೆ ನಿಜ ವಾದ ಸಮಾನತೆಯನ್ನು ತಂದುಕೊಡಲಿಲ್ಲ. ಈ ಸಮಸ್ಯೆಗಳ ಬಗ್ಗೆ ಕಸ್ತೂರಬಾ ಅವರು ಸಾರ್ವಜನಿಕವಾಗಿ ಮೌನವಹಿಸಿದ್ದರು. ಕಸ್ತೂರಬಾ ಅವರ ಬಗ್ಗೆ ಗಾಂಧೀಯವರಿಗೆ ಗೌರವವಿತ್ತು. ಆದಾಗ್ಯೂ ಗಾಂಧೀಯವರು ತಮ್ಮ ಸಂಬಂಧಗಳ ಬಗ್ಗೆ ಹೇಳಿಕೊಂಡಿರುವುದು ಮೇಲಿನ ಮಾತಿಗೆ ಸಾಕ್ಷಿಯಾಗಿದೆ.

ಎಲ್ಲ ಬಗೆಯ ಲೈಂಗಿಕ ಸಂಪರ್ಕವನ್ನು ತ್ಯಜಿಸುವ ಏಕಪಕ್ಷೀಯ ನಿರ್ಣಯವಾಗಲಿ, ಪ್ರತ್ಯೇಕ ಮನೆಯಲ್ಲಿ ವಾಸಮಾಡುವ ಬದಲು ಸಾಮೂಹಿಕವಾದ ಆಶ್ರಮ ಜೀವನ ನಡೆಸುವ ತೀರ್ಮಾನವಾಗಲಿ, ತನ್ನೊಂದಿಗೆ ಕಸ್ತೂರಬಾ ಕೂಡ ಶೌಚಾಲಯವನ್ನು ಸ್ವಚ್ಛಗೊಳಿಸ ಬೇಕೆಂಬ ಒತ್ತಾಯವಾಗಲಿ – ಹೀಗೆ ಪ್ರತಿಯೊಂದು ವಿಷಯದಲ್ಲೂ ಗಾಂಧೀಯವರೇ ನಿರ್ಧಾರ ಕೈಗೊಳ್ಳುತ್ತಿದ್ದರು; ಕಸ್ತೂರಬಾ ಸಮ್ಮತಿಸುತ್ತಿದ್ದರು. ಈ ಎಲ್ಲ ವಿಷಯಗಳ ಬಗೆಗೆ ಕಸ್ತೂರಬಾ ಅವರಿಗೆ ಮನವರಿಕೆಯಾಗಿದೆಯೋ ಇಲ್ಲವೋ ಎಂಬುದನ್ನು ಅವರು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ತನ್ನ ಅಭಿಪ್ರಾಯವನ್ನು ಕಸ್ತೂರಬಾ ಅವರ ಮೇಲೆ ಹೇರುವ ಹಕ್ಕಿನ ಬಗ್ಗೆ ಗಾಂಧೀಯವರು ತನ್ನನ್ನೆಂದೂ ಪ್ರಶ್ನಿಸಿಕೊಳ್ಳಲಿಲ್ಲ. ಏಕೆಂದರೆ "ಘನವಾದ ಧ್ಯೇಯಾ ದರ್ಶಗಳ" ಸಾಧನೆಗಾಗಿ ಕಸ್ತೂರಬಾ ಏನು ಮಾಡಬೇಕೆಂಬ ಬಗ್ಗೆ ತಾನೇ ನಿರ್ಧರಿಸಬಹುದೆಂಬ ವಿಶ್ವಾಸವನ್ನು ಅವರು ತಳೆದಿದ್ದರು. ಅವರು ಕಾರ್ಯನಿರ್ವಹಿಸಿದ ಚೌಕಟ್ಟಿನಲ್ಲಿ ಸ್ವಾರ್ಥಪರ ಉದ್ದೇಶಗಳಿ ಗಾಗಿ ಅಧಿಕಾರ ದುರುಪಯೋಗ ಮಾಡಿದರೂ ಅವರನ್ನು ರಕ್ಷಿಸುವ

ಸಾಧನಗಳಿದ್ದವು. ಆದರೆ ಕಾರ್ಯನಿರ್ವಹಣೆಯ ರೀತಿಯನ್ನು ಗಮನಿಸಿದರೆ, ಅನೇಕ ಕುಟುಂಬಗಳಲ್ಲಿ ಇಂದಿಗೂ ನಾವು ಕಾಣುವ ಸ್ತ್ರೀ–ಪುರುಷ, ತರುಣ–ವೃದ್ಧರ ನಡುವಣ ಶ್ರೇಣೀಕೃತ ಅಧಿಕಾರ ತಾರತಮ್ಯಕ್ಕೆ ಅದು ಯಾವುದೇ ಬದಲಿ ಪರಿಹಾರವನ್ನು ಸೂಚಿಸಿದ್ದು ಕಾಣುವುದಿಲ್ಲ. ಕೆಲವೊಮ್ಮೆ 'ತಿಕ್ಕಲುತನ' ಹಾಗೂ ಲೈಂಗಿಕ ವಿಕೃತಿಯ ಅಂಚನ್ನು ಮುಟ್ಟಬಹುದಾದರೂ, ಲೈಂಗಿಕ ನಿಯಂತ್ರಣ ಕುರಿತಾದ ಗಾಂಧೀಯವರ ಪ್ರಯೋಗಗಳು ಹಾಗೂ "ಅತಿ ಗೀಳನ್ನು" ಕೇವಲ ವ್ಯಕ್ತಿಗತ ವಿಲಕ್ಷಣತೆಯ ಫಲವೆಂದು ನಾವು ತಳ್ಳಿಹಾಕುವಂತಿಲ್ಲ. ಅವರ 'ಆತ್ಮನಿಗ್ರಹ' ಮತ್ತು 'ಬ್ರಹ್ಮಚರ್ಯ'ದ ಕಲ್ಪನೆ ನೈತಿಕತೆಯ ಲೇಪವುಳ್ಳ ಜೀವವಿರೋಧಿ ವೈರಾಗ್ಯದ ಟೊಳ್ಳು ನುಡಿಗಳಲ್ಲ. ಪ್ರತಿಗಾಮಿಯಾದ ನೀತಿವಾದಿಯೊಬ್ಬನ ಕೈಯಲ್ಲಿ ಲೈಂಗಿಕ ನಿಗ್ರಹವು ದಮನಕಾರಿ ಹಾಗೂ ಜೀವವಿರೋಧಿ ಸಿದ್ಧಾಂತವಾಗಿ ಮಾರ್ಪಡುತ್ತದೆ. ಆದರೆ ಗಾಂಧೀಯವರು ತಮ್ಮ ಲೈಂಗಿಕ ಶಕ್ತಿಯನ್ನು ಅತ್ಯಂತ ಪ್ರಬಲವಾದ ಆಧುನಿಕ ರಾಜಕೀಯ ಅಸ್ತ್ರವಾದ 'ಸತ್ಯಾಗ್ರಹ'ವನ್ನಾಗಿ ಪರಿವರ್ತಿಸಲು ಅಕ್ಷರಶಃ ಪ್ರಯತ್ನಿಸಿದರು.

ಅವರು ಸಾಮಾಜಿಕ ಪರಿವರ್ತನೆ ಹಾಗೂ ಹೊಸ ಬಗೆಯ ಸ್ತ್ರೀ ಪುರುಷ ಸಂಬಂಧಗಳ ಅಂಗವಾಗಿಯೂ ಈ ಪ್ರಯೋಗಗಳನ್ನು ಮಾಡಿದರು. ಲೈಂಗಿಕ ಸಮಸ್ಯೆಗಳ ಬಗೆಗೆ ಅನೇಕ ಪತ್ರಗಳು ಬರುತ್ತಿದ್ದುದರಿಂದ ಅವರು 'ಹರಿಜನ' ಪತ್ರಿಕೆಯಲ್ಲಿ ಒಂದು ಅಂಕಣವನ್ನೇ ಆರಂಭಿಸಿ ಈ ಸಮಸ್ಯೆಗಳನ್ನು ಚರ್ಚಿಸಿದರು. ಪುರುಷರನ್ನು ದೃಷ್ಟಿಯಲ್ಲಿಟ್ಟುಕೊಂಡೇ ಅವರು ಇಂದ್ರಿಯ ನಿಗ್ರಹವನ್ನು ಪ್ರತಿಪಾದಿಸಿದರೆಂಬುದು ಗಮನಾರ್ಹ. ಪುರುಷನ ಲೈಂಗಿಕತೆಯು ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಹಾಗೂ ಅಪಮಾನಕ್ಕೆ ಸಂವಾದಿ ಎಂದು ಅವರು ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ಮಹಿಳೆಯರು ಬಹುತೇಕ ಪುರುಷರ ಲೈಂಗಿಕ ಪ್ರವೃತ್ತಿಗಳನ್ನು ಅನುಸರಿಸಬೇಕಾದ

ನಿಷ್ಕ್ರಿಯ ವಸ್ತುಗಳು.

ಲೈಂಗಿಕ ನಿಯಂತ್ರಣ ಕುರಿತಾದ ಅವರ ವಿಚಾರಗಳಿಂದಾಗಿ ಮಹಿಳೆಯರು ತಮ್ಮ ಮನೆಗಳಿಂದ ಹೊರಬಂದು ಸಾಮಾಜಿಕ ರಾಜಕೀಯ ಸಂಘರ್ಷಗಳಲ್ಲಿ ಪಾಲ್ಗೊಳ್ಳುವ, ಭಯಭೀತಿ–ಅಪಮಾನ ಹಾಗೂ ಶೋಷಣೆ ರಹಿತವಾದ, ಬದುಕಲು ಯೋಗ್ಯವಾದ ಒಂದು ವಾತಾವರಣ ನಿರ್ಮಾಣವಾಯಿತು. ಗಾಂಧೀಯವರು ಬ್ರಹ್ಮಚರ್ಯ ವನ್ನು ಉನ್ನತ ಆದರ್ಶವೆಂದು ಎತ್ತಿಹಿಡಿದದ್ದರಿಂದಾಗಿ ಅನೇಕ ಮಹಿಳೆಯರು ಈ ಸಮಾಜದಲ್ಲಿ ಅವಿವಾಹಿತರಾಗಿ ಗೌರವದಿಂದ ಬದುಕಲು ಸಾಧ್ಯವಾಯಿತು. ಮೀರಾಬಾಯಿಯು ಮದುವೆಯನ್ನು ಧಿಕ್ಕರಿಸಿ ಹೊಸ ಧಾರ್ಮಿಕ ಪಂಥವನ್ನು ಅಂಗೀಕರಿಸಿದಂತೆ ರಾಷ್ಟ್ರೀಯ ಅಂದೋಳನದ ಸಂದರ್ಭದಲ್ಲಿ ಹಲವಾರು ಮಹಿಳೆಯರು ಗಾಂಧೀ ಯವರ ನಿರಂತರ ಪ್ರೋತ್ಸಾಹದ ಫಲವಾಗಿ ಅವಿವಾಹಿತರಾಗಿಯೇ ಉಳಿಯಲು ನಿಶ್ಚಯಿಸಿದರು.

ಗಾಂಧೀಯವರು ತಾವು ಪ್ರತಿಪಾದಿಸಿದ ಆದರ್ಶ ಸ್ತ್ರೀ ಪುರುಷ ಸಂಬಂಧಗಳನ್ನು ಆಶ್ರಮದಲ್ಲಿ ಮಾತ್ರವಲ್ಲದೆ ಒಟ್ಟು ರಾಷ್ಟ್ರೀಯ ಅಂದೋಳನದಲ್ಲೂ ಜಾರಿಗೆ ತರಲು ಯತ್ನಿಸಿದರು. ಆಶ್ರಮವಾಸಿ ಗಳನ್ನು ಸೋದರ ಸೋದರಿಯರೆಂಬ ಭಾವದಿಂದ ಪ್ರೀತಿಸಬೇಕೆಂಬ ಅವರ ಕಳಕಳಿಯು ಸ್ತ್ರೀ ಪುರುಷರ ನಡುವೆ 'ಮುಕ್ತ'ವಾದ ವಿಚಾರ ವಿನಿಮಯಕ್ಕೆ ಎಡೆಮಾಡಿಕೊಟ್ಟಿತು. ಆಶ್ರಮ ಜೀವನದ ಸುಧಾರಣೆ ಗಾಗಿ ಅವರು ಮಾಡಿರುವ ಪ್ರಯತ್ನಗಳು ಇದಕ್ಕೆ ಸಾಕ್ಷಿಯಾಗಿವೆ. "ನನ್ನ ಬ್ರಹ್ಮಚರ್ಯದ ಆಚರಣೆಗೆ ಕರ್ಮಠವಾದ ಸನಾತನ ನಿಯಮ ಗಳೇನೂ ಇಲ್ಲ. ಸಂದರ್ಭಕ್ಕೆ ತಕ್ಕಂತೆ ನಾನು ನನ್ನದೇ ಆದ ನಿಯಮ ಗಳನ್ನು ರೂಪಿಸಿಕೊಂಡಿದ್ದೇನೆ. ಆದರೆ ಬ್ರಹ್ಮಚರ್ಯದ ಅನುಷ್ಠಾನ ಕ್ಕಾಗಿ ಸ್ತ್ರೀಯರೊಡನೆ ಎಲ್ಲ ಬಗೆಯ ಸಂಪರ್ಕಗಳನ್ನು ಕಳಚಿಕೊಂಡು ಬಿಡಬೇಕೆಂದು ನಾನೆಂದೂ ಭಾವಿಸಿಲ್ಲ. ಈ ಎಲ್ಲ ರೀತಿಯ ಸಂಪರ್ಕ

ಗಳನ್ನು ಕಡಿದುಕೊಳ್ಳಬೇಕೆಂದು ಬಯಸುವ ನಿಗ್ರಹವು ಅದೆಷ್ಟೇ ಮುಗ್ಧವಾದುದಾದರೂ, ಹೇರಲ್ಪಟ್ಟದ್ದಾಗಿದ್ದು ಅದಕ್ಕೆ ಯಾವುದೇ ಬೆಲೆಯಿಲ್ಲ .... ನಾನು ಆಶ್ರಮದಲ್ಲಿ ಸ್ತ್ರೀಯರ ನಡುವೆಯೇ ಮಲಗುತ್ತೇನೆ. ಏಕೆಂದರೆ ಅವರು ನನ್ನ ಜೊತೆಗಿದ್ದಾಗ ತಾವು ಸುರಕ್ಷಿತವಾಗಿದ್ದೇವೆಂದು ಭಾವಿಸುತ್ತಾರೆ. ಸೇವಾಗ್ರಾಮ ಆಶ್ರಮದಲ್ಲಿ ಯಾವುದೇ ಬಗೆಯ ಖಾಸಗಿತನಕ್ಕೆ ಅವಕಾಶವಿರಲಿಲ್ಲ ಎಂಬುದನ್ನಿಲ್ಲಿ ಸ್ಮರಿಸಿಕೊಳ್ಳಬೇಕು". ಕೆಲವೊಮ್ಮೆ ಸ್ನಾನಮಗ್ನರಾದ ಗಾಂಧೀಯವರು ತರುಣಿಯರು ತಮ್ಮ ಮೈತಿಕ್ಕುತ್ತಿದರೂ ಸಂದರ್ಶಕರನ್ನು ಬರಮಾಡಿಕೊಂಡದ್ದುಂಟು. ಸ್ವತಃ ಕನಿಷ್ಠ ಪ್ರಮಾಣದಲ್ಲಿ ಉಡುಪುಗಳನ್ನು ಧರಿಸುತ್ತಿದ್ದ ಅವರು, ಸ್ತ್ರೀಯರು ಮೈ ತುಂಬ ಹೊದ್ದುಕೊಳ್ಳುವುದನ್ನು, ಹುಸಿ ಲಜ್ಜೆಯನ್ನು ಕಟುವಾಗಿ ಟೀಕಿಸುತ್ತಿದ್ದರು. "ಗಂಡಸರ ನೆಟ್ಟ ನೋಟವನ್ನು ಸಹಿಸಲಾರದ ಲಜ್ಜೆಯು ಕರುಣಾಜನಕ". ಆದ್ದರಿಂದ ಅವರು "ಪರ್ದಾ ಅಥವಾ ಜವನಿಕೆಯನ್ನು ಕಿತ್ತೊಗೆಯುವಂತೆ" ಮಹಿಳೆಯರಿಗೆ ಕರೆನೀಡಿದರು.

ಬ್ರಹ್ಮಚರ್ಯವು ಆತ್ಮಸಾಕ್ಷಾತ್ಕಾರದ ಸಾಧನವೆಂದು ಸಾರಿದ್ದು ಮಾತ್ರವಲ್ಲದೆ ಅದನ್ನು ಅನಷ್ಠಾನಕ್ಕೆ ತಂದ ಸಾಧುಸಂತರಿಗಿಂತ ಗಾಂಧೀಯವರ ಬ್ರಹ್ಮಚರ್ಯದ ಕಲ್ಪನೆ ಭಿನ್ನವಾಗಿದೆ. ಪ್ರಾಚೀನ ಸಂತ ಪರಂಪರೆಯ ಪ್ರಕಾರ ಸ್ತ್ರೀಯು ಕಾಮ ಪ್ರಚೋದನೆಯ ಸಾಕಾರ ಮೂರ್ತಿ; ತಪಶ್ಚರ್ಯೆಯಲ್ಲಿ ನಿರತರಾದ ಸಂತರನ್ನು ಪತಿತಗೊಳಿಸುವವಳು ಎಂದು ಭಾವಿಸಲಾಗಿತ್ತು. ಆದ್ದರಿಂದ ಬ್ರಹ್ಮಚರ್ಯದ ದೀಕ್ಷೆತೊಟ್ಟ ತಪಸ್ವಿಯು ಸ್ತ್ರೀಯರಿಂದ ಆದಷ್ಟು ದೂರವಿರಬೇಕೆಂದು ಎಚ್ಚರಿಸಲಾಗುತ್ತಿತ್ತು. ಇವರಲ್ಲಿ ಅನೇಕರು ತಮ್ಮ ತಪಸ್ಸಿಗೆ ಭಂಗ ಬರುವುದೆಂಬ ಭಯದಿಂದ ಸ್ತ್ರೀಯರನ್ನು ಕಣ್ಣೆತ್ತಿಯೂ ನೋಡುವುದಿಲ್ಲವೆಂಬ ಹಾಸ್ಯಾಸ್ಪದ ಪ್ರತಿಜ್ಞೆ ಮಾಡುತ್ತಿದ್ದರು. ಕಾಮ ಹಾಗೂ ಲೈಂಗಿಕ ಪ್ರಚೋದನೆಯ ವಿಚಾರದಲ್ಲಿ

ಗಾಂಧೀಯವರು ಹೆಚ್ಚು ತಾರ್ಕಿಕವಾದ ನಿಲುವೊಂದನ್ನು ತಳೆದಿದ್ದರು. ಅವರು ಕಾಮುಕ ಕಣ್ಣನ್ನು ದೂಷಿಸಿದರೇ ಹೊರತು ಕಣ್ಣಿಂದ ನೋಡುವ ವಸ್ತುವನ್ನಲ್ಲ. ಲೈಂಗಿಕತೆಯ ಬಗೆಗಿನ ಅವರ ಬರಹ ಗಳು ಕ್ರಿಶ್ಚಿಯನ್, ಹಿಂದೂ ಹಾಗೂ ಮುಸ್ಲಿಂ ಸಂತ ಪರಂಪರೆಯ ನೀತಿಶಾಸ್ತ್ರ ಮತ್ತು ಪುರಾಣ ಕಥೆಗಳಲ್ಲಿ ಕಂಡುಬರುವ ಸ್ತ್ರೀ ದ್ವೇಷ ದಿಂದ ಮುಕ್ತವಾಗಿವೆ. ಒಟ್ಟಿನಲ್ಲಿ ಗಾಂಧೀಯವರು ಪುರುಷನನ್ನು ಕಾಮುಕತೆಯ ಕಾರಣಪುರುಷನೆಂದೂ, ಸ್ತ್ರೀಯರನ್ನು ಪುರುಷನ ಕಾಮುಕತೆಯ ಬಲಿಪಶುವೆಂದೂ ಬಗೆದರು. ಮಹಿಳೆಯು ದುಷ್ಟತನ ದಿಂದ ಕೂಡಿದ ಕಾಮುಕತೆಯ ಸಾಕಾರಮೂರ್ತಿಯಲ್ಲ; ಅಂಥ ಮನೋಭಾವವನ್ನು ತೊಡೆದುಹಾಕಲು ಸಾಧ್ಯ ಎಂಬುದನ್ನು ಗಾಂಧೀ ಯವರ ಆಶ್ರಮ ಜೀವನ ಸಾರುತ್ತದೆ. ಆಶ್ರಮದಲ್ಲಿ ಯಾವುದೇ ಪ್ರತ್ಯೇಕತೆಯಿರಲಿಲ್ಲ. ಸ್ತ್ರೀ ಪುರುಷರು ಒಟ್ಟಿಗೆ ಊಟ ಮಾಡು ತ್ತಿದ್ದರು. ಒಟ್ಟಿಗೆ ಮಲಗುತ್ತಿದ್ದರು ಹಾಗೂ ಒಟ್ಟಿಗೆ ದುಡಿಯು ತ್ತಿದ್ದರು. ಗಾಂಧೀಯವರಿಂದ ಪ್ರೇರಣೆ ಪಡೆದ ಆಶ್ರಮವಾಸಿಗಳು ಯಾರಾದರೂ ಕಾಯಿಲೆ ಬಿದ್ದಾಗ ಸ್ತ್ರೀ ಪುರುಷರೆಂಬ ಭೇದ ತೋರದೆ ನಿರ್ಭಿಡೆಯಿಂದ ಉಪಚರಿಸುತ್ತಿದ್ದರು. ಗಂಡೋ ಹೆಣ್ಣೋ ಎಂಬ ಬಗ್ಗೆ ತಲೆಕೆಡಿಸಿಕೊಳ್ಳದೆ ಸಮಾನ ದುಡಿಮೆ ಹಾಗೂ ಆದರ್ಶದ ತಳಹದಿಯ ಮೇಲೆ ಸ್ತ್ರೀ ಪುರುಷರ ಸಂಬಂಧವು ರೂಪುಗೊಳ್ಳ ಬೇಕಾಗಿದ್ದಿತು. ಆದ್ದರಿಂದಲೆ ಇದೊಂದು ನವೀನ ಕಲ್ಪನೆ ಮತ್ತು ಕ್ರಾಂತಿಕಾರಿ ಪ್ರಯೋಗ.

ಎಲ್ಲಕ್ಕೂ ಮಿಗಿಲಾಗಿ ಆಗಿನ ಸಾಮಾಜಿಕ ಸಂದರ್ಭದಲ್ಲಿ ಬ್ರಹ್ಮ ಚರ್ಯವು ಸ್ತ್ರೀಯರನ್ನು ಬಿಡುಗಡೆಗೊಳಿಸುವ ಒಂದು ಶಕ್ತಿಯಾಗಿ ಪರಿಣಮಿಸಿತು. ಆಗಿನ ಸಂದರ್ಭದಲ್ಲಿ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಯಥಾಶಕ್ತಿ ಪಾಲ್ಗೊಳ್ಳ ಬಯಸುವ ಸ್ತ್ರೀಯನ್ನು ಅವಳ ಮನೆವಾರ್ತೆಯ ಯಾಂತ್ರಿಕತೆ ಹಾಗೂ ಮಕ್ಕಳನ್ನು ಸಾಕುವ

ಭಾರದಿಂದ ಬಿಡುಗಡೆಗೊಳಿಸಲು ಇದ್ದ ಮಾರ್ಗ ಪ್ರಾಯಃ ಇದೊಂದೇ. ದಂಪತಿಗಳು ಕೂಡ ಬ್ರಹ್ಮಚರ್ಯವನ್ನು ಪಾಲಿಸಿ ತಮ್ಮ ಶಕ್ತಿ ಸಾಮರ್ಥ್ಯ ವನ್ನು ರಚನಾತ್ಮಕ ಕೆಲಸಗಳಿಗಾಗಿ ವಿನಿಯೋಗಿಸಬೇಕೆಂದು ಕರೆನೀಡ ಲಾಗಿತ್ತು. ಆದರೂ ಗಾಂಧೀಯವರು ಮಹಿಳೆಯರಿಗಿಂತಲೂ ಹೆಚ್ಚಾಗಿ ಪುರುಷರೇ ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಪಾಲಿಸ ಬೇಕೆಂದು ಸೂಚಿಸಿದರು. ಬ್ರಹ್ಮಚರ್ಯವನ್ನು ಜೀವನ ವಿಧಾನವನ್ನಾಗಿ ಮಾಡಿಕೊಳ್ಳುವ ಈ ಪ್ರಯೋಗಗಳು ವಿರುದ್ಧ ಲಿಂಗದ ಜೊತೆ ಆರೋಗ್ಯಕರ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುವ ಮತ್ತು ಲಿಂಗದ ಆಧಾರದ ಮೇಲೆ ಸಿದ್ಧವಾಗಿರುವ ಅಧಿಕಾರದ ಚೌಕಟ್ಟಿನಿಂದ ದೂರ ಸರಿಯುವ ದೊಡ್ಡ ಮಟ್ಟದ ಪ್ರಯತ್ನಗಳಾಗಿದ್ದವು.

ಹಳೆಯ ಭಾರತೀಯ ಸಂಪ್ರದಾಯದ ಒಂದು ಭಾಗವಾಗಿ ಈ ಬ್ರಹ್ಮಚರ್ಯದ ಪ್ರಯೋಗಗಳನ್ನು ನಾವು ನೋಡಬೇಕು. ಏಕೆಂದರೆ ಭಾರತೀಯ ಸಂಪ್ರದಾಯದಲ್ಲಿ ಅನೇಕ ವರ್ಷಗಳ ನಿರಂತರ 'ತಪಸ್ಸಿನ' ಫಲವಾಗಿ ಸಾಧುಸಂತರು, ಋಷಿಗಳು ಅಸಾಧಾರಣವಾದ ಶಕ್ತಿ ಯನ್ನು ಸಂಪಾದಿಸುತ್ತಿದ್ದರಂತೆ. ಗಾಂಧೀಯವರ ಬ್ರಹ್ಮಚರ್ಯವು ಈ ದೊಡ್ಡ ತಪಸ್ಸಿನ ಭಾಗವಾಗಿದ್ದು, ಈ ತಪಸ್ಸಿನ ಮೂಲಕ ಒಂದು ಉನ್ನತ ಉದ್ದೇಶಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ಶಿಸ್ತನ್ನು ಕಲಿತರು. ಅವರ ವ್ರತಸದೃಶ ಸರಳತೆ, ವಿವಿಧ ಬಗೆಯ ಆಹಾರ ಸಂಬಂಧದ ಪ್ರಯೋಗಗಳು ಮತ್ತು ಉಪವಾಸಗಳು, ಮೌನ ವ್ರತಗಳು, ಒಂದು ತುಂಡು ಬಟ್ಟೆ ಧರಿಸಿ ಇಡಿ ಮೈ ಬಿಟ್ಟುಕೊಂಡಿರು ವುದು, ತೀರ ಸಾಮಾನ್ಯರು ಹಾಗೂ ಬಡವರಂತೆ ಕಾಲ್ನಡಿಗೆಯಲ್ಲೇ ಬಹು ದೂರ ಸಾಗುವುದು – ಇವೆಲ್ಲ ಅವರ ಕಠೋರವಾದ ತಪಸ್ಸಿನ ಮುಖ್ಯಾಂಶಗಳು. ಇವುಗಳಲ್ಲಿ ಬಹಳಷ್ಟು ಅಂಶಗಳು ಗಾಂಧೀಯವ ರಿಗೆ ಬಹಳ ಸುಲಭವಾಗಿ ಮತ್ತು ಸ್ವಾಭಾವಿಕವಾಗಿ ಕರಗತವಾಗಿದ್ದವು. ಆದರೂ ಲೈಂಗಿಕ ಅಶಾಂತಿ ಅವರನ್ನು ಕೊನೆಯವರೆಗೂ ಕಾಡಿರ

ಬೇಕು. ತಪಸ್ಸಿನ ಮೂಲಕ ಅಸಾಧಾರಣವಾದ ಶಕ್ತಿ ಗಳಿಸಿದ, ಆದರೆ ವಿಷಯ ಪ್ರಲೋಭನೆಗಳನ್ನು ಮೀರಲಾರದೆ ಆರ್ಜಿಸಿದ ಶಕ್ತಿಯೆಲ್ಲವನ್ನು ಕಳೆದುಕೊಂಡ ಪ್ರಮುಖ ಋಷಿಮುನಿಗಳಿಗೆ ತಾವು ಸಮಾನರೆಂದು ಅವರು ಭಾವಿಸಿದ್ದರೆ? ಗಾಂಧೀಯವರು ಉದ್ದೇಶಪೂರ್ವಕವಾಗಿ ಪ್ರಲೋಭನೆಗಳ ನಡುವೆ ಬದುಕಿದರು. ಅವರ ಸುತ್ತ ಸದಾ ಹರೆಯದ ಹುಡುಗಿಯರು ಮೈಗೆ ಅಂಟಿಕೊಂಡುತಿದ್ದರು. ಗಾಂಧೀಯವರು ತಮ್ಮ ಬದುಕಿನ ಕಡೆಯ ದಿನಗಳಲ್ಲಿ ಗಂಭೀರವಾದ ರಾಜಕೀಯ ಮತ್ತು ನೈತಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದಾಗಲೂ ಹೆಚ್ಚುಹೆಚ್ಚು ಅತ್ಯಂತಿಕ ವಿಧಾನಗಳ ಮೂಲಕ ತಮ್ಮನ್ನು ಪರೀಕ್ಷೆಗೆ ಒಡ್ಡಿ ಕೊಳ್ಳುತ್ತಿದ್ದರು,

ಪ್ರತಿಯೊಬ್ಬನೂ ಇನ್ನೊಬ್ಬನಿಗೆ ಜವಾಬ್ದಾರನೆಂಬ ಅಭಿಪ್ರಾಯವು ಅವರ ಜೀವನದ ಸಿದ್ಧಾಂತ ಮತ್ತು ದೃಷ್ಟಿಕೋನದ ಮೂಲಭೂತ ಅಂಗವಾಗಿದೆ. 'ಸತ್ಯಾಗ್ರಹಿ'ಯಾಗಿ ಸಂಪೂರ್ಣ ಪರಿವರ್ತನೆಗೊಂಡ ಒಬ್ಬ ಕಾರ್ಯಕರ್ತನ ಅಧ್ಯಾತ್ಮಿಕ ಶಕ್ತಿಯು ಜಗತ್ತಿನ ಎಲ್ಲ ದೋಷಗಳನ್ನೂ ಸರಿಪಡಿಸಬಲ್ಲದೆಂದು ಅವರು ನಂಬಿದ್ದರು. ಅವರ ಬದುಕಿನ ಕೊನೆಯ ದಿನಗಳಲ್ಲಿ ಅನೇಕ ವಿಚಾರಗಳಲ್ಲಿ ಪರಿಸ್ಥಿತಿ ಪೂರ್ಣ ಹದಗೆಟ್ಟಿತ್ತೆಂಬುದು ಸ್ಪಷ್ಟ. ಅವರು ಮತ್ತು ಅವರ ಕನಸಿನ ಭಾರತ ಮೂಲೆ ಪಾಲಾಗಿತ್ತು. ಕೋಮು ಗಲಭೆಗಳಲ್ಲಿ ಮೀಲಿಯುಗಟ್ಟಲೆ ಜನರ ಕಗ್ಗೊಲೆಯಾಯಿತು. ಕಾಂಗ್ರೆಸ್ ಪಕ್ಷವು ಭಾರತದ ಪುನರ್ನಿರ್ಮಾಣದ ಶಕ್ತಿಯಾಗಿ ಅಧಿಕಾರ ಸ್ವೀಕರಿಸುವ ಬದಲು, ಬ್ರಿಟಿಷ್ ರಾಜನ ಉತ್ತರಾಧಿಕಾರಿಯಾಗಿ ಅಧಿಕಾರ ಸ್ವೀಕರಿಸುವ ಹಂತದಲ್ಲಿತ್ತು. ದಿನಗಳು ಸರಿದಂತೆ ತನ್ನ ಆದರ್ಶಗಳು ಮತ್ತು ಆಕಾಂಕ್ಷೆಗಳು ಏಕೆ ಗೋಜಲು ಗೋಜಲಾಗುತ್ತಿವೆ ಎಂಬ ಬಗ್ಗೆ ಅವರು ವಿವರಣೆ ಬಯಸಿದರು. ನೂರು ವರ್ಷ ಬದುಕಬೇಕೆಂಬ ತಮ್ಮ ಆಸೆಯ ಬಗ್ಗೆ ಮಾತನಾಡುವುದನ್ನೇ ನಿಲ್ಲಿಸಿದ ಅವರು ತಾನಿನ್ನೂ ಏಕೆ

ಬದುಕಿರಬೇಕೆಂಬ ವಿಷಾದ ವ್ಯಕ್ತಪಡಿಸತೊಡಗಿದರು. ವೈಯಕ್ತಿಕ ಪರಿಶುದ್ಧತೆ ಮತ್ತು ಸತ್ಯ ಹಾಗೂ ನಿರ್ಭೀತಿಯ ಬಲದ ನಡುವೆ ನಿಕಟ ಸಂಬಂಧವಿದೆ ಎಂದು ಬಲವಾಗಿ ನಂಬಿದ್ದ ಗಾಂಧೀಯವರಿಗೆ ತಮ್ಮ ಕಣ್ಮುಂದೆ ನಡೆಯುತ್ತಿರುವ ದುರಂತಗಳಿಗೆ ವಿವರಣೆ ಅಗತ್ಯವಾಗಿತ್ತು.

ನಿರಂತರವಾಗಿ ತಮ್ಮನ್ನು ಕಾಡುತ್ತಿದ್ದ ಈ ಚಿಂತೆಯ ಫಲವಾಗಿ ಅವರು ಸತ್ಯದೊಂದಿಗೆ ತಮ್ಮ ಅಂತಿಮವಾದ ಅತ್ಯಂತ ಪ್ರಾಮಾಣಿಕ ಪ್ರಯೋಗಗಳನ್ನು ನಡೆಸಿದರು. ತನ್ನ ಬದ್ಧತೆಯಲ್ಲಿ, ಕಳಕಳಿಯಲ್ಲಿ ಏನೋ ವಂಚನೆ, ದೋಷವಿದೆ ಮತ್ತು ಈ ದೋಷವೇ ಎಲ್ಲ ದುರಂತಗಳಿಗೆ ಕಾರಣವಿರಬೇಕು ಎಂದು ಅವರು ಬಗೆದರು. ನಡೆನುಡಿಯಲ್ಲಿ ಸಾಮರಸ್ಯವಿರಬೇಕೆಂಬ ವಿಷಯದಲ್ಲಿ ಅವರಿಗೆ ಗಾಢವಾದ ಶ್ರದ್ಧೆಯಿತ್ತು. ಈ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡಿದರೆ ತಮ್ಮ ಕಾಮನೆಗಳು ಗತಕಾಲದ ಸಂಗತಿಗಳು ಎಂಬ ಬಗ್ಗೆ ಅವರಿಗೆ ನಿಜವಾಗಿಯೂ ಭರವಸೆ ಇತ್ತೇ? ಸಮಾನ ಉದ್ದೇಶ ಸಾಧನೆಗಾಗಿ ಒಟ್ಟುಗೂಡಿದ, ತನಗೆ ನಿಕಟವಾಗಿದ್ದ ಮಹಿಳೆಯರನ್ನು ಅವರು ನಿಜಕ್ಕೂ ತಮ್ಮ ಹೆಣ್ಣುಮಕ್ಕಳು ಅಥವಾ ಸೋದರಿಯರೆಂದು ಭಾವಿಸುತ್ತಿದ್ದರೆ? ಈ ಬಗ್ಗೆ ಅವರಿಗೆ ತಮ್ಮಲ್ಲೇ ಭರವಸೆ ಇತ್ತೇ? ಗಾಂಧೀಯವರು ಎಂದಿನಂತೆ ಏನನ್ನೂ ಬಚ್ಚಿಡದೆ, ತಮ್ಮನ್ನು ತಾವು ಪರೀಕ್ಷೆಗೆ ಒಡ್ಡಿಕೊಂಡರು. ದಿನಹೋದಂತೆ ಹೆಚ್ಚುಹೆಚ್ಚು ಅಗ್ನಿಪರೀಕ್ಷೆಗೆ ಒಳಗಾದರು. ಅವರು ತಮ್ಮ ಚಿಕ್ಕಪ್ಪನ ಮೊಮ್ಮಗಳು ೧೯ ರ ಹರೆಯದ ಮನುಳ ಮೇಲೆ ತಮ್ಮ ಅಂತಿಮ ಪ್ರಯೋಗ ನಡೆಸಿದರು. ಅವರಿಬ್ಬರೂ ಮೈಮೇಲೆ ಒಂದಿಷ್ಟೂ ಬಟ್ಟೆ ಇಲ್ಲದೆ ಒಬ್ಬರನ್ನೊಬ್ಬರು ಅಪ್ಪಿಕೊಂಡು ಮಲಗಿದರು. ಹೀಗೆ, ಒಂದು ಕಾಲಕ್ಕೆ ಅದಮ್ಯವಾಗಿದ್ದ ಲೈಂಗಿಕ ಪ್ರವೃತ್ತಿಗಳು ತಮ್ಮಲ್ಲಿ ಈಗಲೂ ಉಳಿದಿವೆಯೋ ಎಂಬುದನ್ನು ಕಂಡುಕೊಳ್ಳಲು ಈ ಪ್ರಯೋಗದಿಂದ ಸಾಧ್ಯವೆಂದು

ಗಾಂಧೀಯವರು ಭಾವಿಸಿದ್ದರು.

ವೀರ್ಯನಾಶದಿಂದ ಪುರುಷರ ದೈವಿಕ ಹಾಗೂ ಆಧ್ಯಾತ್ಮಿಕ ಶಕ್ತಿ ನಷ್ಟವಾಗುವುದೆಂದು ಅವರು ನಂಬಿದ್ದರೆಂಬುದು ಗಮನಾರ್ಹ. ಸ್ತ್ರೀಯರನ್ನು ಕಂಡು ಕಾಮ ವಿಕಾರಕ್ಕೆ ಒಳಗಾಗುವುದು ಪಾಪಕರವಾದ್ದರಿಂದ ಸ್ತ್ರೀ ಸಂಗದಿಂದ ದೂರವಿದು ಅದನ್ನು ನಿಷೇಧಿಸುವುದು ಸರಿಯಲ್ಲ. ತನ್ನ ಇಂದ್ರಿಯಗಳನ್ನು ಸಂಪೂರ್ಣ ನಿಯಂತ್ರಿಸಿಕೊಂಡು ಈ ಕಾರ್ಯವನ್ನು ಸಾಧಿಸಬೇಕು. ಆತ್ಮ ಪರಿವರ್ತನೆಯ ಈ ಪ್ರಯತ್ನದಲ್ಲಿ ಉನ್ನತವಾದ ನೈತಿಕ ಹಾಗೂ ಆಧ್ಯಾತ್ಮಿಕ ಶಕ್ತಿಯನ್ನು ಗಳಿಸುವ ಮೂಲಕ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳುವ ಮನುಷ್ಯನಾಗಿ ಗಾಂಧೀಯವರು ತಮ್ಮ ಹೋರಾಟಗಳಿಗೆ ಹೆಚ್ಚು ಮಹತ್ವ ಕೊಟ್ಟಂತೆ ಕಾಣುತ್ತದೆ; ಆದರೆ ಅವರ ಪ್ರಯೋಗಗಳಲ್ಲಿ ಪಾಲ್ಗೊಂಡ ಸ್ತ್ರೀಯರ ಮೇಲೆ ಅವು ಎಂಥ ಪರಿಣಾಮ ಬೀರಬಹುದೆಂಬ ಬಗ್ಗೆ ಅವರು ಹೆಚ್ಚಿನ ಗಮನ ಹರಿಸಿದಂತಿಲ್ಲ. ಬ್ರಹ್ಮಚರ್ಯವನ್ನು ಕುರಿತು ಪ್ರಯೋಗಗಳನ್ನು ಆರಂಭಿಸಿದಾಗ ಕಸ್ತೂರಬಾರ ಅಭಿಪ್ರಾಯಗಳಿಗೆ ಹೇಗೆ ಗಮನ ಕೊಡಲಿಲ್ಲವೋ ಹಾಗೆಯೇ ಹತ್ತೊಂಬತ್ತರ ಹರೆಯದ ಮನುಳ ಮೇಲೆ ತನ್ನ ಪ್ರಯೋಗಗಳ ಸಂಭವನೀಯ ಪರಿಣಾಮವನ್ನು ಅವರು ಕಡೆಗಣಿಸಿದಂತಿತ್ತು.೧೬

ಕಾಮ ಹಾಗೂ ಇಂದ್ರಿಯ ಲೋಲುಪತೆಯ ಬಗ್ಗೆ ಗಾಂಧೀಯವರಲ್ಲಿದ್ದ ಜುಗುಪ್ಸೆಯಿಂದಾಗಿ ತಮ್ಮ ಉಸ್ತುವಾರಿಯಲ್ಲಿದ್ದ ಅನೇಕರ ಮೇಲೆ ಅವರು ಒಂದು ಬಗೆಯ ಆಂತರಿಕ ಕ್ರೌರ್ಯವನ್ನು ಪ್ರದರ್ಶಿಸುವಂತಾಯಿತು. ಗಾಂಧೀಯವರು ತಮ್ಮ ಆತ್ಮಕಥನದಲ್ಲಿ ನಿರೂಪಿಸಿರುವ ಕೆಲವು ಘಟನೆಗಳು ಅವರ ಕಠೋರ ಧರ್ಮನಿಷ್ಠೆಯಿಂದಾಗಿ ಮೂಡಿದ ಸ್ವೇಚ್ಛಾ ಪ್ರವೃತ್ತಿಯನ್ನು ಎತ್ತಿತೋರಿಸುತ್ತವೆ. ಉದಾಹರಣೆಗೆ, ಟಾಲ್‌ಸ್ಟಾಯ್ ಆಶ್ರಮದಲ್ಲಿ ತಮ್ಮ ಪ್ರಯೋಗದ ಅಂಗವಾಗಿ ಹದಿಹರೆಯದ ಹುಡುಗ ಹುಡುಗಿಯರಿಗೆ 'ಆತ್ಮ

ನಿಗ್ರಹ'ದ ಮಹತ್ವವನ್ನು ವಿವರಿಸಿದ ಬಳಿಕ ಅವರನ್ನು "ಏಕಕಾಲಕ್ಕೆ ಒಂದೇ ಸ್ಥಳದಲ್ಲಿ ಸ್ನಾನ ಮಾಡಲು" ಕಳುಹಿಸುತ್ತಿದ್ದರು. "ತಾಯಿಯು ಕಣ್ಣು ಮಗಳನ್ನು ಗಮನಿಸುವಂತೆ ನನ್ನ ಕಣ್ಣು ಹುಡುಗಿಯರನ್ನು ಗಮನಿಸುತ್ತಿತ್ತೆಂದು" ಗಾಂಧೀಯವರು ಹೇಳುತ್ತಾರೆ. ಒಂದು ದಿನ ಅವರಲ್ಲಿ ಒಬ್ಬ ಹುಡುಗ "ಇಬ್ಬರು ಹುಡುಗಿಯರನ್ನು ತಮಾಷೆ ಮಾಡಿದ"ನೆಂಬ ಸಂಗತಿ ಅವರ ಗಮನಕ್ಕೆ ಬಂತು. ಆಗ ಅವರು ಆ ಹುಡುಗಿಯರು ತಮ್ಮ ನೀಳವಾದ ಸುಂದರವಾದ ತಲೆಕೂದಲುಗಳನ್ನು ಕತ್ತರಿಸಿಕೊಳ್ಳುವ ಹಾಗೆ ಆಗ್ರಹಪಡಿಸುತ್ತಾರೆ. ಇದರಿಂದ "ಪಾಪಿಯ ಕಣ್ಣನ್ನು ನಿರ್ವೀರ್ಯಗೊಳಿಸುವ" ಶಕ್ತಿ ಅವರಲ್ಲಿಗುತ್ತದೆ ಎಂದು ಗಾಂಧೀ ಭಾವಿಸಿದರು. ಇದಾದ ಬಳಿಕ ಮುಂದೆಂದೂ ಇಂಥ ತಮಾಷೆ ನಡೆಯಲಿಲ್ಲವೆಂದು ಅವರು ಸಮಾಧಾನಪೂರ್ವಕವಾಗಿವರದಿ ಮಾಡುತ್ತಾರೆ. ಮುಂದೆ ಫೀನಿಕ್ಸ್ ಆಶ್ರಮದಲ್ಲೂ ೨೦ ರ ಹರೆಯದ ತರುಣಿಯೊಬ್ಬಳು ಇಬ್ಬರು ಹುಡುಗರೊಂದಿಗೆ ಅವ್ಯವಹಾರದಲ್ಲಿ ನಿರತಳಾದ್ದರಿಂದ ಅವಳ ತಲೆಕೂದಲನ್ನೂ ಕತ್ತರಿಸಲಾಯಿತು. ಅನಂತರ ಆಶ್ರಮ ಜೀವನಕ್ಕೆ ಮೀರಾಬೆನ್ ಒಗ್ಗಿಕೊಳ್ಳಬೇಕೆಂದು ಆಕೆಯ ತಲೆಕೂದಲನ್ನೂ ಕತ್ತರಿಸಲಾಯಿತು.

ವ್ಯಾಪಕವಾದ ಕೋಮು ಸಾಮರಸ್ಯ ಮತ್ತು ಉನ್ನತವಾದ ಆದರ್ಶ ಪರಿಪಾಲನೆಗಾಗಿ ಗಾಂಧೀಯವರು ಲೈಂಗಿಕ ಸಂಪರ್ಕವನ್ನು ತ್ಯಜಿಸಿದ್ದು ನಿಜವಾದರೂ ಅವರು 'ಸ್ತ್ರೀಯರು ಮಾಟಗಾತಿಯರು, ಶಿಕ್ಷಾರ್ಹರು' ಎಂಬ ವಿದ್ವೇಷದ ನಿಲುವನ್ನು ತಳೆದಿದ್ದರು ಎಂಬುದನ್ನು ಗಮನಿಸಬೇಕು. ಅವರ ಕ್ರಿಯೆಗಳಲ್ಲೂ ಈ ವಿಚಾರ ಪ್ರತಿಫಲಿತ ವಾಗಿದೆ. ಪುರುಷನ ವಿವೇಚನಾರಹಿತವಾದ ಕಾಮುಕತನದ ವಿರುದ್ಧ ಅವರು ಮಾಡಿದ ಖಂಡನೆಗಳಲ್ಲಿ ಮಾನವೀಯ ಅಂಶಗಳಿವೆಯಾದರೂ ವಿವಾಹ ಜೀವನದ ಹೊರಗೆ ಲೈಂಗಿಕ ಸಂಪರ್ಕಗಳ ಬಗೆಗೆ ಅವರು ಆಘಾತಕಾರಿ ಹೇಳಿಕೆಯನ್ನೂ ನೀಡಿದ್ದುಂಟು. ಅನಾಥಾಶ್ರಮಗಳ

ಕಾರ್ಯಚಟುವಟಿಕೆಯನ್ನು ವಿಮರ್ಶಿಸುತ್ತಾ ವಿವಾಹ ಜೀವನಕ್ಕೆ ಬಾಹಿರವಾಗಿ ಜನಿಸಿದ ಮಕ್ಕಳನ್ನು ದತ್ತು ಸ್ವೀಕರಿಸುವುದನ್ನು ಅವರು ಟೀಕಿಸಿದರು. "ಈ ಬಗೆಯಲ್ಲಿ ಮಕ್ಕಳನ್ನು ಸ್ವೀಕರಿಸುವ ವಿಚಾರ ನೈತಿಕವಾಗಿ ಎಷ್ಟು ಸರಿ ಎಂಬ ಬಗ್ಗೆ ನನಗಿನ್ನೂ ಸಮಾಧಾನಕರ ಉತ್ತರ ದೊರೆತಿಲ್ಲ. ಈ ರೀತಿಯ ಸೌಲಭ್ಯಗಳಿಂದಾಗಿ ಲೈಂಗಿಕ ಪಾಪಗಳು ಹೆಚ್ಚುತ್ತವೆಂಬ ಭಾವನೆ ನನ್ನಲ್ಲಿದೆ. ಒಂದು ಜೀವ ಹೇಗೆಯೇ ಜನಿಸಲಿ, ಅದರ ಪ್ರಾಣ ರಕ್ಷಣೆ ಮಾನವೀಯ ಕೃತ್ಯ ಎಂದು ಸಾಬೀತುಪಡಿಸಲಿಕ್ಕಾಗದು. ಇಂಥ ಪ್ರಯತ್ನಗಳು ವ್ಯರ್ಥ. ಮಾನವೀಯತೆ ಎಂದರೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಜೀವಿಗಳನ್ನು ರಕ್ಷಿಸುವುದಲ್ಲ. ಕೊಳಕು ಮಣ್ಣಿನಲ್ಲಿ ಅಸಂಖ್ಯಾತ ಕ್ರಿಮಿಗಳಿರುತ್ತವೆ. ಅಂಥ ಮಣ್ಣನ್ನು ಕಾಪಾಡುವುದು ಮಾನವೀಯತೆಯಲ್ಲ. ಅಂಥ ಮಣ್ಣಿನ ಮೇಲೆ ಮಣ್ಣು ಮುಚ್ಚುವುದು ಅಥವಾ ಅದನ್ನು ಹಾಳುಗೆಡಹುದು – ಹೀಗೆ ಮಾಡಿದಾಗ ಆ ಮಣ್ಣಿನಲ್ಲಿರುವ ಕ್ರಿಮಿಗಳು ಸತ್ತುಹೋದರೂ ಕೂಡ – ಅದು ಮಾನವೀಯತೆ. ನಮ್ಮ ಶರೀರವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಕ್ರಿಯೆಯಲ್ಲಿ ಅಸಂಖ್ಯಾತ ಕ್ರಿಮಿಗಳು ನಾಶವಾಗುತ್ತವೆ". ಆದ್ದರಿಂದ ಗಾಂಧೀಯವರ ದೃಷ್ಟಿಯಲ್ಲಿ ಮಾನವೀಯತೆಯು "ಈ ಬಗೆಯ ಮಕ್ಕಳ ಹೊರೆಯನು ಒಪ್ಪಿಕೊಳ್ಳುವ ಸಡಿಲ ನೀತಿಯನ್ನು ಪ್ರೋತ್ಸಾಹಿಸುವುದೂ ಇಲ್ಲ, ಸಮರ್ಥಿಸುವುದೂ ಇಲ್ಲ".

ಅಹಿಂಸಾನಿರತರಾದ ಗಾಂಧೀಯವರು ನ್ಯಾಯ.ಬಾಹಿರವಾಗಿ ಜನಿಸಿದ ಮುಗ್ಧ ಮಕ್ಕಳು 'ಸಾಯಲೇಬೇಕಾದ ಕ್ರಿಮಿ'ಗಳೆಂದು ಭಾವಿಸಿದ್ದು ಅವರ ಕಠೋರ ನೈತಿಕ ನಿಷ್ಠೆ ಹಾಗೂ ಇಂದ್ರಿಯ ಲೋಲುಪತೆಯ ಬಗೆಗಿರುವ ಜುಗುಪ್ಸೆಯ ಪ್ರತೀಕವೆನ್ನಬಹುದು. ಗಾಂಧೀಯವರು ಶತ್ರುವನ್ನಾದರೂ ಪ್ರೀತಿಸು ಎಂಬ ತಮ್ಮ ಅಹಿಂಸಾ ಸಿದ್ಧಾಂತವನ್ನು ಇನ್ನೂ ಪೂರ್ಣ ಪ್ರಮಾಣದಲ್ಲಿ ರೂಪುಗೊಳಿಸುತ್ತಿದ್ದ

ಕಾಲದಲ್ಲಿ ಅಂದರೆ ೧೯೧೭ ರಷ್ಟು ಹಿಂದೆ ಈ ಹೇಳಿಕೆ ನೀಡಿದ್ದು ಎಂದು ರಿಯಾಯಿತಿ ತೋರಿಸಬಹುದು; ಆದರೆ ಈ ಸಮಾಜದ ಚಿರಪರಿಚಿತ ಶೋಷಕರ ವಿರುದ್ಧ ಅವರೆಂದೂ ಇಂಥ ಭಾವನೆಯನ್ನು ವ್ಯಕ್ತಪಡಿಸಿದ್ದಾಗಲಿ, ಈ ಬಗೆಯ ಕಟುವಾದ ಭಾಷೆಯನ್ನು ಬಳಸಿದ್ದಾಗಲಿ ಕಂಡು ಬರುವುದಿಲ್ಲ; ಮಾತ್ರವಲ್ಲದೆ, ಅವರ ಮೇಲಾಗುವ ದೌರ್ಜನ್ಯವನ್ನು ಅವರು ಸಹಿಸುತ್ತಿರಲಿಲ್ಲ. ಆದರೆ ಜನಸದ ಜವಾಬ್ದಾರಿಯನ್ನು ಹೊರಲು ಸಿದ್ಧರಿಲ್ಲದ ಜನರಿಂದ ಹುಟ್ಟಿದ ಈ ಹಸುಳೆಗಳು ನಿಷ್ಪಾಪಿಗಳೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಚಿದರೆ ಗಾಂಧೀಯವರ ಆಲೋಚನೆಗಳ ಹಿಂದೆ ಅಡಗಿರುವ ಕ್ರೌರ್ಯವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ.

ಆಚರಣೆಗೆ ಅಗ್ರಸ್ಥಾನ

ಮಹಿಳೆಯರು ಹಾಗೂ ಅವರ ಸಾಮಾಜಿಕ ಪಾತ್ರ ಕುರಿತು ಗಾಂಧೀಯವರ ವಿಚಾರಗಳು ೧೯ ನೇ ಶತಮಾನದ ಸುಧಾರಕರ ವಿಚಾರಗಳಿಗಿಂತ ತೀರ ಭಿನ್ನವೇನಲ್ಲವಾದರೂ ಕೆಲವೊಂದು ಮುಖ್ಯ ವಿಚಾರಗಳಲ್ಲಿ ಅವರು ಪರಂಪರೆಯಿಂದ ದೂರಸಿಡಿದು ನಿಲ್ಲುತ್ತಾರೆ. ಬಹಳ ಮುಖ್ಯವಾದ ವ್ಯತ್ಯಾಸವೆಂದರೆ ಅವರು ಮಹಿಳೆಯರನ್ನು ಸುಧಾರಣೆಗೆ ಒಳಗಾಗಬೇಕಾದ ವಸ್ತುಗಳೆಂದೂ, ನಮ್ಮ ಉದಾರ ಕಾಳಜಿಯನ್ನು ಬಯಸುವ ಅಸಹಾಯಕ ಜೀವಿಗಳೆಂದೂ ಕಾಣುವುದಿಲ್ಲ. ಇದರ ಬದಲಿಗೆ ಅವರು ಕ್ರಿಯಾಶೀಲರಾದ, ಆತ್ಮಪ್ರಜ್ಞೆಯುಳ್ಳ, ಸಾಮಾಜಿಕ ಬದಲಾವಣೆ ತರಬಲ್ಲ ಶಕ್ತಿಗಳೆಂದು ಭಾವಿಸುತ್ತಾರೆ. ೧೯ ನೇ ಶತಮಾನದ ಸಮಾಜ ಸುಧಾರಕರ ಹಾಗೆ ಭಾರತೀಯ ಸಮಾಜದ ಪುನರ್ನಿರ್ಮಾಣಕ್ಕೆ ಕಾರಣವಾಗುವ ಶಿಕ್ಷಣ ಹಾಗೂ ವಿವಾಹದಂಥ ಆಯ್ದ ಕ್ಷೇತ್ರಗಳಿಗಷ್ಟೇ ಗಾಂಧೀಯವರ ಕಾಳಜಿ ಸೀಮಿತವಾಗಿರಲಿಲ್ಲ. ಅವರು ಪ್ರಧಾನವಾಗಿ ಕ್ರಾಂತಿಕಾರಿ ರೀತಿಯ ಸಾಮಾಜಿಕ ಪುನರ್‌ರಚನೆ ಮಾಡಬಯಸಿದರು. ರಾಷ್ಟ್ರೀಯ

ವಿಮೋಚನೆಗಾಗಿ ಅವರು ಹೂಡಿದ ರಾಜಕೀಯ ಆಂದೋಳನವು ಈ ಗುರಿಸಾಧನೆಯ ಒಂದು ಸಾಧನವಾಗಿದ್ದಿತು. ಸಾಮಾಜಿಕ ಪುನರ್‌ರಚನೆಯಲ್ಲಿ ಮಹಿಳೆಯರು ಪ್ರಧಾನ ಪಾತ್ರವಹಿಸಬಹುದೆಂದು ಅವರು ಭಾವಿಸಿದ್ದರು. ಸಮಾಜದ ಪುನರ್ನಿರ್ಮಾಣದ ಪ್ರಕ್ರಿಯೆಯಲ್ಲಿ ಮಹಿಳೆಯರು ತಮ್ಮನ್ನು ಆವರಿಸಿರುವ ಬಂಧನಗಳಿಂದ ಸ್ವಯಂ ಮುಕ್ತಿ ಪಡೆಯಲು ಸಾಧ್ಯವೆಂದು ಬಗೆದರು.

ಗಾಂಧೀಯವರ ಕಲ್ಪನೆಯ ಹೊಸ ಸಮಾಜವು ಗತಕಾಲದ ಸಮಾಜಕ್ಕಿಂತ ತುಂಬ ಭಿನ್ನವಾದುದು; ಸ್ಥಳೀಯ ಸ್ವಯಂ ನಿರ್ಧಾರ ಅರಾಜಕ ತತ್ವವನ್ನು ಆಧರಿಸಿದ್ದು. ಆದರೂ ಅವರು ಪ್ರತಿಪಾದಿಸಿದ ಮಹಿಳೆಯರ ಪಾತ್ರವು ವಿಭಜನೆಯ ತತ್ವವನ್ನು ಅವಲಂಬಿಸಿದೆ. ಆದರೆ ಐತಿಹಾಸಿಕವಾಗಿ ಈ ತತ್ವವೇ ಸ್ತ್ರೀಯರ ಶೋಷಣೆ ಮತ್ತು ದಬ್ಬಾಳಿಕೆಗೆ ಕಾರಣವಾದ ಮುಖ್ಯ ಸಾಧನವೆಂಬುದನ್ನು ಮರೆಯಲಾಗದು. ಗಾಂಧೀಯವರ ದೃಷ್ಟಿಯಲ್ಲಿ ಮನೆಯೇ ಬಹುತೇಕ ಮಹಿಳೆಯರ ಕಾರ್ಯಚಟುವಟಿಕೆಗಳ ರಂಗ. ಕೇವಲ ಕೆಲವೇ ಕೆಲವು ವಿಶಿಷ್ಟರಾದ ಮಹಿಳೆಯರು ಮಾತ್ರ ಮನೆಯ ಚಟುವಟಿಕೆಗಳ ವಿಸ್ತರಣೆಯಾಗಿ ಮಾನವತೆಯ ಸೇವೆ ಮಾಡಬಹುದು. ಸ್ತ್ರೀ ಪುರುಷರಿಗೆ ಸಮಾನ ಗೌರವ ಹಾಗೂ ಆತ್ಮಸಾಕ್ಷಾತ್ಕಾರಕ್ಕಾಗಿ ಮಹಿಳೆಯರ ಸಂಪೂರ್ಣ ವಿಮೋಚನೆ ಎಂಬ ತತ್ವದಲ್ಲಿ ಗಾಂಧೀಯವರಿಗೆ ನಂಬಿಕೆ ಇತ್ತು. ಆದರೆ ಅವರ ಸಮಾನತೆಯ ಕಲ್ಪನೆಯು ಸಮಾನ ಉದ್ಯೋಗಾವಕಾಶ ಹಾಗೂ ಆರ್ಥಿಕ, ರಾಜಕೀಯ ಅಧಿಕಾರ ಕ್ಷೇತ್ರಕ್ಕೆ ವಿಸ್ತರಿಸಲಿಲ್ಲ.

ಮಹಿಳೆಯರ ಜೀವನದ ನೈತಿಕ ಸ್ಥಿತಿಗತಿಗಳ ಬದಲಾವಣೆ ಹಾಗೂ ಪುರುಷರಿಂದಾಗುವ ಅಧಿಕಾರ ದುರುಪಯೋಗದ ನಿವಾರಣೆಯೇ ಅವರಿಗೆ ಬಹಳ ಮುಖ್ಯವಾಗಿ ಕಂಡಿತು. ಆದರೆ ಅಪಾರವಾದ ಅಧಿಕಾರಕ್ಕೆ ಎಡೆಮಾಡಿಕೊಡುವ ಸ್ತ್ರೀ ಪುರುಷ ಸಂಬಂಧಗಳನ್ನು

ಮೂಲಭೂತವಾಗಿ ಬದಲಿಸಬೇಕೆಂಬುದು ಅವರಿಗೆ ಅಷ್ಟು ಮುಖ್ಯ ಕಾಣಲಿಲ್ಲ. ತಾಯಂದಿರಾಗಿ, ಮಡದಿಯರಾಗಿ, ಸಹೋದರಿಯರಾಗಿ ಸ್ತ್ರೀಯರ ಅಧಿಕಾರವನ್ನು ವಿಸ್ತರಿಸಲು ಅವರು ಯತ್ನಿಸಿದರು. ಆದರೆ ಮಹಿಳೆಯರು ತಮ್ಮ ನೆಲೆಯಲ್ಲೇ ರಾಜಕೀಯ ಅಧಿಕಾರ ಪಡೆಯಬೇಕೆಂಬ ವಿಷಯಕ್ಕೆ ಅವರು ಅಷ್ಟಾಗಿ ಗಮನಹರಿಸಲಿಲ್ಲ. ಗಾಂಧೀಯವರು ಮಹಿಳೆಯರ ವಿರುದ್ಧವಾಗಿರುವ ಎಲ್ಲ ಬಗೆಯ ಕಾನೂನು ಹಾಗೂ ನ್ಯಾಯ ತಾರತಮ್ಯವನ್ನು ನಿವಾರಿಸಲು ಬೆಂಬಲ ನೀಡಿದರೂ ಅವರ ಸಾಮಾಜಿಕ ಪಾತ್ರದಲ್ಲಿ ಆಗಬೇಕಾದ ಕ್ರಾಂತಿಕಾರಿ ಬದಲಾವಣೆಯನ್ನು ಪ್ರತಿಪಾದಿಸಲಿಲ್ಲ.

ಮಹಿಳೆಯರ ಹೋರಾಟಕ್ಕೆ ಗಾಂಧೀಯವರ ದೊಡ್ಡ ಕೊಡುಗೆ ಎಂದರೆ ಅವರು ಅದಕ್ಕೆ ನೈತಿಕತೆಯ ಮುದ್ರೆ ಒತ್ತಿ ಒಂದು ಸತ್ಸಂಪ್ರದಾಯವನ್ನು ಆರಂಭಿಸಿದ್ದು. ಇಂದಿಗೂ ಕೂಡ ಯಾರೇ ಆಗಲಿ ಸಾರ್ವಜನಿಕವಾಗಿ ಧೈರ್ಯದಿಂದ ಮಹಿಳೆಯರ ಮೂಲಭೂತ ಹಕ್ಕುಗಳನ್ನು ವಿರೋಧಿಸಲು ಸಾಧ್ಯವಿಲ್ಲ; ಅವರು ರಾಜಕೀಯದಲ್ಲಿ ಪಾಲ್ಗೊಳ್ಳುವುದನ್ನು ನಿಷೇಧಿಸಲು ಸಾಧ್ಯವಿಲ್ಲ. ಇಂಥ ಒಂದು ಸಾಮಾಜಿಕ, ರಾಜಕೀಯ ಸನ್ನಿವೇಶವನ್ನು ಗಾಂಧೀಯವರು ನಿರ್ಮಾಣ ಮಾಡಿದರು. ಪುರುಷರಿಗೆ 'ಸಮಾನ'ರಾಗಿ ಮಹಿಳೆಯರು ಕೂಡ ರಾಜಕೀಯ ಕ್ಷೇತ್ರ ಪ್ರವೇಶಿಸುವುದಕ್ಕೆ ವಿಶೇಷ ವಿರೋಧ, ಪ್ರತಿಭಟನೆ ಕಂಡುಬರದ ರೀತಿಯಲ್ಲಿ ಅವರ ಹೋರಾಟಕ್ಕೆ ಗಾಂಧೀಯವರು ನೈತಿಕ ಸಮ್ಮತಿ ದೊರೆಕಿಸಿಕೊಟ್ಟರು! ನಗರದ ಮಧ್ಯಮವರ್ಗದ ಕೈಬೆರಳೆಣಿಕೆಯ ಮಹಿಳೆಯರು ರಾಜಕೀಯ ಕ್ಷೇತ್ರ ಪ್ರವೇಶಿಸುವುದಕ್ಕೆ ಪ್ರೋತ್ಸಾಹಿಸುವಂಥ ಸಂಪ್ರದಾಯ ರೂಢಿಗೆ ಬಂದಿತು. ಇದಲ್ಲದೆ ಪುರುಷ ಪ್ರಧಾನವಾದ ಚೌಕಟ್ಟಿಗೆ ಧಕ್ಕೆ ಬಾರದ ರೀತಿಯಲ್ಲಿ ಅದನ್ನು ವಿಶೇಷವಾಗಿ ಪ್ರಶ್ನಿಸದ ರೀತಿಯಲ್ಲಿ ಕೆಲವು ಮಹಿಳಾ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬಹುದಾದ ಆಂದೋಳನವನ್ನು ರೂಪಿಸಲಾಯಿತು.

ಕ್ರಮೇಣ ಈ ಸಮ್ಮತಿ 'ನಾಮಮಾತ್ರದ ಪ್ರಾತಿನಿಧ್ಯ'ವಾಗಿ ಪರಿಣಮಿಸಿತು. ಇದರಿಂದ ನಗರದ ಸುಶಿಕ್ಷಿತ ಮಧ್ಯಮವರ್ಗದ ಕೆಲವು ಮಹಿಳೆಯರಿಗೆ ಮಾತ್ರ ಲಾಭವಾಯಿತೇ ಹೊರತು ಒಟ್ಟು ಸ್ತ್ರೀ ಸಮುದಾಯದ ಕೂಗಿಗೆ ಯಾವುದೇ ಬೆಲೆ ಬರಲಿಲ್ಲ. ಇದಲ್ಲದೆ ಯಾವುದೇ ಹಂತದಲ್ಲೂ ಅದರಲ್ಲೂ ಮುಖ್ಯವಾಗಿ ಗ್ರಾಮಮಟ್ಟದಲ್ಲಿ ಈ ಮಹಿಳೆಯರ ಪಾಲಿಗೆ ರಾಜಕೀಯ ಅಧಿಕಾರ ಬಲು ದೂರ ಉಳಿಯಿತು.

ಪಾರ್ಲಿಮೆಂಟಿನಲ್ಲಿ ಒಟ್ಟು ಸ್ಥಾನಗಳಲ್ಲಿ ಶೇ. ೫ ರಷ್ಟು ಸ್ಥಾನಗಳಿಗಿಂತ ಹೆಚ್ಚಿನ ಪ್ರಾತಿನಿಧ್ಯ ಮಹಿಳೆಯರಿಗೆ ಎಂದೂ ದೊರೆಯಲಿಲ್ಲ. ಮಾತ್ರವಲ್ಲದೆ, ಈ ಪ್ರಾತಿನಿಧ್ಯ ದಿನೇ ದಿನೇ ಕುಸಿಯುತ್ತಿದ್ದು ಸಧ್ಯ ಇದು ಶೇ. ೩ ರ ಪ್ರಮಾಣದಲ್ಲಿದೆ. ದೇಶದ ಅನೇಕ ಕಡೆಗಳಲ್ಲಿ ಗ್ರಾಮಮಟ್ಟದಲ್ಲಿ ಮಹಿಳೆಯರಿಗೆ 'ಪಂಚಾಯತ್'ಗಳು ಹಾಗೂ ಇನ್ನಿತರ ಅನೌಪಚಾರಿಕ ರಾಜಕೀಯ ಅಧಿಕಾರದ ಸಂಸ್ಥೆಗಳಲ್ಲಿ ಭಾಗ ವಹಿಸುವ ಅವಕಾಶಗಳು ದೊರೆಯುತ್ತಿಲ್ಲ. ಸಮಕಾಲೀನ ರಾಜಕೀಯ ಸಂಸ್ಕೃತಿಯಲ್ಲಿ, ಕೆಳಗಿನ ಹಂತದಲ್ಲಿ ಯಾವುದೇ ನಿಜವಾದ ಬದಲಾವಣೆಯನ್ನುಂಟು ಮಾಡದೆ ಉನ್ನತ ಹಂತದಲ್ಲಿ ಮಹಿಳೆಯರಿಗೆ 'ನಾಮಮಾತ್ರದ ಸಾಂಕೇತಿಕ' ಪ್ರಾತಿನಿಧ್ಯ ನೀಡುವುದೇ ಗಾಂಧೀಯವರ ಪರಂಪರೆ ಎಂದು ವಿಕೃತವಾಗಿ ಅರ್ಥೈಸಲಾಗಿದೆ. ಹೀಗೆ ಭಾರತೀಯ ಮಹಿಳೆಯರಿಗೆ ಎಲ್ಲ ರಂಗಗಳಲ್ಲಿ ಸಮಾನ ಹಕ್ಕುಗಳಿವೆ ಎಂದು ಹೇಳಿ ಪರಿಸ್ಥಿತಿ ಹದಗೆಟ್ಟಿದ್ದರೆ ಅದಕ್ಕೆ ಮಹಿಳೆಯರು ತಮ್ಮ ಹಕ್ಕುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದಿರುವುದೇ ಕಾರಣ ಎಂಬ ಮಿಥ್ಯೆ ಪ್ರಬಲವಾಗಿದೆ.

ಮಹಿಳೆಯರ ಹಕ್ಕುಗಳ ಬಗ್ಗೆ ಗಾಂಧೀಯವರು ವಿಶೇಷ ಆಸಕ್ತಿ ವಹಿಸಿದ್ದರು. ಆದರೂ ಮಹಿಳೆಯರು ತಾವೇ ಒಂದು ರಾಜಕೀಯ ಶಕ್ತಿಯಾಗಿ ರೂಪುಗೊಂಡು ತಮ್ಮ ಸಮಸ್ಯೆಗಳ ಬಗ್ಗೆ ಹೋರಾಡುವ

ದನ್ನು ಅವರು ಪ್ರೋತ್ಸಾಹಿಸಲಿಲ್ಲ. ನಿಸ್ವಾರ್ಥ ಸಮಾಜಸೇವಕರಂತೆ ಅವರು ರಾಷ್ಟ್ರೀಯ ಸಂಘರ್ಷದಲ್ಲಿ ತಮ್ಮ ಬಿಡುಗಡೆಯನ್ನು ಕಾಣ ಬೇಕೆಂದೂ ಆಶಿಸಿದರು. ಇದರ ಪರಿಣಾಮವಾಗಿ ಕಾಂಗ್ರೆಸ್ ಪಕ್ಷದೊಳಗೆ ಮಹಿಳೆಯರು ಎಂದೂ ನಿಜವಾದ ರಾಜಕೀಯ ಅಧಿಕಾರ ಹೊಂದಲು ಶಕ್ಯವಾಗಲಿಲ್ಲ. ಸಂಘಟಿತ ಮಹಿಳೆಯರ ಕ್ಷೇತ್ರವನ್ನು ಪ್ರತಿನಿಧಿಸುವವರಲ್ಲ ಎಂಬ ಕಾರಣಕ್ಕಾಗಿ ಪ್ರಮುಖ ಮಹಿಳಾ ಧುರೀಣರನ್ನು ಗಂಭೀರ ನಿರ್ಣಯ ಕೈಗೊಳ್ಳುವ ಪ್ರಸಂಗಗಳಲ್ಲಿ ಕಾಂಗ್ರೆಸ್ ಪಕ್ಷ ವಿಶ್ವಾಸಕ್ಕೇ ತೆಗೆದುಕೊಳ್ಳಲಿಲ್ಲ.

ರಾಷ್ಟ್ರೀಯ ಆಂದೋಳನದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿದರೂ ಕೂಡ ನಿರ್ಣಯ ಕೈಗೊಳ್ಳುವ ವೇಳೆ ಅವರಿಗೆ ಗಮನಾರ್ಹವಾದ ಪಾತ್ರ ವಹಿಸಲಾಗಲಿಲ್ಲ. ತಮ್ಮ ನಿರಂತರ ಸೇವೆಯ ಮೂಲಕ ಆಶ್ರಮ ನಡೆಸುವಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸಿದರು. ತುಂಬ ಅಪರೂಪದ ಹಾಗೂ ವಿಶೇಷ ಸಂದರ್ಭಗಳಲ್ಲಿ ಮಾತ್ರ ಮಹಿಳೆಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳ ಲಾಗುತ್ತಿತ್ತು.

ಇದಕ್ಕೆ ಸ್ವಲ್ಪಮಟ್ಟಿಗೆ ಗಾಂಧೀಯವರ ದೃಷ್ಟಿಕೋನವೇ ಕಾರಣ. ರಾಜಕೀಯ ನಿರ್ಧಾರ ಕೈಗೊಳ್ಳುವಲ್ಲಿ ಮಹಿಳೆಯರು ಗಮನಾರ್ಹವಾದ ಪಾತ್ರವನ್ನು ನಿರ್ವಹಿಸಬೇಕಾಗಿಲ್ಲ; ಪ್ರದರ್ಶನ ಗಳಲ್ಲಿ ಪಾಲ್ಗೊಳ್ಳುವಿಕೆ, ಬಹಿಷ್ಕಾರ, ಸತ್ಯಾಗ್ರಹಿಗಳಾಗುವುದು ಇವೇ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಜನರ ವಿಚಾರ ಮತ್ತು ವರ್ತನೆಯನ್ನು ಬದಲಾಯಿಸುವ ಕೆಲಸವನ್ನು ಮಾತ್ರ ಮಹಿಳೆಯರು ಮಾಡಬೇಕೆಂಬುದು ಅವರ ವಿಚಾರವಾಗಿತ್ತು. ಮೇಲಾಗಿ, ಆಂದೋಳನದಲ್ಲೂ ಸಮಾಜ ಪರಿವರ್ತನೆ ಹಾಗೂ ಸಮಾಜಸೇವೆ ಯಂಥ 'ರಚನಾತ್ಮಕ' ಕಾರ್ಯಕ್ರಮಗಳಲ್ಲಿ ಹೆಚ್ಚು ಕ್ರಿಯಾಶೀಲರಾಗಿ ಭಾಗವಹಿಸುವಂತೆ ಮಹಿಳೆಯರನ್ನು ಪ್ರೋತ್ಸಾಹಿಸುತ್ತಿದ್ದರು.

ಅಧಿಕಾರ ಮತ್ತು ರಾಜಕಾರಣದ ಕ್ಷೇತ್ರವು ಭ್ರಷ್ಟತೆಯಿಂದ ಕೊಂಡಿದ್ದು, ನಿಷ್ಕರುಣವಾದದ್ದು. ಆದ್ದರಿಂದ ಅದು ಮಹಿಳೆಯರಿಗೆ ಹೇಳಿಸಿದ್ದಲ್ಲ ಎಂದು ಗಾಂಧೀಯವರು ಭಾವಿಸಿದ್ದರು. ಮಹಿಳೆಯರು ಅಧಿಕಾರಕ್ಕಾಗಿ ನಡೆಯುವ ಹೋರಾಟದಲ್ಲಿ ಧುಮುಕದೆ ತಮ್ಮ ಮೌನವಾದ, ಅಹಿಂಸಾತ್ಮಕವಾದ ಶಕ್ತಿಯಿಂದ ಜನರ ಹೃದಯವನ್ನು ಗೆದ್ದು ಅಂದೋಳನಕ್ಕೆ ನೈತಿಕ ಕುಮ್ಮಕ್ಕು ನೀಡಬೇಕೆಂದು ಅವರು ಬಯಸಿದರು.

ಹೋರಾಟಗಳಲ್ಲಿ ಮತ್ತು ಚಳುವಳಿಗಳಲ್ಲಿ ಮಹಿಳೆಯರ ಉಪಸ್ಥಿತಿಯು ಶಿಸ್ತಿನ ವಾತಾವರಣ ಮೂಡಿಸಬಹುದೆಂದು ಭಾವಿಸಲಾಗಿತ್ತು. ಪಿಕೆಟಿಂಗ್‌ಗಳಲ್ಲಿ ಪುರುಷರು ಹಿಂಸಾತ್ಮಕವಾಗಿ ವರ್ತಿಸಬಹುದು; ಅವರನ್ನು ನಿಯಂತ್ರಿಸುವುದು ಕಷ್ಟ. ಆದ್ದರಿಂದ ಪಿಕೆಟಿಂಗ್‌ಗಳ ನೇತೃತ್ವವನ್ನು ಮಹಿಳೆಯರೇ ವಹಿಸಿಕೊಳ್ಳಬೇಕೆಂದು ಗಾಂಧೀಯವರು ಬಯಸಿದರು. ಇದಲ್ಲದೆ ಮಹಿಳಾ ಮತಪ್ರದರ್ಶಕರ ಮೇಲೆ ಅಧಿಕಾರಶಾಹಿಯು ದೌರ್ಜನ್ಯ ನಡೆಸುವ ಪ್ರಕರಣಗಳ ಸಂಭವನೀಯತೆ ಕಡಮೆ ಎಂದು ಅವರು ಭಾವಿಸಿದ್ದರು. ಹೀಗೆ ಒಂದು ಕಡೆ ಮಹಿಳೆಯರು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವುದರಿಂದ ಅಂದೋಳನವು ಅಹಿಂಸಾತ್ಮಕವಾಗಿ ನಡೆಯಬಹುದಾದರೆ ಇನ್ನೊಂದೆಡೆ, ಅಹಿಂಸೆಗೆ ನೀಡುವ ಒತ್ತಿನಿಂದಾಗಿ ಮಹಿಳೆಯರು ಅಂದೋಳನದಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಲು ಸಾಧ್ಯ ಆಯಿತು.

ವಾಸ್ತವವಾಗಿ ಗಾಂಧೀಯವರ ಅಹಿಂಸೆಯು ಶಕ್ತಿಶಾಲಿಯಾದ ಕ್ರಾಂತಿಕಾರಿ ಅಸ್ತ್ರ. ಇದರಿಂದಾಗಿ ಅಪಾರ ಸಂಖ್ಯೆಯ ಜನ ಅದರಲ್ಲೂ ಮುಖ್ಯವಾಗಿ ಮಹಿಳೆಯರು ಅಂದೋಳನದಲ್ಲಿ ಪಾಲ್ಗೊಳ್ಳಬಹುದಾದ ಒಂದು ಸನ್ನಿವೇಶ ನಿರ್ಮಾಣವಾಯಿತು. ಅಲ್ಲದೆ ಅಂದೋಳನದಲ್ಲಿ ಅವರೆಲ್ಲರಿಗೂ ಒಂದು ಅರ್ಥಪೂರ್ಣವಾದ ಸ್ಥಾನ

ದೊರೆತಂತಾಯಿತು. ಶಸ್ತ್ರಾಸ್ತ್ರಗಳ ಬಳಕೆ ಹಾಗೂ ದೇಹಶಕ್ತಿಯ ಬಳಕೆಯಲ್ಲಿ ಸ್ತ್ರೀಯರಿಗಿಂತ ಪುರುಷರೇ ಮೇಲು. ಆದರೆ ಸ್ತ್ರೀಯರು ಯಾವುದೇ ಬಗೆಯ ಹಿಂಸಾಚಾರಕ್ಕೆ ಕೈಹಾಕದೆ ತಮ್ಮ ಧೈರ್ಯ ಸ್ಥೈರ್ಯಗಳನ್ನು ಪ್ರದರ್ಶಿಸುವುದು ಸುಲಭ, ಐತಿಹಾಸಿಕವಾಗಿ ಕೂಡ, ವಿನಾಶಕಾರಿ ಅಸ್ತ್ರಗಳ ಮತ್ತು ವ್ಯವಸ್ಥಿತವಾದ ಸಾಮಾಜಿಕ ಹಿಂಸೆಯ ಏಕಸ್ವಾಮ್ಯ ಪುರುಷರದ್ದೇ ಆಗಿದೆ. ಸ್ತ್ರೀಯರ ಶಕ್ತಿಹೀನತೆ ಮತ್ತು ಅಧಿಕಾರಶೂನ್ಯತೆಗೆ ಕಾರಣವಾದ ಈ ಅಂಶವನ್ನು ಎತ್ತಿಕೊಂಡ ಗಾಂಧೀಯವರು ರಾಜಕೀಯ ಕಾರ್ಯಾಚರಣೆಗೆ ತಕ್ಕುದಾದ ಒಂದು ಅಸ್ತ್ರವನ್ನು ರೂಪಿಸಿದರು. ಅವರ ಮಾದರಿಯ 'ಸತ್ಯಾಗ್ರಹ'ದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುರುಷರಿಗಿಂತಲೂ ಚೆನ್ನಾಗಿ ಧುರೀಣತ್ವ ವಹಿಸಲು ಸಾಧ್ಯವಾಯಿತು. ಇಷ್ಟಾದರೂ ಮಹಿಳೆ 'ತ್ಯಾಗದ ಪ್ರತಿಮೂರ್ತಿ' ಎಂಬ ಸಂಕೇತವನ್ನು ಗಾಂಧೀಯವರು ಆದರ್ಶೀಕರಿಸಿ ಹಾಡಿ – ಹೊಗಳಿದ್ದರಿಂದಾಗಿ ಮಹಿಳೆ ಎಂದರೆ ಪುರುಷರು ನಿರ್ದೇಶಿಸುವ ಸಾಮಾಜಿಕ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ನಿಸ್ವಾರ್ಥವಾಗಿ ದುಡಿಯುವ ಸಂಗಾತಿ ಎಂಬ ಶೋಷಣಾತ್ಮಕ ಪರಿಕಲ್ಪನೆಗೆ ಇನ್ನಷ್ಟು ಬಲ ಬಂದಿತು. ನೋವು ನುಂಗಿ ಆ ನೋವಿನ ಮೂಲಕವೇ ಶಕ್ತಿ ಪಡೆಯುವ ಸೀತೆಯ ಪರಂಪರೆಯ ಮುಂದುವರಿಕೆಗೆ ಇನ್ನಷ್ಟು ಅವಕಾಶ ದೊರೆಯಿತು.

ಮಹಿಳೆಯರು ಈ ಸಮಾಜದ ಅಂತರ್‌ನಿಹಿತ ನೈತಿಕ ಬಲ ಎಂಬ ವಿಚಾರಕ್ಕೆ ಪೂರಕವಾಗಿ ತಮ್ಮ ಲೈಂಗಿಕ ಅಗತ್ಯಗಳನ್ನು ಮೀರಿ ನಿಲ್ಲುವ ಮೂಲಕ ತ್ಯಾಗದ ಪ್ರತೀಕಗಳಾಗುವ ಕಲ್ಪನೆ ಮುಂದುವರಿದರೆ ಅವರು "ಯಾವ ಗಂಡಸಿಗೂ ದಾಸಿ"ಯಾಗಬೇಕಾಗಿಲ್ಲ. ಸ್ತ್ರೀಯರ ಲೈಂಗಿಕ ಜೀವನವು ಗಾಂಧೀಯವರಿಗೆ ಬಹಳ ಮುಖ್ಯವಾಗಿ ಕಾಣಲಿಲ್ಲ. ಪುರುಷರ ಲೈಂಗಿಕ ಅಗತ್ಯಗಳಿಗೆ ಪೂರಕವಾಗಿ ಸ್ತ್ರೀಯರ ಲೈಂಗಿಕ

ಅಗತ್ಯಗಳಿರಲು ಸಾಧ್ಯ ಎಂದು ಅವರು ತಿಳಿದಂತಿತ್ತು. ಪುರುಷರು ಕಾಮುಕತನದಿಂದ 'ಪಶು ಸಹಜವಾಗಿ' ವರ್ತಿಸಿದಾಗ ಸ್ತ್ರೀಯರು "ಒಲ್ಲೆ" ಎನ್ನಬೇಕು. ಉತ್ತಮ ಮನುಷ್ಯರಾಗಲು ಗಂಡಸರಿಗೆ ಸಹಾಯ ಮಾಡುವುದೇ ಇದರ ಉದ್ದೇಶ. ಮಹಿಳೆಯರು ಎಲ್ಲ ಬಗೆಯ ಲೈಂಗಿಕ ಸಂಪರ್ಕವನ್ನು ಪರಿತ್ಯಾಗಮಾಡಿ ಗಂಡಸರು ತಮ್ಮ ಶಕ್ತಿ ಸಾಮರ್ಥ್ಯಗಳೆಲ್ಲವನ್ನೂ ಘನವಾದ ಉದ್ದೇಶಗಳಿಗಾಗಿ ಮುಡಿಪಾಗಿಡುವಂತೆ ನೋಡಿಕೊಂಡರೆ ಅತ್ಯುತ್ತಮ. ಈ ಎಲ್ಲದರಲ್ಲಿ ಮಹಿಳೆಯರ ವೈಯಕ್ತಿಕವಾದ ಲೈಂಗಿಕ ಕಾಮನೆಗಳ ಅಭಿವ್ಯಕ್ತಿಗೆ ಅವಕಾಶವಿಲ್ಲ.

ಬಾಹ್ಯ ಪ್ರಪಂಚದ ವ್ಯವಹಾರಗಳಲ್ಲಿ ಪುರುಷರು ಪ್ರಬಲರಾಗಿರುವುದರಿಂದ ಗೃಹಕೃತ್ಯಗಳನ್ನು ಸ್ತ್ರೀಯರೇ ನೋಡಿಕೊಳ್ಳಬೇಕೆಂದು ಗಾಂಧೀಯವರು ಒತ್ತಿಹೇಳಿದರಾದರೂ ಆಚರಣೆಯಲ್ಲಿ ಮಹಿಳೆಯರು ಈ ಮಾದರಿಗಿಂತ ಭಿನ್ನವಾಗಿ ನಡೆದುಕೊಳ್ಳಲು ಪ್ರೋತ್ಸಾಹಿಸಿದರು. ಅಹಿಂಸಾತ್ಮಕವಾದ ಸತ್ಯಾಗ್ರಹದ ಹಿರಿಮೆ ಇರುವುದು ಅದು ಒಂದು ಹೋರಾಟದ ಅಸ್ತ್ರವೆಂಬ ಅವರ ನಂಬಿಕೆಯಲ್ಲಿ ಎದ್ದುಕಾಣುತ್ತದೆ. ಈ ಅಸ್ತ್ರದ ಬಳಕೆಯನ್ನು ತಾನು ತನ್ನ ಪತ್ನಿಯಿಂದ ಕಲಿತೆನೆಂದೂ ಇದು ಮಹಿಳೆಯರ ಪ್ರತಿರೋಧದ ಒಂದು ರೂಪವೆಂದೂ ಅವರು ಮತ್ತೆ ಮತ್ತೆ ಹೇಳುತ್ತಿದ್ದರು. ಅದು ವರೆಗೆ ಈ ಬಗೆಯ ಪ್ರತಿರೋಧವು ಪುರುಷಸಹಜವಲ್ಲವೆಂದು ಭಾವಿಸಲಾಗಿದ್ದಿತು. ಹಿಂಸೆಯಲ್ಲಿ ಪೌರುಷವನ್ನು ಗುರುತಿಸಿದ ಗಾಂಧೀಯವರು ಅದು ಮಾನವತೆಯನ್ನು ವಿನಾಶದ ಅಂಚಿಗೆ ತಳ್ಳುವುದನ್ನು ಮನಗಂಡರು. ಸ್ತ್ರೀಯರ ಪ್ರಶಾಂತ ಮೌನದಲ್ಲಿರುವ ಶಕ್ತಿಯನ್ನು ಹಿಂಸೆಗೆ ಇಳಿಸದೆ ಅನ್ಯಾಯವನ್ನು ಪ್ರತಿಭಟಿಸುವ ಗುಣವನ್ನು ಪುರುಷರು ಅನುಸರಿಸುವ ಅಗತ್ಯವಿದೆ.

ಇದೇ ರೀತಿ ಹೆಂಗಸರ ಉದ್ಯೋಗವೆಂದು ಪರಿಗಣಿಸಲಾದ

ನೂಲುವಿಕೆಯನ್ನು ಪ್ರತಿಯೊಬ್ಬ ಕಾಂಗ್ರೆಸಿಗನೂ ಕೈಗೊಳ್ಳಬೇಕೆಂದು ಗಾಂಧೀಯುವರು ಆಗ್ರಹಪಡಿಸಿದರು. ಕಾಂಗ್ರೆಸಿಗನಾಗಲು ನೂಲುವಿಕೆಯು ಒಂದು ಅವಶ್ಯಕ ಅರ್ಹತೆ ಎಂದು ಅವರು ಹೇಳಿದರು. ನೂಲುವುದರಿಂದ ಪುರುಷ ಶಕ್ತಿಯು ಅಪವ್ಯಯು ವಾಗುತ್ತದೆಂದು ಕಾಂಗ್ರೆಸಿಗರು ವಿರೋಧಿಸಿದರೂ ಗಾಂಧೀಯುವರು ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಇದು ಶೋಷಣಾತ್ಮಕವಾದ ಪ್ರತಿರೂಪಗಳನ್ನು ಮುರಿಯುವ ಒಂದು ಕ್ರಾಂತಿಕಾರಿ ಹೆಜ್ಜೆ; ಪುರುಷರು ತಮ್ಮ 'ಪೌರುಷ' ಪ್ರದರ್ಶಿಸದಂತೆ ತಡೆಯುವ ಸಾಧನ. ಹಿಂಸಾನಿರತ ಸಮಾಜವನ್ನು ಪರಿಶುದ್ಧಗೊಳಿಸುವ ಪ್ರಮುಖ ಹೆಜ್ಜೆ.

ಸಾಮಾಜಿಕ ಜೀವನದಲ್ಲಿ ಮಹಿಳೆಯರಿಗೆ ಗೌರವ ತಂದು ಕೊಡುವ, ಸಾಮಾಜಿಕ–ರಾಜಕೀಯ ಜೀವನದಲ್ಲಿ ಅವರು ಪಾಲ್ಗೊಳ್ಳಬಾರದೆಂಬ ಪೂರ್ವಾಗ್ರಹವನ್ನು ತೊಡೆಯುವ, ಅವರ ಸಮಸ್ಯೆಗಳ ಬಗೆಗೆ ಸಹಾನುಭೂತಿಪರವಾದ ಅರಿವು ಮೂಡಿಸುವ ಗಾಂಧೀಯವರ ಕ್ರಿಯೆಯ ಪರಿಣಾಮಗಳು ಸಮಾಜದಲ್ಲಿ ಮಹಿಳೆಯರ ಸ್ಥಾನ ಹಾಗೂ ಪಾತ್ರದ ಬಗೆಗೆ ಅವರೇ ಉದ್ದಕ್ಕೂ ಪ್ರತಿಪಾದಿಸುತ್ತ ಬಂದ ವಿಚಾರ ಹಾಗೂ ಘೋಷಣೆಗಳನ್ನು ಮೀರಿ ನಿಲ್ಲುತ್ತವೆ.

ಉದ್ಧರಣಗಳು

ಇಲ್ಲಿ ಸೂಚಿಸಿರುವ ಉದ್ಧರಣಗಳನ್ನು ಬಿಟ್ಟು ಉಳಿದುವೆಲ್ಲ ಗಾಂಧೀ ಅವರು ವಿವಿಧ ಸಂದರ್ಭಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಗಳೇ ಆಗಿವೆ. ಅವನ್ನು ಕೇವಲ ಉದ್ಧರಣ ಚಿಹ್ನೆಗಳಲ್ಲಿ ಕೊಡಲಾಗಿದೆ.

1. "Gandhi–A Study In Revolution"
–Geoffrey Ashe,
Asia Publishing House, 1968, P 122.
2. ...... " ...... P. 295
3. "Indian Womanhood Today"
–Margaret E. Cousins
Kitabistan, Series No.5,
Allahabad, P. 64.
4. ...... " ...... P. 63
5. ...... " ...... P. 65
6. ...... " ...... P. 64
7. Geoffrey Ashe, P. 298
8. Margaret. E. Cousins ನಿಂದ ಉದ್ಧೃತ P. 41–2
9. Geoffrey Ashe – P. 242
10. "Women Behind Mahatma Gandhi"
–Elianar Martin
Max Reinhardt, London 1954 P. 107
11. ...... do ......

12. "Tolstoy and Gandhi" P. 163-165
Martin Green -
13. "Gandhi's Truth" P. 120
Eric Erikson
Faber & Faber, London 1970
14. Geoffrey Ashe-P. 11-12
15. The Women In Gandhi's Life"
-Eleanor Morton-P. 148
Dodd, Mead and Co. New York, 1953,
16. "My Days with Gandhi"
-N.K. Bose P. 174-175
Nishana, Calcutta

ಗ್ರಂಥಋಣ

1. The Collected Works of Mahatma Gandhi–Navajivan Trust, Ahmedabad, 1982.
2. "Mahatma" – D. G. Tendulkar, Publications Division.
3. Gandhi : A Study in Revolution –by Geoffrey Ashe–Asia Publishing House.
4. 'An Autobiography' – M. K. Gandhi Navajivan Trust, Ahmedabad 1983.
5. 'The Role of Women'–by M.K. Gandhi Ed: Anand Hingorani, Bharatiya Vidya Bhavan, Bombay.
6. 'Indian Womanhood Today' –by Margaret E. Cousins, Kitabistan, Allahabad.
7. "Women Behind Mahatma" - –by Eleanor Morton Max Reinhardt, London.
8. Bapu's Letters to Mira – Navajivan Publishing House,

Ahmedabad.

9. Bapu Ki Jhankian
by Kaka Saheb Kalelkar,
Navajivan Publishing House,
Ahmedabad.

10. Diet and Diet Reform by M. K. Gandhi,
- Do - Ahmedabad.

11. 'Gandhi's Truth' - Eric Erikson
- Faber & Faber London.

12. Birth Control- By M. K. Gandhi
-Ed: Anand T. Hingorani,
Bharatiya Vidya Bhavan, Bombay.

13. "The Women in Gandhi's Life" -
- Eleanor Morton, Dodd Mead & Co.
Newyork.

14. My Days With M. K. Gandhi
by N. K. Bose - Nishana, Calcutta.

15. Satyagraha in South Africa-
by M. K. Gandhi,
Navajivan PublishingHouse,
Ahmedabad.

16. Various issues of 'Navajivan',
'Young India,' 'Harijan' and
'Bombay Chronical.'